# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–39 ಶೋಭಕೃತ್ ನಾಮ ಸಂವತ್ಸರ, ಭಾದ್ರಪದ – ಆಶ್ವಯುಜ, ಅಕ್ಟೋಬರ್ – 2023, ಸಂಚಿಕೆ–8, ಪುಟಗಳು–40 ಬೆಲೆ ರೂ.15/–

## ದಾವಣಗೆರೆಯಲ್ಲಿ ಎರಡನೇ ಕಾರ್ಯಕಾರಿಣಿ ಸಭೆ






## ರಾಜ್ಯ – ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ



ಉದ್ಘಾಟನೆ



ವಿಪ್ರ ವಾಣಿಜ್ಯ ರತ್ನ ಪ್ರಶಸ್ತಿ

## ಶತಕೋಟಿ ಶ್ರೀ ರಾಮ ತಾರಕ ನಾಮ ಜಪ ಯಜ್ಞ ಆರಂಭ







# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಶ್ರಯದಲ್ಲಿ
# ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗ

## ನಾಡಿನ ಮಠಾಧೀಶ್ವರರ ಪೂರ್ಣಾಶೀರ್ವಾದ

ಸಹಸ್ರಮಾನದ ಮಹತ್‌ಕಾರ್ಯವಾದ ದಿನಾಂಕ 22-01-2024ರಂದು ಅಯೋಧ್ಯಯಲ್ಲಿ ಶ್ರೀರಾಮ ಮೂರ್ತಿಯ ಪುನಃ ಪ್ರತಿಷ್ಠಾಪನೆ ಹಾಗೂ ಶ್ರೀ ರಾಮಮಂದಿರದ ಅನಾವರಣದ ಅಂಗವಾಗಿ ಮಹಾಸಭೆಯ ವತಿಯಿಂದ ನಡೆಯಲಿರುವ ಶ್ರೀ ರಾಮತಾರಕ ನಾಮ ಜಪಯಜ್ಞ ಹಾಗೂ ರಾಮತಾರಕ ಮಹಾಯಾಗವು ಅತ್ಯಂತ ಪುಣ್ಯದ ಕಾರ್ಯವಾಗಿದೆ. ಜಾತಿ, ಮತ, ಪಂಥ, ಭೇದವಿಲ್ಲದ ಸರ್ವಜನಾಂಗದವರನ್ನು ಒಳಗೊಂಡು ನಡೆಯುವ ರಾಮನಾಮ ಜಪಯಜ್ಞವು ಸಮಸ್ತ ಮಾನವ ಕುಲಕ್ಕೆ ಕಲ್ಯಾಣವನ್ನುಂಟುಮಾಡುವ ಕಾರ್ಯವಾಗಿದೆ. ಇಂತಹ ಪವಿತ್ರ ಕಾರ್ಯವನ್ನು ಸಂಕಲ್ಪಿಸಿರುವ ಮಾಹಸಭೆಯು ಅತ್ಯಂತ ಸ್ತುತ್ಯಾರ್ಹ ಹಾಗೂ ಶ್ರೇಷ್ಠ ಕಾರ್ಯವನ್ನು ಹಮ್ಮಿಕೊಂಡಿದೆ. ಸರ್ವರು ಶ್ರದ್ಧಾ-ಭಕ್ತಿಯಿಂದ ಭಾರತೀಯರೆಲ್ಲರ ಆರಾಧ್ಯ ದೈವ ಶ್ರೀರಾಮನ ಜಪದಲ್ಲಿ ಪಾಲ್ಗೊಂಡು ಶ್ರೀರಾಮನ ಕೃಪೆಗೆ ಪಾತ್ರರಾಗಿ ತನ್ಮೂಲಕ ದೇಶಕ್ಕೂ, ಸನಾತನ ಧರ್ಮಕ್ಕೂ ಒಳಿತನ್ನು ಮಾಡಲಿ ಎಂದು ಶ್ರೀರಾಮನಲ್ಲಿ ಪ್ರಾರ್ಥಿಸಿ ಪೂರ್ಣಾಶೀರ್ವಾದೊಂದಿಗೆ ಅನುಗ್ರಹ ಪೂರ್ವಕ ಶುಭ ಸಂದೇಶಗಳನ್ನು ನಾಡಿನ ಯತಿವರೇಣ್ಯರು ನೀಡಿ ಹರಸಿರುತ್ತಾರೆ.



ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು
ಶ್ರೀ ಶೃಂಗೇರಿ ಶಾರದಾ ಪೀಠ



ಶ್ರೀ ಶ್ರೀ ವಿಶ್ವಪ್ರಸನ್ನ ಶ್ರೀಪಾದಂಗಳು
ಪೇಜಾವರ ಮಠ



ಶ್ರೀ ಶ್ರೀ ಸತ್ಯಾತ್ಮತೀರ್ಥರು
ಉತ್ತರಾದಿ ಮಠ



ಶ್ರೀ ಶ್ರೀ ಸುಬುಧೇಂದ್ರ ತೀರ್ಥರು
ಮಂತ್ರಾಲಯ



ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿಗಳು
ಶ್ರೀ ಹರಿಹರಪುರ ಮಠ



ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಯಸ್ತಂತೂಮಪಾದಾಯ ತುರೀಮಾತ್ರ ಪರಿಗ್ರಹಾತ್ ।**
**ಪಟಂಕರ್ತುಂ ಸಮೀಹೇತ ಸ ಹನ್ಸಾದ್ ವ್ಯೋಮಮುಷ್ಟಿಭಿಃ ॥**

**“ಯಾರು ದಾರಗಳನ್ನು ಸಮರ್ಪಕವಾಗಿ ಜೋಡಿಸಿಕೊಳ್ಳದೆ ಬರೀ ಲಾಳಿಯನ್ನು ಮಾತ್ರ ಬಳಸಿ ಬಟ್ಟೆಯನ್ನು ನೇಯಲು ಇಷ್ಟಪಡುತ್ತಾನೋ, ಅವನು ಮುಷ್ಟಿಯಿಂದ ಆಕಾಶವನ್ನು ಗುದ್ದಿದಂತೆ.”**

ಮನುಷ್ಯ ಪ್ರಯತ್ನಗಳು ವಿಫಲಗೊಳ್ಳುವ ಕಾರಣಗಳನ್ನು ಮೇಲ್ಕಂಡ ತಂತ್ರ ವಾರ್ತಕದ ಶ್ಲೋಕವು ದೃಷ್ಟಾಂತದೊಂದಿಗೆ ವಿವರಿಸುತ್ತದೆ. ಯಾವುದೇ ಕೆಲಸವನ್ನು ಕೈಗೊಳ್ಳುವ ಮೊದಲು ಚೆನ್ನಾಗಿ ಆಲೋಚಿಸಬೇಕು. ಕೆಲವು ಬಾರಿ ಯೋಚಿಸದೇ ದಿಢೀರನೇ ಕೈಗೊಳ್ಳುವ ಕೆಲಸಗಳು ವಿಫಲಗೊಳ್ಳವುದರ ಜೊತೆಗೆ ಆಪತ್ತನ್ನು ತಂದಿಡುತ್ತವೆ. ತಾಳ್ಮೆಯಿಂದ ಯೋಚಿಸಿದಾಗ, ಈ ಕೆಲಸಗಳು ದೋಷಪೂರ್ಣವಾದವು ಎಂದು ಮನದಟ್ಟಾಗುತ್ತದೆ. ಕೆಲಸಗಳ ವಿಷಯದಲ್ಲಿ ಅತೀ ನಿಧಾನತೆ, ದೈಹಿಕ, ಮಾನಸಿಕ ಆಲಸ್ಯ ಹೇಗೆ ಹಾನಿಕಾರಕವೋ ಅದೇ ರೀತಿ ಚಿಂತನಾರಹಿತ ಆತುರದ ಪ್ರವೃತ್ತಿ, ಕಾರ್ಯವೂ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ. ಹೀಗಾಗಿ ಪ್ರಯತ್ನವು ಸರಿಯಾದ ದಿಕ್ಕಿನಲ್ಲಿ ಈ ನಿಶ್ಚಿತವಾದ ಲಕ್ಷ್ಯದೊಂದಿಗೆ ಇರಬೇಕು. ಇಲ್ಲದಿದ್ದರೆ ಗಾಳಿಯನ್ನು ಮುಷ್ಟಿಯಿಂದ ಗುದ್ದಿದಂತೆ ಆಗುತ್ತದೆ.

ಸುಖ–ಸಂತೋಷಗಳು ಪರಿಣಾಮದಲ್ಲಿ ಆನಂದ, ನೆಮ್ಮದಿಯನ್ನು ಉಂಟು ಮಾಡುತ್ತವೆ. ಇದನ್ನು ಒಂದು ಜಾನಪದ ಕಥೆಯೊಂದಿಗೆ ದೃಢೀಕರಿಸಬಹುದು. ಒಂದು ಸಣ್ಣ ನಾಯಿ ತನ್ನ ಬಾಲವನ್ನು ಬಾಯಿಂದ ಹಿಡಿದುಕೊಳ್ಳಲು ಪ್ರಯತ್ನಿಸುತ್ತಾ, ನಿರಂತರವಾಗಿ ಪ್ರಯತ್ನಿಸುತ್ತಿತ್ತು. ಇದನ್ನು ನೋಡಿದ ದೊಡ್ಡ ನಾಯಿಯು ‘ಮಗು ! ಏನು ಮಾಡುತ್ತಿರುವಿ ?’ ಎಂದು ಕೇಳಿತು. ಆಗ ಸಣ್ಣ ನಾಯಿಯು ನಾನು ತತ್ತ್ವಶಾಸ್ತ್ರವನ್ನು ಓದಿ ಅರ್ಥಮಾಡಿಕೊಂಡಿದ್ದೇನೆ. ಜಗತ್ತಿನ ಎಲ್ಲಾ ಸಮಸ್ಯೆಗಳು ನನಗೆ ಅರ್ಥವಾಗಿವೆ. ನನ್ನ ಜೀವನದ ಪರಮಗುರಿ ಸಂತೋಷ. ಅ ಸಂತೋಷವನ್ನು ನನ್ನ ಬಾಲದಲ್ಲಿದೆ ಎಂದು ತಿಳಿದಿದ್ದೇನೆ. ಅದಕ್ಕೆ ಬಲವನ್ನು ಹಿಂಬಾಲಿಸುತ್ತಿದ್ದೇನೆ. ಅದು ಬಾಯಲ್ಲಿ ಸಿಕ್ಕ ಕೊಡಲೇ ಎಲ್ಲರಿಗಿಂತ ಸಂತೋಷವಾಗಿರುತ್ತೇನೆ ಎಂದಿತು. ಅದಕ್ಕೆ ದೊಡ್ಡ ನಾಯಿ ಹೇಳಿತು. ಜಗತ್ತಿನ ಸ್ಥಿತಿ–ಗತಿಗಳನ್ನು ತಕ್ಕಮಟ್ಟಿಗೆ ಅರ್ಥಮಾಡಿಕೊಂಡಿದ್ದೇನೆ. ಸುಖ ಇನ್ನೊಂದು ವಿಷಯ ತಿಳಿದಿದೆ. ಅದೇನೆಂದರೆ ನಾನು ಬಾಲವನ್ನು ಹಿಡಿದುಕೊಳ್ಳಲು ಆಸೆಪಟ್ಟು ಪ್ರಯತ್ನಿಸುತ್ತಿದ್ದರೆ, ಆ ಬಾಲವು ನನ್ನಿಂದ ದೂರಓಡಿ ಹೋಗುತ್ತದೆ. ನನ್ನ ಪಾಡಿಗೆ ನಾನಿದ್ದರೆ, ಅದು ನನ್ನನ್ನು ಹಿಂಬಾಲಿಸುತ್ತದೆ ಎಂದಿತು. ಆದ್ದರಿಂದ ನಾವು ಮಾಡುವ ಕಾರ್ಯಗಳನ್ನು ಯೋಚಿಸಿ, ಸೂಕ್ತ ಸಮಯದಲ್ಲಿ ಕೈಗೊಂಡರೆ ಯಶಸ್ಸು ಖಚಿತ.

**– ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ಬ್ರಹ್ಮಜ್ಞಾನಾವಲೀಮಾಲಾ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ನಿತ್ಯೋಽಹಂನಿರವದ್ಯೋಽಹಂನಿರಾಕಾರೋಽಹಮಚ್ಯುತಃ ।**
**ಪರಮಾನಂದರೂಪೋಽಹಮಹಮೇವಾಹಮವ್ಯಯಃ ॥ 4 ॥**

**ಅನುವಾದ :** ನಾನು ನಿತ್ಯನೂ ನಿರವದ್ಯನೂ ನಿರಾಕಾರನೂ ಅಚ್ಯುತನೂ ಪರಮಾನಂದ ರೂಪನೂ ಅವ್ಯಯನೂ ಆಗಿರುವೆನು.

**ವಿವರಣೆ :** ಆತ್ಮನು ನಿತ್ಯ. ನಿತ್ಯ ಎಂದರೆ ಅದಕ್ಕೆ ಆದಿಯೂ ಅಂತವೂ ಇಲ್ಲ. ಈ ಲೋಕದಲ್ಲಿರುವ ಎಲ್ಲಾ ಪದಾರ್ಥಗಳಿಗೂ ಆದಿ ಹಾಗೂ ಅಂತ್ಯ ಇದ್ದೇ ಇದೆ. ಆದರೆ ಲೋಕಗಳ ಸೃಷ್ಟಿಗೆ ಕಾರಣವಾದ ಪರಮಾತ್ಮನಿಗೆ ಆದಿ ಇರಲು ಸಾಧ್ಯವಿಲ್ಲ. ಹಾಗೆಯೇ ಪ್ರಳಯಕ್ಕೆ ಸಾಕ್ಷಿಯಾದ ಅವನಿಗೆ ಅಂತ್ಯವೂ ಇಲ್ಲ. ಪರಮಾತ್ಮನುನಿರವದ್ಯನು. ಅವದ್ಯ ಎಂದರೆ ನಿಂದ್ಯ ಎಂದರ್ಥ. ಯಾವುದರಲ್ಲಿ ಕೊರತೆಗಳಿರುವುವೋ, ಅದು ನಿಂದ್ಯವಾಗುವುದು. ಕೊರತೆಗಳಿಲ್ಲದಪರಮಾತ್ಮನುನಿರವದ್ಯನಾಗಿರುವನು. ಪರಮಾತ್ಮನುನಿರಾಕಾರನು. ಅವನಿಗೆ ಆಕಾರವೆಂಬುದು ಇಲ್ಲ. ಚ್ಯುತಿ ಎಂದರೆ ಪತನ. ಪರಮಾತ್ಮನುಪತನವಿಲ್ಲದ್ದರಿಂದಅಚ್ಯುತನು. ಪರಮಾತ್ಮನ ಸ್ವರೂಪ ಪರಮಾನಂದರೂಪವಾಗಿದೆ. ಅದು ದುಃಖದ ಲವಲೇಶವೂ ಇಲ್ಲದ ಆನಂದಸ್ವರೂಪ. ಅಂತಹ ಅವ್ಯಯನಾದಪರಮಾತ್ಮನು ನನ್ನ ಸ್ವರೂಪ.

**ಶುದ್ಧಚೈತನ್ಯರೂಪೋಽಹಮಾತ್ಮಾರಾಮೋಽಹಮೇವ ಚ।**
**ಅಖಂಡಾನಂದರೂಪೋಽಹಮಹಮೇವಾಹಮವ್ಯಯಃ ॥5॥**

**ಅನುವಾದ:** ನಾನು ಶುದ್ಧ ಚೈತನ್ಯಸ್ವರೂಪನು, ನಾನು ಆತ್ಮಾರಾಮನು, ನಾನು ಅಖಂಡಾನಂದರೂಪನು. ('ಅಹಮೇವಾಹಮವ್ಯಯಃ' ಎನ್ನುವ ಪಾದದ ಅನುವಾದವು ಎರಡನೆಯ ಶ್ಲೋಕದ ಅನುವಾದದಂತೆ ಉಳಿದ ಎಲ್ಲ ಶ್ಲೋಕಗಳಲ್ಲೂತಿಳಿದುಕೊಳ್ಳಬೇಕು).

**ವಿವರಣೆ :** ಆತ್ಮದ ಸ್ವರೂಪವು ಶುದ್ಧ ಚೈತನ್ಯವಾಗಿದೆ. ಇಲ್ಲಿ ಶುದ್ಧ ಎಂದರೆ ಜಡದ ಸಂಸ್ಪರ್ಶ ಇಲ್ಲದ್ದು ಎಂದು ಅಭಿಪ್ರಾಯ. ಆತ್ಮವು ಚೈತನ್ಯ ಹಾಗೂ ಜಡ ಎರಡೂ ಸ್ವಭಾವಗಳನ್ನುಒಳಗೊಂಡಿದೆ ಎಂದು ಕೆಲವರು ತಿಳಿಯುತ್ತಾರೆ. ಆದರೆ ವೇದಾಂತವು ಆತ್ಮನ ಶುದ್ಧ ಚೈತನ್ಯ ರೂಪವನ್ನು ಪ್ರತಿಪಾದಿಸುತ್ತದೆ. ಆತ್ಮಾರಾಮ ಎಂದರೆ ಆತ್ಮನಲ್ಲೇ ಆನಂದವನ್ನು ಪಡೆಯುವವನು ಎಂದರ್ಥ. ಅಜ್ಞಾನಿಯಾದವನು ಬಾಹ್ಯ ವಿಷಯಗಳಲ್ಲಿ ಆನಂದವನ್ನು ಹುಡುಕುತ್ತಾನೆ. ಆದರೆ ಆತ್ಮನಆನಂದ ಸ್ವರೂಪವನ್ನು ತಿಳಿದುಕೊಂಡ ಜ್ಞಾನಿಗೆ ಬಾಹ್ಯ ವಿಷಯಗಳಿಂದ ದೊರಕುವ ಸುಖವು ತುಚ್ಛವಾಗಿ ಕಾಣಿಸುತ್ತದೆ. ಹಾಗಾಗಿ ಜ್ಞಾನಿಯು ಆತ್ಮಾರಾಮನಾಗಿ ಇರುವನು. ಅಖಂಡ ಎಂದರೆ ಯಾವುದೇ ಭೇದವಿಲ್ಲದ್ದು. ಆತ್ಮನಲ್ಲಿ ಯಾವುದೇ ಭೇದವೂ ಇಲ್ಲ. ಅವಯವಗಳಿಲ್ಲದ್ದರಿಂದ ಆತ್ಮನಲ್ಲಿ ಸ್ವಗತ ಭೇದವಿಲ್ಲ. ಇನ್ನೊಂದು ಚೈತನ್ಯವಿಲ್ಲದ್ದರಿಂದ ಆತ್ಮನಲ್ಲಿ ಸಜಾತೀಯ ಭೇದವೂ ಇಲ್ಲ. ಅನಾತ್ಮವಾದ ಯಾವ ವಸ್ತುವೂ ಸತ್ಯವಲ್ಲದ್ದರಿಂದ ಆತ್ಮನಲ್ಲಿ ವಿಜಾತೀಯ ಭೇದವೂ ಇಲ್ಲ. ಹಾಗಾಗಿ ಆತ್ಮನು ಅಖಂಡನು. ಆತ್ಮನು ಆನಂದ ಸ್ವರೂಪನು. ವಿಷಯ ಸಂಪರ್ಕದಿಂದ ಉಂಟಾಗುವ ತಾತ್ಕಾಲಿಕ ಆನಂದವು ನಿಜವಾಗಿ ನೋಡಿದರೆ ಆನಂದವೇ ಅಲ್ಲ. ಯಾವುದೇ ಪರಿಚ್ಛಿನ್ನ ವಸ್ತುವು ಸುಖ ರೂಪವಾಗಲು ಸಾಧ್ಯವಿಲ್ಲ ಎನ್ನುವುದನ್ನು 'ನ ಅಲ್ಪೇಸುಖಮಸ್ತಿ' ಎನ್ನುವ ಛಾಂದೋಗ್ಯೋಪನಿಷತ್ತಿನ ವಾಕ್ಯವು ತಿಳಿಸುತ್ತದೆ. ವಾಸ್ತವವಾದ ಆನಂದವು ಅಪರಿಚ್ಛಿನ್ನವಾದ ಆತ್ಮನ ಸ್ವರೂಪವೇ ಎನ್ನುವುದನ್ನು ಶಾಸ್ತ್ರವು ಪ್ರತಿಪಾದಿಸುತ್ತದೆ.

**ಪ್ರತ್ಯಕ್ಚೈತನ್ಯರೂಪೋಽಹಂಶಾಂತೋಽಹಂಪ್ರಕೃತೇಃಪರಃ।**
**ಶಾಶ್ವತಾನಂದರೂಪೋಽಹಮಹಮೇವಾಹಮವ್ಯಯಃ ॥6॥**

**ಅನುವಾದ :** ನಾನು ಪ್ರತ್ಯಕ್ಚೈತನ್ಯ ರೂಪನು, ನಾನು ಶಾಂತನು, ನಾನು ಪ್ರಕೃತಿಯನ್ನು ಮೀರಿದವನು, ನಾನು ಶಾಶ್ವತಾನಂದರೂಪನು.

**ವಿವರಣೆ :** ಪ್ರತ್ಯಕ್ಚೈತನ್ಯ ಎಂದರೆ ಪ್ರತ್ಯಗಾತ್ಮ. ಯಾವುದು ಚೈತನ್ಯಕ್ಕೆ ವಿಷಯವಾಗಿ ಗೋಚರಿಸುವುದೋ, ಅದು ಬಾಹ್ಯವಾದದ್ದು. ಆದರೆ ಆತ್ಮನು ಯಾವುದಕ್ಕೂ ವಿಷಯವಲ್ಲದೆ ಎಲ್ಲಾ ವಿಷಯಗಳನ್ನೂ ಬೆಳಗುವ ಕಾರಣ ಅತ್ಯಂತ ಒಳಗಿನವನು. ಹಾಗಾಗಿ ಆತ್ಮನನ್ನುವೇದಾಂತಿಗಳು ಪ್ರತ್ಯಗಾತ್ಮ ಅಥವಾ ಪ್ರತ್ಯಕ್ಚೈತನ್ಯ ಎನ್ನುವರು.

ಆತ್ಮನು ಯಾವಾಗಲೂ ಶಾಂತನಾಗಿರುವನು. ಚಲನೆ ಹಾಗೂ ಬದಲಾವಣೆ ಉಳ್ಳ ವಸ್ತುಗಳು ಕೆಲವೊಮ್ಮೆ ಶಾಂತವಾಗಿ ಕಂಡರೂ, ಅವುಗಳಲ್ಲಿ ಯಾವುದಾದರೂ ಕ್ಷಣದಲ್ಲಿ ಅಶಾಂತಿ ಉಂಟಾಗಬಹುದು. ಉದಾಹರಣೆಗೆ ಶಾಂತವಾಗಿರುವ ಒಂದು ಜಲಾಶಯಕ್ಕೆ ಒಂದು ದೊಡ್ಡ ಕಲ್ಲು ಬಿದ್ದಾಗ ಅದರಲ್ಲಿ ಅಲೆಗಳು ಉಂಟಾಗಿ ಅದರಲ್ಲಿರುವಜಲಚರ ಜೀವಿಗಳು ತೊಂದರೆಗೊಳಗಾಗುವುವು. ಅದೇ ರೀತಿ ಬಾಹ್ಯ ವಸ್ತುಗಳಲ್ಲಿಸಿಗುವಂತಹ ಶಾಂತಿ ಕ್ಷಣಿಕವೇ ಎಂದು ತಿಳಿದುಕೊಳ್ಳಬಹುದು. ಆದರೆ ಆತ್ಮನಲ್ಲಿ ಯಾವುದೇ ಬದಲಾವಣೆ ಇಲ್ಲದ ಕಾರಣ ಅವನು ಸದಾ ಶಾಂತನಾಗಿರುವನು. ಹಾಗಾಗಿ ಶಾಶ್ವತ ಶಾಂತಿಗೆ ಆತ್ಮಜ್ಞಾನವೊಂದೇ ಉಪಾಯ.

ಪ್ರಕೃತಿ ಎಂದರೆ ಮಾಯೆ. ಪ್ರಕೃತಿಯು ಪರಿಣಾಮವನ್ನು ಹೊಂದಿ ಇಡೀ ಜಗತ್ತಿಗೆ ಕಾರಣವಾಗುತ್ತದೆ. ಹಾಗಾಗಿ ಪ್ರಕೃತಿ ಹಾಗೂ ಅದರಿಂದ ಉಂಟಾದಂತಹ ಎಲ್ಲಾ ವಸ್ತುಗಳೂ ಪರಿಣಾಮವನ್ನು ಹೊಂದಬಲ್ಲವು. ಆದರೆ ಆತ್ಮನು ಪ್ರಕೃತಿಗೂ ಅಧಿಷ್ಠಾನವಾಗಿ ಪ್ರಕೃತಿಯನ್ನೂ ಮೀರಿರುವನು. ಹಾಗಾಗಿ ಪ್ರಕೃತಿಯಲ್ಲಾಗುವ ಪರಿಣಾಮದಿಂದ ಆತ್ಮನಲ್ಲಿ ಯಾವುದೇ ಅಶಾಂತಿಯೂ ಉಂಟಾಗಲಾರದು.

(ಮುಂದುವರೆಯುವುದು)

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**
**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**
**ಸ್ಥಳ : ಗಾಯತ್ರಿ ಭವನ**
ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**
ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

# ಅಧ್ಯಕ್ಷರ ನುಡಿ



**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ನಾಡಿನ ಸಮಸ್ತ ವಿಪ್ರ ಬಾಂಧವರಿಗೆ ದಸರಾ ಹಾಗು ದೀಪಾವಳಿ ಹಬ್ಬದ ಶುಭಾಶಯಗಳು.

ಕಳೆದ ಒಂದು ಒಂದೂವರೆ ವರ್ಷಗಳಿಂದ ನಾನಾ ವಿಪ್ರ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಕಾರ್ಯಕರ್ತರನ್ನು ಅವರ ಕಾರ್ಯ ವೈಖರಿಯನ್ನು ಹತ್ತಿರದಿಂದ ನೋಡಿ ತಿಳಿಯುವ ಹಾಗೂ ಕೇಳಿ ತಿಳಿಯುವ ಅವಕಾಶ ನನ್ನದಾಗಿದೆ. ಹೀಗೆ ನಾನಾ ಸಂಘ ಸಂಸ್ಥೆಗಳನ್ನು ಗಮನಿಸಿದಾಗ ಕಂಡು ಬಂದದ್ದು ಕೆಲವು ಸಂಘ ಸಂಸ್ಥೆಗಳು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದರೂ ಆ ಬಗೆಯಲ್ಲಿ ಬೆಳವಣಿಗೆ ಕಾಣಲು ವಿಫಲವಾದದ್ದು ಹಾಗು ಕೆಲವೊಂದು ಸಂಘ ಸಂಸ್ಥೆಗಳು ಎಲ್ಲರೂ ನಿಬ್ಬೆರಗಾಗುವಂತೆ ಅಘಾದವಾಗಿ ಬೆಳೆದು ನಿಂತದ್ದು ಎರಡನ್ನು ಕಾಣಬಹುದು. ಹೀಗೇಕೆ ಎಂದು ಕಂಡುಕೊಂಡಾಗ ಸಾಮಾನ್ಯವಾಗಿ ಸಫಲವಾದ ಅಥವಾ ಮಹತ್ತರವಾದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಸಂಘ ಸಂಸ್ಥೆಗಳ ಬೆಳವಣಿಗೆಗೆ ಕಾರಣವಾದದ್ದು ಒಂದು ಕಾಮನ್ ಆಬ್ಜೆಕ್ಟಿವ್ ಅದೆಂದರೆ ಎಲ್ಲರನ್ನು ಒಳಗೊಂಡ ನಿಸ್ವಾರ್ಥ ಸೇವಾ ಮನೋಭಾವ ಅದೇ ರೀತಿ ಬೆಳವಣಿಗೆಯನ್ನು ಕಾಣದ ಸಂಘ ಸಂಸ್ಥೆಗಳತ್ತ ಕಣ್ಣಾಯಿಸಿದಾಗ ಕಂಡು ಬಂದದ್ದು ನಾವು ಎಂಬ ಮನೋಭಾವಕ್ಕಿಂತ ನಾನು ಎಂಬ ಮನೋಭಾವ, ಅಂದರೆ ಸಂಘ ಸಂಸ್ಥೆಗಳಲ್ಲಿ ಯಾರು ಹೆಚ್ಚು ಅಲ್ಲ ಹಾಗು ಯಾರು ಕಡಿಮೆಯೂ ಅಲ್ಲ ಎಂಬ ಮನೋಭಾವದಿಂದ ಎಲ್ಲರೂ ಕೈ ಜೋಡಿಸಿ ಒಟ್ಟಾಗಿ ಮುನ್ನಡೆದ ಎಲ್ಲ ಸಂಸ್ಥೆಗಳು ಯಶಸ್ಸನ್ನು ಕಂಡಿವೆ.

ಈ ವಿಷಯವನ್ನು ಒಂದು ಸೂಕ್ತ ಉದಾಹರಣೆಯೊಂದಿಗೆ ಇನ್ನಷ್ಟು ಮನದಟ್ಟಾಗುವಂತೆ ಹೇಳಬಹುದು. ಒಮ್ಮೆ ದೇಹದ ನಾನಾ ಅವಯವಗಳು ನಮ್ಮಲ್ಲಿ ಶ್ರೇಷ್ಠರಾರು ಎಂಬ ಪ್ರಶ್ನೆ ಮುಂದಿಟ್ಟವಂತೆ, ಕಾಲುಗಳು ದಿನ ನಿತ್ಯದ ಕೆಲಸಗಳಲ್ಲಿ ನನ್ನನ್ನು ಬಿಟ್ಟು ಏನನ್ನು ಮಾಡಲು ಸಾಧ್ಯವಿಲ್ಲ, ಆದ್ದರಿಂದ ನಾನೆ ಶ್ರೇಷ್ಠ ಎಂದಿತಂತೆ, ಅದೇ ರೀತಿ ಕೈ ತನ್ನ ಮಹತ್ವವನ್ನು ಸಾರಿತು, ಕಣ್ಣುಗಳು ತನ್ನ ಮಹತ್ವವನ್ನು ಸಾರಿತು, ಮೆದುಳು ನನ್ನ ಯೋಚನಾ ಶಕ್ತಿಯಿಂದಲೇ ಇಂದು ನೀವೆಲ್ಲರೂ ಈ ವಿಷಯವನ್ನು ತರ್ಕಿಸಲು ಸಾಧ್ಯವಾಗಿದ್ದು ಎಂದು ತನ್ನ ಮಹತ್ವವನ್ನು ಸಾರಿತು ಹೀಗೆ ದೇಹದ ನಾನಾ ಅವಯವಗಳು ತಮ್ಮ ತಮ್ಮ ಮಹತ್ವವನ್ನು ಸಾರುತ್ತ ಕೊನೆಗೆ ಎಲ್ಲ ಅಂಗಗಳು ಮಹತ್ವವಾದದ್ದೇ. ಆದರೆ ಈ ಹೊಟ್ಟೆ ಎಂಬುದಿದೆ ನೋಡಿ ಇದು ನಾವೆಲ್ಲ ಇಷ್ಟು ಕೆಲಸವನ್ನು ಮಾಡಿದರು ಇದು ಮಾತ್ರ ಏನೇನನ್ನು ಮಾಡದೆ ಆರಾಮಾಗಿದೆ ಎಂಬ ನಿರ್ಣಯಕ್ಕೆ ಬಂದವಂತೆ ಹಾಗು ಹೊಟ್ಟೆಯನ್ನು ಇನ್ನಿಲದಂತೆ ದ್ವೇಷಿಸಬೇಕೆಂದು ಠರಾವು ಹೊರಡಿಸಿದವಂತೆ. ಈ ವಿಷಯ ಹೇಗೋ ಹೊಟ್ಟೆಗೂ ತಿಳಿದು ಇವುಗಳಿಗೆ ಬುದ್ಧಿ ಕಲಿಸಬೇಕೆಂದು ಹೊಟ್ಟೆ ಆಹಾರವನ್ನು ಪಚನವಾಗುವ ಪ್ರಕ್ರಿಯಲ್ಲಿ ಪಾಲ್ಗೊಳ್ಳಲೇ ಇಲ್ಲ, ಈ ವಿಷಯ ದೇಹದ ಇತರೆ ಅವಯವಗಳಿಗೂ ತಿಳಿದು ಅವುಗಳು ಕೂಡ ಒಂದು ರೀತಿಯ ಸಂಪನ್ನು ಹೂಡಿದವಂತೆ. ಹೀಗೆ ದೇಹದ ಎಲ್ಲ ಅವಯವಗಳು ತಮ್ಮ ತಮ್ಮ ಕೆಲಸವನ್ನು ನಿಲ್ಲಿಸಿದಾಗ, ತಾವು ಆಶ್ರಯ ಪಡೆದು ಕೊಂಡಿದ್ದ ದೇಹ ಒಟ್ಟಾರೆಯಾಗಿ ದಿನ ಕಳೆದಂತೆ ಕೃಶವಾಗುತ್ತ ಹೋಯಿತಂತೆ. ಅಂದರೆ ನಮ್ಮ ಸಂಘ ಸಂಸ್ಥೆಗಳ ಪರಿಸ್ಥಿತಿಯು ಇದೆ, ಯಾವಾಗ ನಮ್ಮಲಿ ನಾವೇ ಶ್ರೇಷ್ಠರು ಅಥವಾ ನಮ್ಮಿಂದಲೇ ಎಲ್ಲಾ ಎಂಬ ಮನೋಭಾವ ಮನೆ ಮಾಡುತ್ತದೋ ಆಗ ಅದು ನಮ್ಮನ್ನು ಗೆಲುವಿನ ಬಾಗಿಲಿನಿಂದ ಹಂತ ಹಂತವಾಗಿ ದೂರವಾಗಿಸುತ್ತ ಹೋಗುತ್ತದೆ, ಅಂದರೆ ಒಟ್ಟಾರೆಯಾಗಿ ಹೇಳ ಹೊರಟಿದ್ದು ಸಂಘ ಸಂಸ್ಥೆಗಳಲ್ಲಿ ಎಷ್ಟು ನಿಸ್ವಾರ್ಥ ಮನೋಭಾವದಿಂದ ತೊಡಗಿಸಿಕೊಳ್ಳುತೇವೆಯೋ ಅಷ್ಟಷ್ಟು ಸಂಘ ಸಂಸ್ಥೆಗಳು ಉನ್ನತಿಯನ್ನು ಕಾಣುತ್ತವೆ ಹಾಗೂ ಅದನ್ನು ನೆಚ್ಚಿಕೊಂಡ ಸಮುದಾಯವು ಕೂಡ ಅಭ್ಯುದಯ ಕಾಣುತ್ತದೆ.

ಕಳೆದ ತಿಂಗಳು ದಾವಣಗೆರೆಯಲ್ಲಿ ಕಾರ್ಯಕಾರಿಣಿ ಸಮಿತಿ ಸದಸ್ಯರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಿದ ದಾವಣಗೆರೆಯ ಸಮಸ್ತ ಪದಾಧಿಕಾರಿಗಳಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದಲ್ಲದೆ 2024 ರ ಆರಂಭದಲ್ಲಿ ಅಂದರೆ ಜನವರಿ 6 ಮತ್ತು 7 ರಂದು ಬೆಂಗಳೂರಿನ ಶಂಕರ ಮಠದ ಆವರಣದಲ್ಲಿ ರಾಜ್ಯ ಮಟ್ಟದ ಮಹಿಳಾ ಸಮಾವೇಶವನ್ನು ಆಯೋಜಿಸಲಾಗಿದೆ,ನಾಡಿನ ಸಮಸ್ತ ವಿಪ್ರ ಬಾಂಧವರು ಈ ಸಮಾವೇಶದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ತಮ್ಮಲಿ ಕೇಳಿಕೊಳ್ಳುತೇನೆ.

ಅದೇ ರೀತಿ ಅಯೋಧ್ಯೆಯ ಸರಯೂ ತಟದಲ್ಲಿ ಪ್ರಭು ಶ್ರೀ ರಾಮ ವಿರಾಜಮಾನನಾಗುವ ಶುಭಕಾಲ ಸನ್ನಿಹಿತವಾಗುತ್ತಿದೆ. ಭಾರತೀಯರು ಅದೆಷ್ಟೋ ವರ್ಷಗಳಿಂದ ಕಾಯುತ್ತಿದ್ದ ಪುಣ್ಯ ಕ್ಷಣವೊಂದಕ್ಕೆ ಸಜ್ಜಾಗಲು ಅಯೋಧ್ಯೆಯಲ್ಲಿ ಕ್ಷಣಗಣನೆ ಪ್ರಾರಂಭವಾಗಿದೆ. ಶ್ರೀ ರಾಮ ಕೋಟ್ಯಂತರ ಭಕ್ತರ ಮನಸ್ಸಿನ ಭಾವನೆಯಾಗಿ, ರಾಷ್ಟ್ರದ ಮರ್ಯಾದೆಯಾಗಿ ಜನಮಾನಸದಲ್ಲಿ ನೆಲೆಯಾಗಿದ್ದಾನೆ. ಅಂತಹ ಮರ್ಯಾದಾ ಪುರುಷೋತ್ತಮನ ದೇವಾಲಯದ ಅನಾವರಣದ ಹಾಗೂ ಶ್ರೀರಾಮಚಂದ್ರ ಮೂರ್ತಿಯ ಪುನಃಪ್ರತಿಷ್ಠಾಪನಾ ನಿಮಿತ್ತ ಲೋಕಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷಿತೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ದಿನಾಂಕ 24.10.2023 ಮಂಗಳವಾರ, ವಿಜಯದಶಮಿಯಂದು ಆರಂಭಗೊಂಡು, ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ಪ್ರತಿಷ್ಠಾಪನ ಮಹೋತ್ಸವದ ದಿನದಂದು ಸಂಪನ್ನಗೊಳಿಸಲು ಮಹಾ ಸಭಾವತಿಯಿಂದ ತೀರ್ಮಾನಿಸಲಾಗಿದೆ, ಈ ನಿಮಿತ್ತ ತಾವೆಲ್ಲರೂ 22–1–2024ರ ರಂದು ಅಯೋಧ್ಯಯಲ್ಲಿ ನಡೆಯಲಿರುವ ಶ್ರೀರಾಮನ ಪುನಃ ಪ್ರತಿಷ್ಠಾಪನಾ ಅಂಗವಾಗಿ ರಾಜ್ಯಾದ್ಯಂತ ನಡೆಯಲಿರುವ ಶತಕೋಟಿ ಜಪ ಯಜ್ಞ ಹಾಗೂ ಶ್ರೀ ರಾಮತಾರಕ ಮಹಾಯಾಗದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ತಮ್ಮಲಿ ಕೇಳಿ ಕೊಳ್ಳುತೇನೆ, ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿವರಗರೊಂದಿಗೆ ಮತ್ತೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

## ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಇತ್ತೀಚಿಗೆ ಭಾರತೀಯ ಹಿಂದೂ ಧರ್ಮ ಅಥವ ಸನಾತನ ಧರ್ಮದ ಬಗ್ಗೆ ಸ್ವಘೋಷಿತ ಬುದ್ಧಿಜೀವಿಗಳು, ಅವಕಾಶವಾದಿ ರಾಜಕೀಯ ನೇತಾರರು ಅವಹೇಳನಕಾರಿ ಮಾತುಗಳನ್ನು ಆಡುತ್ತಿದ್ದಾರೆ. ತಮ್ಮ ಭಾಷಣಗಳಲ್ಲಿ ನಿಂದಾತ್ಮಕ ಹೇಳಿಕೆಗಳನ್ನು ನೀಡಿ ಅದು ಇಡಿ ಭಾರತದ ನಿಲುವೆಂಬಂತೆ ಪ್ರತಿಬಿಂಬಿಸುತ್ತಿದ್ದಾರೆ. ಇದು ಸರ್ವಥಾ ತಪ್ಪು. ಈಗಾಗಲೇ ನಮ್ಮ ಮಹಾಸಭಾದ ಸನ್ಮಾನ್ಯ ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳು ಹಲವು ಸಾರ್ವಜನಿಕ ಸಭೆಗಳಲ್ಲಿ ಇಂತಹ ಬೇಜಾವಬ್ದಾರಿ ಹೇಳಿಕೆಗಳ ಬಗ್ಗೆ ತೀವ್ರವಾಗಿ ಖಂಡಿಸಿ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನಾತ್ಮಕವಾಗಿ ಹೋರಾಟ ನಡೆಸುವುದಾಗಿ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಸನಾತನ ಧರ್ಮವೆಂದರೆ ಏನು ಎಂದು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

ಸಹಸ್ರಾರು ವರ್ಷಗಳ ಇತಿಹಾಸವುಳ್ಳ ನಮ್ಮ ದೇಶವನ್ನು ವಿಷ್ಣು ಪುರಾಣದ ಒಕ್ಕಣೆಯಂತೆ ಜಯಂತಿ–ಋಷಭದೇವರ ಮಗನಾದ ಭರತ ಮುನಿ ಮತ್ತು ಅವನ ಐವರು ಮಕ್ಕಳಾದ ಸುಮತಿ, ರಾಷ್ಟ್ರಭೃತ್, ಸುದರ್ಶನ, ಆವರಣ, ಧೂಮ್ರಕೇತು ಆಳಿದ್ದು, ಅಜನಾಭ ವರ್ಷ ಅಥವ ಭರತಖಂಡವೆಂದು ಹೆಸರಾಯಿತು. ಮಹಾಭಾರತದ ಆದಿಪರ್ವದಂತೆ ಪುರುವಂಶದ ಇಲಿಲ ರಾಜನ ಮಗನಾದ ದುಷ್ಯಂತ, ಮೇನಕೆ–ವಿಶ್ವಾಮಿತ್ರರ ಮಗಳಾದ ಶಕುಂತಲೆಯ ಮಗ ಭರತನು ಈ ರಾಜ್ಯವನ್ನು ಆಳಿದ್ದರಿಂದ ಭಾರತವೆಂದು ಹೆಸರಾಯಿತು (ಭರತ ಸಂಬಂಧೀ ಭಾರತಂ–ಭರತ ಇತಿ ಲೋಕಸ್ಯ ಭರಣಾತ್ ।) ಒಟ್ಟಿನಲ್ಲಿ ಭಾರತವೆಂಬ ಹೆಸರು ಬಹಳ ಕಾಲದಿಂದಲೂ ಪ್ರಚಲಿತವಾಗಿದೆ. ಸಂಸ್ಕೃತ ಭಾಷೆಯಲ್ಲಿ "ಭಾ" ಎಂದರೆ ಪ್ರಕಾಶ, ಹೊಳಪು. "ರತ"ವೆಂದರೆ ತೊಡಗಿಸಿಕೊಳ್ಳುವುದು. ಅದರಂತೆ ಪ್ರಕಾಶಮಯವಾದ ಜ್ಞಾನವನ್ನು ಪಡೆಯುವ ಸಲುವಾಗಿ ತಮ್ಮನ್ನು ತೊಡಗಿಸಿಕೊಳ್ಳುವವರು ಭಾರತರು. ಇಂತಹ ಭಾರತದಲ್ಲಿರುವವರು ಭಾರತೀಯರು. (ಭರತ ಸಂಬಂಧೀ ಭಾರತೀಯ: ।).

ಯಾವ ಕಾಲದಲ್ಲಿಯಲ್ಲಾದರೂ ಯಾವ ವ್ಯಕ್ತಿಯು ತನ್ನ, ಕುಟುಂಬದ, ಜೀವದ ಉನ್ನತಿಗೋಸ್ಕರ ಪ್ರಕೃತಿದತ್ತವಾದ ನಿಯಮಗಳನ್ನು ಆಚರಿಸುವುದರಿಂದ ಶ್ರೇಷ್ಠ ಸ್ಥಿತಿಯನ್ನು ತಲುಪುತ್ತಾನೋ ಅದೇ ಸನಾತನವಾದ ಧರ್ಮ. ವೈದಿಕಯುಗದಲ್ಲಿ ಈ ಸನಾತನ ತತ್ತ್ವವು ಋಷಿಗಳಿಂದ ಪ್ರಚುರಗೊಳಿಸಲ್ಪಟ್ಟು ಜನರು ಪರಿಪಾಲಿಸಿದ್ದರಿಂದ ಇದಕ್ಕೆ ವೈದಿಕ ಸನಾತನ ಧರ್ಮವೆಂಬ ಹೆಸರಾಯಿತು. ಅ ಧರ್ಮ ಅತ್ಯಂತ ಪ್ರಾಚೀನವದುದು. ಈ ವೈದಿಕ ಧರ್ಮದಲ್ಲಿ ಸತ್ಯ ಮತ್ತು ಋತಗಳು ಸೇರಿವೆ. ಧರ್ಮವೆಂದರೆ ಧರಿಸಲು ಯೋಗ್ಯವಾದುದು. ಸಂಸ್ಕೃತದ ಧೃ ಎಂಬ ಧಾತುವಿನಿಂದ ನಿಷ್ಪನ್ನವಾದ ಧರ್ಮವೆಂಬ ಪದಕ್ಕೆ ಧರಿಸುವಿಕೆ, ಧಾರಣೆ, ಪೋಷಣೆ, ನೀತಿ–ನಿಯಮ, ನಡವಳಿಕೆ ಎಂಬ ಹಲವು ಅರ್ಥಗಳಿವೆ. ಶಾಸ್ತ್ರಗಳ ಅರ್ಥವನ್ನು ತಿಳಿಸಿಕೊಡುವ ಮೂರು ಕಾಲಗಳಲ್ಲಿ ನಿರ್ಭಾದಿತವಾಗಿ ಇರುವ ಅಂಶವೇ ಸತ್ಯ. ಅದನ್ನು ವಿಶ್ವ ನಿಯಮಗಳಿಗೆ ಅನುಸಾರವಾಗಿ ಪಾಲಿಸಿದಾಗ ಋತವಾಗುತ್ತದೆ. ಇವರೆಡರ ಪರಸ್ಪರ ಸಂಬಂಧವೇ ಧರ್ಮ ಎಂದು ಭೀಷ್ಮಾಚಾರ್ಯರು ಧರ್ಮ ಲಕ್ಷಣದ ಬಗ್ಗೆ ಯುಧಿಷ್ಠಿರನಿಗೆ ಮಹಾಭಾರತದ ಶಾಂತಿಪರ್ವದಲ್ಲಿ ವಿವರಿಸಿರುತ್ತಾರೆ. (ಸತ್ಯಂ ಯಥಾ ಶಾಸ್ತ್ರಾರ್ಥತಾ । ತದೇವ ಅನುಷ್ಠಿಯ ಮಾನಂ ಋತಂ ಭವತಿ । ತಯೋಃ ಅನ್ಯೋನ್ಯ ಸಂಬಂಧಃ ಧರ್ಮಃ । ) ವ್ಯಕ್ತಿ, ಕುಟುಂಬ, ಸಮಾಜ, ದೇಶದ ಹಿತ – ಉನ್ನತಿಯು ಈ ಧರ್ಮಾಚರಣೆಯಿಂದ ಉಂಟಾಗುತ್ತದೆ. ವ್ಯಕ್ತಿಗೆ ಇಹಪರಗಳಲ್ಲಿ ಸುಖ ಉಂಟಾಗಿ ಅವನ ಬಾಳು ಉದ್ಧಾರವಾಗುತ್ತದೆ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯ, ಧರ್ಮಲಾಭಕ್ಕಿಂತ ಶ್ರೇಷ್ಠವಾದುದು ಬೇರೊಂದಿಲ್ಲ. ಆದ್ದರಿಂದ ಧರ್ಮವನ್ನು ಆಚರಿಸಲು ವೇದವ್ಯಾಸರು ಕರೆ ನೀಡಿದ್ದಾರೆ. (ಯತೋ ಧರ್ಮಃ ತತೋಃ ಜಯಃ । ಧರ್ಮ ಲಾಭತ್ ಪರಂ ನ ಸ್ಯಾತ್ ತಸ್ಮಾತ್ ಧರ್ಮಂ ಚರ ಉತ್ತಮಂ ।). ನಾವು ಈ ಧರ್ಮದ ಸೂಕ್ಷ್ಮತೆಗಳನ್ನು ಅರಿತು ದಿನನಿತ್ಯ ಹಾಗೂ ವಿಶೇಷ ಸಂದರ್ಭಗಳಲ್ಲಿ ಧರ್ಮಾಚರಣೆಗಳನ್ನು ಕೈಗೊಂಡು ಧರ್ಮವನ್ನು ರಕ್ಷಿಸಬೇಕು. ಆ ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂದು ಮನು ತಿಳಿಸುತ್ತಾನೆ. (ಧರ್ಮೋ ರಕ್ಷತಿ ರಕ್ಷಿತಃ ।). ಈ ಧರ್ಮದಲ್ಲಿ ಹಲವಾರು ಮಜಲುಗಳಿದ್ದು, ತಮಗೆ ಬೇಕಾದ ಧರ್ಮದ ಅಂಶಗಳನ್ನು ಆಯ್ಕೆಮಾಡಿಕೊಂಡು ಅನುಸರಿಸಬಹುದು. ಇದೇ ಸ್ವಧರ್ಮ. ಕುರುಕ್ಷೇತ್ರ ಯುದ್ಧದ ಪ್ರಾರಂಭದಲ್ಲಿ ಗುರುಗಳನ್ನು, ಬಂಧುಗಳನ್ನು ಶತ್ರುಸೈನ್ಯದಲ್ಲಿ ನೋಡಿದ ಅರ್ಜುನನು ಕಂಗೆಟ್ಟು ಶಸ್ತ್ರತ್ಯಾಗ ಮಾಡಿದಾಗ ಕೃಷ್ಣನು ಅವನಿಗೆ ಹಲವಾರು ರೀತಿಯ ಧರ್ಮ–ಯೋಗಗಳನ್ನು ವಿವರಿಸಿ ಅರ್ಜುನನ ಸ್ವಧರ್ಮವಾದ ಕ್ಷತ್ರಿಯ ಧರ್ಮವನ್ನು ಪಾಲಿಸಲು ಸೂಚಿಸಿ ಪರಧರ್ಮವನ್ನು ತ್ಯಜಿಸಲು ಕರೆ ನೀಡುತ್ತಾನೆ. (ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ।). ಈ ಧರ್ಮದ ಉತ್ತುಂಗ ಸ್ಥಿತಿಯೇ ಯೋಗ. ಒಂದು ಅಥವಾ ಹಲವಾರು ಯೋಗಗಳನ್ನು ಅಭ್ಯಾಸ ಮಾಡಿದ ವ್ಯಕ್ತಿಯ ಕಾರ್ಯಸಾಮರ್ಥ್ಯವು ಗರಿಷ್ಠ ಪ್ರಮಾಣವನ್ನು ಮುಟ್ಟುತ್ತದೆ. ಪುರಾಣಗಳ ಮಾಹಿತಿಯಂತೆ ಧರ್ಮವು ಕೃತಯುಗದಲ್ಲಿ ನಾಲ್ಕು, ತ್ರೇತಾಯುಗದಲ್ಲಿ ಮೂರು, ದ್ವಾಪರಯುಗದಲ್ಲಿ ಎರಡು ಹಾಗೂ ಕಲಿಯುಗದಲ್ಲಿ ಒಂದು ಕಾಲಿನಲ್ಲಿ ನಿಂತಿದೆ. ಆದ್ದರಿಂದ ಧರ್ಮವು ಅಪಾಯದಲ್ಲಿದೆ. ಇದರೊಂದಿಗೆ ನಾಸ್ತಿಕವಾದಿಗಳು, ಸ್ವಾರ್ಥಪರ ರಾಜಕಾರಣಿಗಳು ಧರ್ಮ–ಬ್ರಾಹ್ಮಣ್ಯದ ಬಗ್ಗೆ ಅನಾವಶ್ಯಕ ಹೇಳಿಕೆಗಳನ್ನು ನೀಡಿ, ಜನರ ಸಮಾಜದ ಶಾಂತಿ, ನೆಮ್ಮದಿಗೆ ಭಂಗ ತರುತ್ತಿದ್ದಾರೆ. ಇಂತಹ ವ್ಯಕ್ತಿಗಳ ವಿರುದ್ಧ ಎಲ್ಲರೂ ಒಗ್ಗೂಡಿ ಸಾರ್ವಜನಿಕವಾಗಿ, ಶಾಂತಿಯುತವಾಗಿ ಪ್ರತಿಭಟನೆ ಮಾಡಿ ಧರ್ಮದ ವೈಶಿಷ್ಟ್ಯವನ್ನು, ಸನಾತನ ಧರ್ಮದ ಪಾರಮ್ಯವನ್ನು, ಅದರ ಮೂಲಕ ರಾಷ್ಟ್ರಹಿತವನ್ನು, ಲೋಕಹಿತವನ್ನು ಎತ್ತಿ ಹಿಡಿಯಬೇಕಾದ ಕಾಲ ಸನ್ನಿಹಿತವಾಗಿದೆ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**

– ಪ್ರಧಾನ ಸಂಪಾದಕರು


### ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು.

# ದಾವಣಗೆರೆಯಲ್ಲಿ ಯಶಸ್ವಿ ಎರಡನೇ ಕಾರ್ಯಕಾರಿಣಿ ಸಭೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ 2023-24ನೇ ಸಾಲಿನ ದ್ವಿತೀಯ ಸಭೆಯು ದಿನಾಂಕ 24.09.2023ನೇ ಭಾನುವಾರ ಶ್ರೀ ಶಂಕರ ಸಮುದಾಯ ಭವನ, ದಾವಣಗೆರೆಯಲ್ಲಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಘನ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಶ್ರೀಮತಿ ಲಕ್ಷ್ಮೀ ಅವರಿಂದ ಪ್ರಾರ್ಥನೆ ಹಾಗೂ ವೇ॥ ಬ್ರ॥ ಶ್ರೀ ಗಣಪತಿಭಟ್ ವೇದಘೋಷ ದೊಂದಿಗೆ ಸಭೆ ಆರಂಭವಾಯಿತು.

ಅಧ್ಯಕ್ಷರಾದ ಶ್ರೀ ಆಶೋಕ ಹಾರನಹಳ್ಳಿಯವರಿಗೆ ಸಂಪ್ರದಾಯದಂತೆ ಮಹಾಸಭಾ ಖಜಾಂಚಿಗಳಾದ ಶ್ರೀ ವೆಂಕಟೇಶ್ ಎಸ್. ನಾಯಕ್ ಗಾಯತ್ರಿ ಸರಮಾಲೆಯನ್ನು ಸಭಾಸದರ ಸಮ್ಮುಖದಲ್ಲಿ ತೊಡಿಸಿದರು. ಅಧ್ಯಕ್ಷರು ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಪದಾಧಿಕಾರಿಗಳು ಜ್ಯೋತಿ ಪ್ರಜ್ವಲಿಸುವುದರೊಂದಿಗೆ ಸಭಾಕಲಾಪಗಳಿಗೆ ಚಾಲನೆ ನೀಡಲಾಯಿತು. ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಎಂ.ಆರ್. ಶಿವಶಂಕರ್ ಸ್ವಾಗತ ಕೋರಿದರು.

**ದಿನಾಂಕ 24.06.2023ರಂದು ಜರುಗಿದ ಕೇಂದ್ರ ಕಾರ್ಯಕಾರಿಣಿ ಸಭೆಯ ನಿರ್ಣಯಗಳ ಮಂಡನೆ.**

ದಿನಾಂಕ 24.06.2023ರಂದು ಜರುಗಿದ ಕೇಂದ್ರ ಕಾರ್ಯನಿರ್ವಾಹಕ ಸಭೆಯ ನಡಾವಳಿಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಸಭೆಯ ಅನುಮೋದನೆಯೊಂದಿಗೆ ಸರ್ವಾನುಮತದಿಂದ ಒಪ್ಪಿದೆ ಎಂದು ದಾಖಲಿಸಲಾಯಿತು.

**ಅಧ್ಯಕ್ಷರಿಗೆ ಸನ್ಮಾನ :** ದಾವಣಗೆರೆ ಜಿಲ್ಲಾ ಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ ಸಭೆಯು ದಾವಣಗೆರೆಯಲ್ಲಿ ನಡೆಯಲು ನಮಗೊಂದು ಅವಕಾಶ ಕಲ್ಪಿಸಿಕೊಟ್ಟ ಮಹಾಸಭಾ ಅಧ್ಯಕ್ಷರನ್ನು ಸನ್ಮಾನಿಸಿದರು. ಹಾಗೂ ಸರ್ವಸದಸ್ಯರಿಗೂ ಆತ್ಮೀಯ ಸ್ವಾಗತವನ್ನು ಕೋರಿದರು. ಹಾರ, ತುರಾಯಿ, ಫಲ-ಪುಷ್ಪಗಳೊಂದಿಗೆ ಭಿನ್ನವತ್ತಳೆಯನ್ನು ಓದಿ, ಶಾಲು ಹೊದಿಸಿ ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರನ್ನು ಸನ್ಮಾನಿಸಿದರು.

ಮಹಾಸಭಾಧ್ಯಕ್ಷರು ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತ, ಜಿಲ್ಲಾ ಬ್ರಹ್ಮಣ ಸಮಾಜ ಸೇವಾ ಸಮಿತಿಯ ಅಧ್ಯಕ್ಷರು- ಪದಾಧಿಕಾರಿಗಳನ್ನು ಅಭಿನಂದಿಸಿದರು. ಶ್ರೀಯುತರಾದ ಅಚ್ಯುತ್, ಸತ್ಯನಾರಯಣರಾವ್, ಡಾ॥ ಎಂ.ಸಿ. ಶಶಿಕಾಂತ್, ಎಸ್.ಆರ್. ಹೆಗಡೆ



ಇವರೆಲ್ಲರ ಸಂಘಟನ ಕಾರ್ಯವನ್ನು ಶ್ಲಾಘಿಸಿ, ಇದೇ ರೀತಿ ಬ್ರಾಹ್ಮಣ ಸಂಘಟನೆ ಮುಂದುವರಿಯಬೇಕೆಂದು ಆಶಯ ವ್ಯಕ್ತಪಡಿಸಿದರು. 1400 ಜನ ಸದಸ್ಯರನ್ನು ನೊಂದಾಯಿಸಿಕೊಂಡು, ಎಲ್ಲರ ಸಹಾಯ ಸಹಕಾರಗಳೊಂದಿಗೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿಸುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ದ್ವಿತೀಯ ಸಭೆಯನ್ನು ದಾವಣಗೆರೆಯಲ್ಲಿ ನಡೆಸಲು ಆತಿಥ್ಯವನ್ನು ವಹಿಸಿಕೊಂಡು ಜಿಲ್ಲಾ ಬ್ರಾಹ್ಮಣ ಸೇವ ಸಮಿತಿಯ ಪದಾಧಿಕಾರಿಗಳನ್ನು ಅಭಿನಂದಿಸಿ ಕೃತಜ್ಞತಾಪೂರ್ವಕವಾಗಿ ವಂದಿಸಿದರು.

### ಸಂಘಟಕರಿಗೆ ಸನ್ಮಾನ



ಉಪಾಧ್ಯಕ್ಷರಾದ **ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿಯವರು,** ದಾವಣಗೆರೆ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರು, ಪದಾದಿಕಾರಿಗಳನ್ನು ಶ್ರೀಯುತರಾದ ಅಚ್ಯುತ್, ಡಾ॥ ಎಂ.ಸಿ. ಶಶಿಕಾಂತ್, ಶ್ರೀಮತಿ ಡಾ॥ ರೂಪಾಶ್ರೀ ಶಶಿಕಾಂತ್, ಶ್ರೀ ಎಸ್.ಪಿ.ಸತ್ಯನಾರಾಯಣರಾವ್, ಎಸ್.ಆರ್. ಹೆಗಡೆ, ಗೋಪಾಲರಾವ್ ಇವರ ಕಾರ್ಯವೈಖರಿಯನ್ನು, ಸಂಘಟನಾ ಸಾಮರ್ಥ್ಯವನ್ನು ಸಮಾಜಮುಖಿ ಕಾರ್ಯತತ್ಪರತೆಯನ್ನು ಹಾಗೂ ಅವರ ಪರಿಚಯವನ್ನು ಮಾಡಿದರು. ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಮಹಾಸಭಾದ ಪರವಾಗಿ ಅವರೆಲ್ಲರನ್ನೂ ಅಭಿನಂದಿಸಿ ಸನ್ಮಾನಿಸಿದರು.

## ಅಧ್ಯಕ್ಷರ ಭಾಷಣ

ನಂತರ ಮಹಾಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಉಪಾಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ತಮ್ಮ ಅಭಿಪ್ರಾಯ, ಸಲಹೆ-ಸೂಚನೆಗಳನ್ನು ತಿಳಿಸಲು ಹೆಚ್ಚಿನ ಅವಕಾಶ ನೀಡುವುದಾಗಿ ತಿಳಿಸಿದರು.

ಮಹಾಸಭೆಯು 1974ರಲ್ಲಿ ಸ್ಥಾಪನೆಗೊಂಡಿದ್ದು, ರಾಜ್ಯದ ಅನೇಕ ಭಾಗಗಳಲ್ಲಿ ಮಹಾಸಭೆಯ ಅಸ್ತಿತ್ವದ ಬಗ್ಗೆ ಅರಿವಿರಲಿಲ್ಲ. ಬಳ್ಳಾರಿ-ಬೀದರ್ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯಾದ್ಯಂತ ಪ್ರವಾಸ ಮಾಡಿ, ಅನೇಕ ವಿಪ್ರ ಸಂಘ-ಸಂಸ್ಥೆಗಳಿಗೆ ಭೇಟಿ ನೀಡಿ, ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಂಘಟನೆ ಬಲಗೊಳಿಸಲು ಪ್ರಯತ್ನಸಿದ್ದನ್ನು ತಿಳಿಸಿದರು. ಹಾವೇರಿ ಶಾಸಕರ ಮುಖೇನ ಶ್ರೀ ಪವನ್ ದೇಸಾಯಿ ಹಾವೇರಿಯಲ್ಲಿ ನಾಗರೀಕ ಸಿ.ಎ. ನಿವೇಶನ ಪಡೆಯಲು ಕಾರಣರಾಗಿದ್ದಾರೆ. ಮಹಾಸಭೆಯ ಕಾರ್ಯಾಲಯವು ಹಾವೇರಿಯಲ್ಲಿ ಪ್ರಾರಂಭವಾಗಲಿದೆ ಎಂದು ಸಭಾ ಸದಸ್ಯರ ಹರ್ಷೋದ್ಗಾರ - ಕರತಾಡನಗಳ ಮೂಲಕ ತಿಳಿಸಿದರು. ಬಿಜಾಪುರ ಜಿಲ್ಲೆಗಳು ಹಾಗೂ ಬಾಗಲಕೋಟೆಯಲ್ಲಿ ಸಂಘಟನೆಯತ್ತ ಮನ್ನಡೆಯುತ್ತಿರುವುದು ಸಂತಸದ ವಿಷಯವೆಂದು, ಬೆಂಗಳೂರು ಬಿಟ್ಟು ಹೊರ ಜಿಲ್ಲೆಗಳಲ್ಲಿ ಬ್ರಾಹ್ಮಣ ಸಂಘಟನೆ ಹೆಚ್ಚು ಉತ್ಸಾಹಭರಿತವಾಗಿದೆ ಎಂದು ತಿಳಿಸಿದರು.

ಜನವರಿ 2022 ರಿಂದ ಇಲ್ಲಿಯವರೆಗೆ ರಾಜ್ಯಾದ್ಯಂತ ಸುಮಾರು 18,000 ನೂತನ ಸದಸ್ಯರ ಸೇರ್ಪಡೆಯಾಗಿದ್ದು, ಸದಸ್ಯತ್ವದ ಸಂಖ್ಯೆ 45,000 ದಿಂದ 62,000ಕ್ಕೆ ಏರಿದ್ದು, ಸದ್ಯದಲ್ಲಿಯೇ 10,000 ನೂತನ ಸದಸ್ಯರ ನೋಂದಾವಣೆಯೊಂದಿಗೆ ಮಹಾಸಭಾ ಸದಸ್ಯತ್ವವನ್ನು 75,000ಕ್ಕೆ ಗುರಿ ಮುಟ್ಟಿಸುವ ಆಶಾಭಾವನೆ ಹೊಂದಿದ್ದೇವೆ ಎಂದು ತಿಳಿಸಿದರು. ಚುನಾವಣಾ ಸಮಯದಲ್ಲಿ ನೀಡಿದ್ದ ಆಶ್ವಾಸನೆಯಂತೆ ಮಹಾಸಭಾ ಬೈಲಾಕ್ಕೆ ತಿದ್ದುಪಡಿ ತಂದು, ಆಶ್ವಾಸನೆ ಈಡೇರಿಸಲಾಗಿದೆ. 1,000 ಸದಸ್ಯತ್ವ ಹೊಂದಿದ ಜಿಲ್ಲೆಗಳು ಅಯಾ ಜಿಲ್ಲಾ ಕೇಂದ್ರಗಳಲ್ಲಿಯೇ ಮುಂಬರುವ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದ್ದು, 2023 ಡಿಸೆಂಬರ್ ಒಳಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ನೋಂದಾಯಿಸಿ ತಮ್ಮ ಜಿಲ್ಲಾ ಕೇಂದ್ರಗಳಲ್ಲಿಯೇ ಚುನಾವಣೆ ನಡೆಸುವಂತಾಗಲು ಕಾರ್ಯೋನ್ಮುಖರಾಗಬೇಕೆಂದು ಕರೆ ನೀಡಿದರು. ಬೈಲಾ ತಿದ್ದುಪಡಿಯ ನಂತರ ಪ್ರಥಮ ಬಾರಿಗೆ ಬೆಂಗಳೂರಿನಿಂದ ಹೊರಗಡೆ ವಾರ್ಷಿಕ ಸರ್ವಸದಸ್ಯರ ಸಭೆ (ಎಜಿಎಂ) ಯನ್ನು ನಡೆಸಲು ತೀರ್ಮಾನಿಸಲಾಗಿದ್ದು, ಹುಬ್ಬಳ್ಳಿಯಲ್ಲಿ ಮುಂದಿನ ನವೆಂಬರ ತಿಂಗಳಲ್ಲಿ ಸರ್ವಸದಸ್ಯರ ಸಭೆ ನಡೆಯುವ ಸಂಭವವಿದೆ ಎಂದು ತಿಳಿಸಿದರು.

ಕೋವಿಡ್ ನಂತರ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ಅಧಿಕಾರ ವಹಿಸಿಕೊಂಡು, ಆದ್ಯತಾನುಸಾರ ವಿಪ್ರರಿಗೆ ಅನುಕೂಲವಾಗುವಂತಹ ಕೆಲಸ-ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ವಿಪ್ರನುಡಿ ಮಾಸಪತ್ರಿಕೆಯ ಪುನರ್ ಪ್ರಕಟಣೆ, ಗಾಯತ್ರಿ ಭವನದ ನವೀಕರಣ, ವಧು-ವರಾನ್ವೇಷಣ ಕೇಂದ್ರದ ಪುನರ್ ಪ್ರಾರಂಭ, ನೂತನ ಕಾಮಗಾರಿಗಳೊಂದಿಗೆ ಸುಸಜ್ಜಿತ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದಲ್ಲಿ ಸುಮಾರು 175 ವಿದ್ಯಾರ್ಥಿನಿಯರುಗಳಿಗೆ ಉದ್ಯೋಗಸ್ಥ ಮಹಿಳೆಯರಿಗೆ ಅವಕಾಶ, ಚಾತುರ್ಮಾಸದಲ್ಲಿ 2022-2023ರಲ್ಲಿ ರಾಜ್ಯದಾದ್ಯಾಂತ ಯತಿಗಳಿಗೆ ಗುರುವಂದನೆ, ಭಿಕ್ಷಾ ಸಮರ್ಪಣೆ, ಆಂಗ್ಲ ಆವೃತ್ತಿಯ ವಿಪ್ರನುಡಿ ಪ್ರಕಟಣೆ, ವ್ಯಾದಿಗ್ರಸ್ಥ ವೃದ್ಧರಿಗೆ, ಆಶಕ್ತರಿಗೆ ಹಾಗೂ ವಿಶೇಷ ವಿಕಲಚೇನತರಿಗೆ ಮಾಸಾಶನ ವ್ಯವಸ್ಥೆ, ಕಾನೂನು ಸಲಹಾ ಸಮಿತಿ ಸ್ಥಾಪನೆ, ಆರ್ಥಿಕವಾಗಿ ತೊಂದರೆಯಲ್ಲಿರುವ ವಿಪ್ರ ವಿದ್ಯಾರ್ಥಿಯರಿಗೆ ವಿದ್ಯಾರ್ಥಿವೇತನ, ರಾಜ್ಯಮಟ್ಟದ ಮಹಿಳಾ ವಿಭಾಗ, ರಾಜ್ಯಮಟ್ಟದ ಯುವ ವಿಭಾಗ, ಆರೋಗ್ಯ ವಿಮೆ, ವೈದ್ಯಕೀಯ ವಿಭಾಗ, ವಿದ್ಯಾನಿಧಿ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ, ವಿಪ್ರ ವ್ಯಾಪಾರ-ವಾಣಿಜ್ಯ ಸಮಿತಿಗಳನ್ನು ರಚಿಸಿ ಅದರಲ್ಲಿ ಕಾರ್ಯೋನ್ಮುಖರಾಗಿ, ಸಮಿತಿಗಳಿಗೆ ನುರಿತ-ಅನುಭವಿ-ದಕ್ಷ ಸಂಚಾಲಕರನ್ನು ನೇಮಿಸಿರುವುದಾಗಿ ತಿಳಿಸಿದರು.

ವಿಪ್ರನುಡಿ ಮಾಸಪತ್ರಿಕೆಯನ್ನು ಉಚಿತವಾಗಿ ಸರ್ವಸದಸ್ಯರಿಗೆ ವಿತರಿಸಲು ಹೆಚ್ಚಿನ ಹಣವು ವ್ಯಯವಾಗುವುದರಿಂದ ದಯಮಾಡಿ ಮಾನ್ಯ ಸದಸ್ಯರು ವಿಪ್ರನುಡಿ ಕನ್ನಡ ಮತ್ತು ವಿಪ್ರನುಡಿ ಇಂಗ್ಲೀಷ್ ಮಾಸಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪಡೆಯಬೇಕೆಂದು ತಿಳಿಸಿದರು. ಶ್ರೀಯುತ ಕೃಷ್ಣಸ್ವಾಮಿ, ವಿ. ಭಾನುಪ್ರಕಾಶ್ ಶರ್ಮಾರವರ ನೇತೃತ್ವದಲ್ಲಿ ಎನ್.ಆರ್.ಐ. ಗಳನ್ನು ಸಂಪರ್ಕಿಸಿ ಅವರಿಂದ ದೇಣಿಗೆ/ವಂತಿಗೆ ಪಡೆದು ಆರ್ಥಿಕವಾಗಿ ದುರ್ಬಲರಾದ ವಿಪ್ರರಿಗೆ ಧನಸಹಾಯ ಮಾಡಲು ಯೋಜಿಸಲಾಗಿದೆ ಎಂದು ತಿಳಿಸಿದರು.

ಮುಂಬರುವ ದಿನಗಳಲ್ಲಿ ಅದ್ಧೂರಿಯಾಗಿ ತ್ರಿಮತಸ್ಥ ಯತಿ ಸಮಾವೇಶ, 2024 ಜನವರಿಯಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರ ಪ್ರಭುವಿನ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಪ್ರಯುಕ್ತ ಸಮಸ್ತ ವಿಪ್ರಬಾಂಧವರು, ಹಿಂದೂ ಜನಾಂಗದವರೊಂದಿಗೆ ಮಿಳಿತವಾಗಿ, ನವರಾತ್ರಿಯ ಸಮಯದಲ್ಲಿ ಶ್ರೀರಾಮ ನಾಮ ತಾರಕ ಹೋಮ-ಶತಕೋಟಿ ರಾಮ ತಾರಕ ಜಪಯಜ್ಞ ಪ್ರಾರಂಭಿಸಿ, ಪಾರಾಯಣದೊಂದಿಗೆ ಪುನರ್ ಪ್ರತಿಷ್ಠಾಪನಾ ದಿನದಂದು ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಶ್ರೀರಾಮ ತಾರಕ ಜಪಯಜ್ಞವನ್ನು ನಡೆಸಬೇಕೆಂದು ಕರೆ ನೀಡಿದರು. ಸಭಾಸದರು ಸಂತಸದಿಂದ ಕರತಾಡನದ ಮೂಲಕ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ಪ್ರಭುವಿನ ಸೇವಾಕಾರ್ಯಗಳಲ್ಲಿ ಭಾಗಿಯಾಗುವುದಾಗಿ ತಿಳಿಸಿದರು.

## ಮಹಿಳಾ ಸಮಾವೇಶ

2024 ಜನವರಿ 6, 7ರಂದು ಬೆಂಗಳೂರಿನಲ್ಲಿ 3ನೇ ವಿಪ್ರ ಮಹಿಳಾ ಸಮಾವೇಶವು ನಡೆಯಲಿದೆಯೆಂದು, ಶ್ರೀಮತಿ ಶುಭಮಂಗಳ ಸುನೀಲ್, ಶ್ರೀಮತಿ ಸಾವಿತ್ರಿ ರಮೇಶ್‌ರವರ ನೇತೃತ್ವದಲ್ಲಿ ನಡೆಯುವ ಈ ಬೃಹತ್ ಸಮಾವೇಶದಲ್ಲಿ ರಾಜ್ಯದಾದ್ಯಂತ ಸುಮಾರು 3-4 ಸಾವಿರ ವಿಪ್ರ ಮಹಿಳೆಯರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಸನಾತನ ಧರ್ಮ ಉಳಿಯಲು ಮಹಿಳೆಯರ ಪಾಲು ಅಧಿಕವಾಗಿದ್ದು ಅತ್ಯವಶ್ಯಕವಾಗಿದೆ. "ನಾರಾಯಣ ಸ್ತುತಿ" ದಿನಂಪ್ರತಿ 10 ಸಾರಿ ಪಾರಾಯಣ ಮಾಡಲು ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀಗಳ ಆದೇಶವಾಗಿದೆ. ಸಂಸ್ಕಾರ-ಸಂಸ್ಕೃತಿ-ಧರ್ಮ ಉಳಿಯಲು ಮಹಿಳೆಯರು ಕಾರಣ. ಈ ಬೃಹತ್ ವಿಪ್ರ ಮಹಿಳಾ ಸಮಾವೇಶಕ್ಕೆ ಅಂದಾಜು 50-60 ಲಕ್ಷ ವ್ಯಯವಾಗಬಹುದೆಂದು ಅಂದಾಜಿಸಲಾಗಿದೆ. ಮಾನ್ಯ ಸದಸ್ಯರು ತನು-ಮನ-ಧನ-ಪ್ರಾಯೋಜಕತ್ವದೊಂದಿಗೆ ಸಹಾಯ-ಸಹಕಾರ ನೀಡಿ ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.



## ಕೇಂದ್ರ ಕಾರ್ಯಕಾರಿಣಿ ಸದಸ್ಯರಿಂದ – ಅನಿಸಿಕೆಗಳ ಮತ್ತು ಸಲಹೆಗಳ ಮಂಡನೆ

**ಶ್ರೀ ಜಿ.ಎಲ್. ನಾಡಿಗೇರ್,** ರಾಣಿಬೆನ್ನೂರು : ಸದಸ್ಯತ್ವ ನೋಂದಾಯಿಸಿದವರಿಗೆ ಸಕಾಲದಲ್ಲಿ ಗುರುತಿನ ಚೀಟಿ ನೀಡುವಂತೆ ಸಲಹೆ ನೀಡಿದರು.

**ಶ್ರೀ ನರಸಿಂಹಮೂರ್ತಿ ಎನ್.ಎಸ್.** ಬೆಂಗಳೂರು : ಎರಡು ವರ್ಷದೊಳಗೆ ಮಹಾಸಭೆಯು ಉತ್ತುಂಗಕ್ಕೇರಿ ಈ ಮಟ್ಟಕ್ಕೆ ಏರಲು ಕಾರ್ಯಪ್ರವೃತ್ತರಾದ ಮಾನ್ಯ ಅಧ್ಯಕ್ಷರನ್ನು ಅಭಿನಂದಸಿ, ಮಹಾಸಭೆಯಲ್ಲಿ ಸಣ್ಣ–ಪುಟ್ಟ ಗುಂಪುಗಾರಿಕೆಗಳು ಕಂಡರು ಎಲ್ಲರನ್ನೂ ಒಟ್ಟುಗೂಡಿಸಿಕೊಂಡು ಹೋಗುತ್ತಿದ್ದಾರೆ ನಮ್ಮ ಅಧ್ಯಕ್ಷರು ಎಂದರು.

**ಶ್ರೀ ಎನ್.ಜಿ. ನಾಗರಾಜ್,** ಬೆಂಗಳೂರು : ಶ್ರೀ ಶಂಕರಾಚಾರ್ಯರ ಪ್ರತಿಮೆ ಅನಾವರಣಗೊಂಡ ಬಗ್ಗೆ ನಿರ್ಣಯ ಮಂಡಿಸಿ, ಅಭಿನಂದನೆ ಕಳುಹಿಸಬೇಕೆಂದರು. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರಿಗೆ ಪ್ರಥಮ ಪ್ರಾಶಸ್ತ್ಯ ನೀಡಿ, ಪ್ರತಿಭಾ ಪುರಸ್ಕಾರ ನೀಡಬೇಕು. ನಂತರ ಅನುದಾನ ಹಾಗೂ ಅನುದಾನರಹಿತ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪುರಸ್ಕರಿಸಬೇಕು ಎಂದರು.

**ಶ್ರೀ ಕಾಳಿಂಗರಾವ್,** ಅಧ್ಯಕ್ಷರು, ಬ್ರಾಹ್ಮಣ ಸಂಘ, ಸೊರಬ, ಶಿವಮೊಗ್ಗ ಜಿಲ್ಲೆ : ಗಾಯತ್ರಿ ಉಪಾಸಕರನ್ನು–ತ್ರಿಮತಸ್ಥರನ್ನು ಸೇರಿಸಿ ಸಂಘಟನಾ ದೃಷ್ಟಿಯಿಂದ ಸಮಾವೇಶ ನಡೆಸುವಂತೆ ಕೋರಿದರು.

**ಶ್ರೀ ಆರ್. ಪ್ರಕಾಶರಾವ್,** ಬಳ್ಳಾರಿ : ಜ್ವಲಂತ ಸಮಸ್ಯೆಗಳಿಂದ ಹೊರಬರಲು ಸಮಾಜವು ಸೂಕ್ತ ಕ್ರಮಕೈಗೊಳ್ಳಲು ಹಾಗೂ ಜನರಲ್ಲಿ ಲವ್–ಜಿಹಾದ್ ಮತಾಂಧತೆ ಹಾಗೂ ಸ್ವಧರ್ಮದ ಬಗ್ಗೆ ಅರಿವು ಮೂಡಿಸವ ಕಾರ್ಯಕ್ರಮ ನಡೆಯಬೇಕೆಂದರು.

**ಶ್ರೀ ರಾಘವೇಂದ್ರ,** ಯಲಹಂಕ : ಭಾರತ ದೇಶಕ್ಕೆ ಹೇಗೆ ನರೇಂದ್ರ ಮೋದೀಜಿ ಹೆಮ್ಮೆಯೋ, ಹಾಗೆಯೆ ಮಹಾಸಭೆಗೆ ಶ್ರೀ ಅಶೋಕ ಹಾರನಹಳ್ಳಿಯವರು ಹೆಮ್ಮೆ ಎಂದರು.

**ಶ್ರೀ ಸಂಜೀವ,** ಯಲಹಂಕ : ಬ್ರಾಹ್ಮಣರ ಅವಹೇಳನಕ್ಕೆ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕು. ಮಹಾಸಭೆ ಇದನ್ನು ಖಂಡಿಸಿ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಬೇಕೆಂದರು.

**ಶ್ರೀ ಬಿ.ಆರ್. ಶ್ರೀನಾಥ್,** ಚಿಂತಾಮಣಿ ಬ್ರಾಹ್ಮಣ ಸಂಘ : ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಕನ್ನಡ ಮಾಧ್ಯಮದ 1 ರಿಂದ 12ನೇ ತರಗತಿ ಮಕ್ಕಳಿಗೆ ನಾವು ವಿದ್ಯಾರ್ಥಿವೇತನ ನೀಡುತ್ತಿದ್ದೇವೆ. ಮಹಾಸಭೆಯಲ್ಲಿಯೂ ಇದೇ ರೀತಿ ಮಾಡಲು ಸಲಹೆ ನೀಡಿದರು.

**ಶ್ರೀ ಅರುಣ್ ಹಿರಣ್ಣಯ್ಯ,** ಬೆಂಗಳೂರು : ರೂ.8,000/= ದಿಂದ ರೂ.52,000/= ದವರೆಗೆ ವಿದ್ಯಾ ಪ್ರೋತ್ಸಾಹ ಧನ ನೀಡಲಾಗಿದೆ, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗು ವಿಶೇಷವಾಗಿ ಧನ ಸಹಾಯ ನೀಡಲು ಅರ್ಜಿ ಆಹ್ವಾನಿಸಲಾಗುವುದೆಂದು ತಿಳಿಸಿದರು.

**ಶ್ರೀ ಎನ್.ಎಸ್. ಸತೀಶ್,** ಬೆಂಗಳೂರು : ನಮ್ಮ ಅಧ್ಯಕ್ಷರು "ಆಡು ಮುಟ್ಟದ ಸೊಪ್ಪಿಲ್ಲ – ರಾಜ್ಯದಾದ್ಯಂತ ಸುತ್ತದ ಊರಿಲ್ಲ" ಎಂದು ತಿಳಿಸಿದರು.

**ಶ್ರೀಮತಿ ಸೌಭಾಗ್ಯಮೂರ್ತಿ,** ಮೈಸೂರು : ಮಹಾನಗರ ಪಾಲಿಕೆ ಮಾಜಿ ಸದಸ್ಯೆಯಾದ ನಾನು ಮೈಸೂರಿನಲ್ಲಿ ಸಂಘಕ್ಕೆ 2,000 ಜನ ಮಹಿಳೆಯರನ್ನು ನೋಂದಾಯಿಸಿ, ಪೇಜಾವರ ಶ್ರೀ ಶ್ರೀಗಳಿಂದ ಕಾರ್ಯಾಲಯ ಉದ್ಘಾಟನೆಯಾಗಿರುತ್ತದೆಯೆಂದು, ಮೂಡಾ ವತಿಯಿಂದ ನಿವೇಶನವು ಮಂಜೂರಾಗಿದೆ ಎಂದು ತಿಳಿಸಿದರು.

**ಶ್ರೀ ಟಿ.ಹೆಚ್.ಕುಲಕರ್ಣಿ,** ಇಳಕಲ್ : ಬ್ರಾಹ್ಮಣರ ಬಗ್ಗೆ ಏಕೆ ಟೀಕೆ ಮಾಡುತ್ತಾರೆ ಎಂದು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು, ಗಾಯತ್ರಿ ಉಪಾಸನೆ ಮಾಡಿದರೆ ಸಕಾರಾತ್ಮಕ ಶಕ್ತಿ ಲಭಿಸುವುದೆಂದು ತಿಳಿಸಿದರು.

**ಶ್ರೀ ರಾಜೇಶ್ ಪ್ರಸಾದ್,** ರಾಯಚೂರು : ಶೇ.10% ಮೀಸಲಾತಿ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರವು ಕೂಡಲೆ ಕ್ರಮಕೈಗೊಳ್ಳುವಂತೆ ತಾಕೀತು ಮಾಡಬೇಕೆಂದು ತಿಳಿಸಿದರು.

**ಶ್ರೀಮತಿ ಮಧುಮತಿ ಮಂಜುನಾಥ್,** ಶಿವಮೊಗ್ಗ : ಕೇಂದ್ರ ಕಾರ್ಯನಿವಾಹಕ ಸಮಿತಿ ಸದಸ್ಯರು ಒಬ್ಬೊಬ್ಬರು ಕನಿಷ್ಠ 25 ಜನ ಸದಸ್ಯರನ್ನು ಮಹಾಸಭೆಗೆ ನೋಂದಾಯಿಸಬೇಕೆಂದೂ, ಹೆಚ್ಚಿನ ಸದಸ್ಯತ್ವ ಮಾಡಿಸಿದವರಿಗೆ ಪ್ರಸಸ್ತಿ ಘೋಷಿಸಬೇಕೆಂದು ತಿಳಿಸಿದರು.

**ಶ್ರೀ ಹರಿಪ್ರಸಾದ್ ಪೆರಿಯಾಪು,** ಸುಳ್ಯ ತಾ॥ : ಅಧ್ಯಕ್ಷರು ಹಾಗೂ ಕಾರ್ಯತಂಡವನ್ನು ಅಭಿನಂದಿಸುತ್ತಾ ಶ್ರೀರಾಮನ ಪುನರ್ ಪ್ರತಿಷ್ಠಾಪನ ಅಂಗವಾಗಿ ಮಹಾಸಭೆಯ ನೇತೃತ್ವದಲ್ಲಿ ರಾಜ್ಯಾದಾದ್ಯಂತ ಒಂದು ತಂಡವು ಪ್ರವಾಸ ಮಾಡಿ, ಪ್ರತಿ ಮನೆಯಲ್ಲೂ 13,000 ಜಪ ಯಜ್ಞ ಮಾಡುವಂತೆ ಸೂಚಿಸಬೇಕೆಂದು, ಇದು ಇಡೀ ಸಮಾಜಕ್ಕೆ ಮಾದರಿಯಾಗಬೇಕೆಂದು ತಿಳಿಸಿದರು.

**ಶ್ರೀ ವಸಂತ ಮೊಕ್ತಾಲಿ,** ಹಾವೇರಿ ಬ್ರಾಹ್ಮಣ ಸಭಾ ಜಿಲ್ಲಾಧ್ಯಕ್ಷರು: ಮಹಾಸಭೆಯ ಕೇಂದ್ರ ಕಛೇರಿಯು ಇನ್ನೂ ಹೆಚ್ಚಿನ ದಕ್ಷತೆಯಿಂದ ಎಲ್ಲರಿಗೂ ಪ್ರತಿಸ್ಪಂದನೆ ಮಾಡಬೇಕೆಂದು ತಿಳಿಸಿದರು.

**ಶ್ರೀ ಹ.ರಾ.ಮಧುಸೂದನ್,** ಬೆಂಗಳೂರು : ಕಾರ್ಯಕರಿಣಿ ಸದಸ್ಯರಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕೆಂದು, ಮಹಿಳಾ ಸಮಾವೇಶಕ್ಕೆ ವೈಯಕ್ತಿಕವಾಗಿ ರೂ.25,000/= ಗಳನ್ನು ನೀಡುವುದಾಗಿ ತಿಳಿಸಿದರು.







**ಶ್ರೀ ಮುರಳೀಧರ್,** ಕೆ.ಆರ್.ಪುರಂ : ಓಂಕಾರೇಶ್ವರದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಬೃಹತ್ ಪುತ್ಥಳಿ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಮಧ್ಯಪ್ರದೇಶ ಸರ್ಕಾರದಿಂದ ನಮ್ಮ ಅಧ್ಯಕ್ಷರಿಗೆ ಅಮಂತ್ರಣ ಬಂದಿರುವುದು ಅಧ್ಯಕ್ಷರ ಕಾರ್ಯವೈಖರಿ ಮಧ್ಯಪ್ರದೇಶಕ್ಕೆ ಮುಟ್ಟಿದೆ ಎಂದು ಸಂತಸ ವ್ಯಕ್ತಪಡಿಸಿದರು.

**ಶ್ರೀ ಡಿ.ವಿ. ರಾಜೇಂದ್ರ ಪ್ರಸಾದ್,** ಉಪಾಧ್ಯಕ್ಷರು : ಕಾಶಿ ಯಾತ್ರೆಯ ಯಾತ್ರಾರ್ಥಿಗಳಿಂದ ಸಂಗ್ರಹಿಸಿದ ಒಟ್ಟು 60,000/= ರೂ.ಗಳ ಚೆಕ್‌ನ್ನು ಮಾಸಾಶನ ನಿಧಿಗೆ ದೇಣಿಗೆಯಾಗಿ ಅಧ್ಯಕ್ಷರಿಗೆ ಹಸ್ತಾಂತರಿಸಿದರು.

**ಶ್ರೀಮತಿ ಶುಭಮಂಗಳ ಸುನೀಲ್,** ರಾಜ್ಯ ಮಹಿಳಾ ವಿಭಾಗದ ಸಂಚಾಲಕಿ : ಮಹಾಸಭಾ ಮಹಿಳಾ ಘಟಕದಿಂದ ಹಲವಾರು ಕಾರ್ಯಕ್ರಮಗಳು ಏರ್ಪಟ್ಟಿದೆ ಎಂದು ತಿಳಿಸುತ್ತಾ, 2024 ಜನವರಿ 6–7 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಿಪ್ರ ಮಹಿಳಾ ಸಮಾವೇಶ ನಡೆಯಲಿದ್ದು, ಪೂಜಾ, ಪಾರಾಯಣ, ವಿವಿಧ ಗೋಷ್ಠಿಗಳು, ಸಂಸ್ಕೃತಿಕ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

**ಶ್ರೀ ಭೀಮಾಶಂಕರ ಕೂಡ್ಲೆ** : ಅಶೋಕ ಹಾರನಹಳ್ಳಿ ಅಧ್ಯಕ್ಷರಾದ ನಂತರ ಮಹಾಸಭೆಯ ಬಗ್ಗೆ ರಾಜ್ಯಾದ್ಯಂತ ಅರಿವು–ಜಾಗೃತಿ ಮೂಡಿದೆ ತಮ್ಮ ಭಾಗದಲ್ಲಿ ಸದಸ್ಯತ್ವ ಅಭಿಯಾನ ಪ್ರಾರಂಭಗೊಂಡಿದೆ ಎಂದು ತಿಳಿಸಿದರು.

**ಶ್ರೀ ಆರ್.ಡಿ. ಕುಲಕರ್ಣಿ** : ಬೆಂಗಳೂರು ನಂತರ ದ್ವಿತೀಯ ಸ್ಥಾನದಲ್ಲಿರುವ ಹುಬ್ಬಳ್ಳಿ – ಧಾರವಾಡದಲ್ಲಿ ಮಹಾಸಭೆಯ ಕಾರ್ಯಾಲಯ ಆರಂಭ ಮಾಡಲು ಮನವಿ ಮಾಡಿದರು.

**ಶ್ರೀ ವೈ.ಎ. ಸುಧಾಕರಬಾಬು,** ಉಪಾಧ್ಯಕ್ಷರು : ಬೆಂಗಳೂರಿನಲ್ಲಿ ಕ್ಷೇತ್ರ ಸಂಘಟಕರನ್ನು ನೇಮಕ ಮಾಡಿ ಸದಸ್ಯತ್ವ ಪ್ರಕ್ರಿಯೆ ಮುಂದುವರಿಸಲು ಅಯೋಜಿಸಲಾಗಿದೆ. ನೇರ ನುಡಿಗೆ ಪ್ರಖ್ಯಾತರಾದ ಅಧ್ಯಕ್ಷರು ಗುಂಪುಗಾರಿಕೆಯನ್ನು ಮಟುಕುಗೊಳಿಸಿ, ಬುದ್ಧಿವಾದ ಹೇಳಬೇಕೆಂದು ತಿಳಿಸಿದರು. ಸ್ಥಳೀಯ ಬ್ರಾಹ್ಮಣ ಸಂಘ–ಸಂಸ್ಥೆಗಳು ಮಹಾಸಭಾ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಭಾಗವಹಿಸಬೇಕೆಂದು, ಯಾವುದೇ ಸಹಕಾರಿ ಬ್ಯಾಂಕುಗಳು ದಿವಾಳಿಯಾದಾಗ ಮಹಾಸಭೆಯ ಜೊತೆಗೆ ತಳುಕು ಹಾಕಿ ಹೀಯಾಳಿಸುವವರನ್ನು ಖಂಡಿಸಬೇಕೆಂದು ತಿಳಿಸಿದರು.

**ಶ್ರೀ ರಾಮರಾವ್,** ದಾವಣಗೆರೆ : ಮದುವೆ ಸಮಾರಂಭಗಳಲ್ಲಿ ದುಂದುವೆಚ್ಚವನ್ನು ನಿಯಂತ್ರಿಸಿ, ಅದೇ ಹಣವನ್ನು ಸಮಾಜದ ಬಡಕುಟುಂಬಗಳಿಗೆ ಸಹಾಯಹಸ್ತ ನೀಡಲು ಡಾ॥ ಎ.ಸಿ. ಶಶಿಕಾಂತ್‌ರವರ ಮಾರ್ಗದರ್ಶನದಲ್ಲಿ ನಮ್ಮ ಜಿಲ್ಲಾ ಬ್ರಾಹ್ಮಣ ಸಮಾಜದಲ್ಲಿ ಕಾರ್ಯೋನ್ಮುಖರಾಗಿರುವುದಾಗಿ ತಿಳಿಸಿ, ಮಹಾಸಭೆಯು ಇದೇ ರೀತಿ ದುರ್ಬಲರಿಗೆ ಸಹಾಯ ಮಾಡಬೇಕೆಂದು ಸಲಹೆ ನೀಡಿದರು.

**ಮಹಾಸಭಾ ಹಾಗೂ ಸಪ್ತರ್ಷಿ ಟ್ರಸ್ಟಿನ ಲೆಕ್ಕಪತ್ರಗಳ ಮಂಡನೆ.**

ಖಜಾಂಚಿ ಶ್ರೀ ವೆಂಕಟೇಶ್ ಎಸ್. ನಾಯಕ್ ರವರು 2022–23ರ ಮಹಾಸಭಾ ಮತ್ತು ಸಪ್ತರ್ಷಿ ಫೌಂಡೇಶನ್ ಸಂಸ್ಥೆಗಳ ಲೆಕ್ಕಪತ್ರಗಳನ್ನು ಮಂಡಿಸಿದರು. ಯಾವುದೇ ದುಂದುವೆಚ್ಚ ಮಾಡಿಲ್ಲವೆಂದೂ, ದೈನಂದಿನ ಖರ್ಚುಗಳ ನಿರ್ವಹಣೆಗೆ ಮಾತ್ರ ಹಣವನ್ನು ವ್ಯಯಿಸಿರುವುದಾಗಿಯೂ. ಮಹಾಸಭಾ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಹೆಚ್ಚಾಗಿ ದಾನಿಗಳಿಂದ ದೇಣಿಗೆ ಪಡೆದು, ಮಹಾಸಭೆಗೆ ಆರ್ಥಿಕವಾಗಿ ಹೊರೆಯಾಗದಂತೆ ನಡೆಸಲಾಗುತ್ತಿದೆಯೆಂದೂ ತಿಳಿಸಿದರು. ಸಭೆಯು ಸರ್ವಾನುಮತದಿಂದ ಲೆಕ್ಕಪತ್ರಗಳನ್ನು ಒಪ್ಪಿ ಅನುಮೋದಿಸಿತು.

**ಮಾನ್ಯ ಅಧ್ಯಕ್ಷರು** ಸದಸ್ಯರು ನೀಡಿದ ಸಲಹೆ–ಸೂಚನೆ–ಅನಿಸಿಕೆ–ಅಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಸಾವಧಾನಚಿತ್ತರಾಗಿ ಅವರ ಅನಿಸಿಕೆಗಳಿಗೆ ಸ್ಪಂದಿಸಿ ಸಮಜಾಯಿಷಿ ನೀಡಿದರು.








ಮಹಾಸಭಾಧ್ಯಕ್ಷರ ಸ್ಪಂದನೆಗೆ, ನೀಡಿದ ಸಮಜಾಯಿಷಿ ಉತ್ತರಗಳಿಗೆ ಸಭೆಯು ಸಂತೋಷ ವ್ಯಕ್ತಪಡಿಸಿತು.

ಮಹಾಸಭಾದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಕಾರ್ತೀಕ್ ಎಸ್. ಬಾಪಟ್. ರಾಜ್ಯದಾದ್ಯಂತ ಆಗಮಿಸಿದ ಮಹಾಸಭೆಯ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಶುಚಿ–ರುಚಿಯಾದ ಉಪಹಾರ–ಭೋಜನವನ್ನು ಉಣಬಡಿಸಿದ ಬೆಣ್ಣೆನಗರಿ ದಾವಣಗೆರೆ ಜಿಲ್ಲಾ ಬ್ರಾಹ್ಮಣ ಸಮಾಜ ಸೇವ ಸಮಿತಿಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸಭಾ ಕಲಾಪಗಳ ಮೊದಲು ಸುಗಮ ಸಂಗೀತದ ದಿಗ್ಗಜ ಶ್ರೀ ಕಿಕ್ಕೇರಿ ಕೃಷ್ಣಮೂರ್ತಿಯವರು ನಾಡಗೀತೆ–ರೈತಗೀತೆಗಳ ಗಾಯನದ ಮೂಲಕ ಸಭಾಸದನರನ್ನು ಜಾಗೃತಗೊಳಿಸಿದರು. ಶ್ರೀ ವಿಜಯೇಂದ್ರ ಗುರುನಾಥ ನಾಡಜೋಶಿಯವರು ವಂದನಾರ್ಪಣೆ ಮಾಡಿದರು. ಶಾಂತಿಸೂಕ್ತದೊಡನೆ ಸಭೆಯು ಸಂಪನ್ನಗೊಂಡಿತು.

**ಸಭೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಮಂಡಿಸಲಾಯಿತು.**
**ಸಭೆಯು ಅವಿರೋಧವಾಗಿ ನಿರ್ಣಯಗಳನ್ನು ಒಪ್ಪಿ ಅನುಮೋದಿಸಿತು.**

**ನಿರ್ಣಯಗಳು :**

1. ಕಾವೇರಿ ನದಿ ನೀರಿನ ಹಂಚಿಕೆಯ ಸಮಸ್ಯೆಯಿಂದ ಉದ್ಭವಿಸಿರುವ ಪರಿಸ್ಥಿಯಲ್ಲಿ ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡುವ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕೆಂದು ಮಹಾಸಭೆ ಆಗ್ರಹಿಸಿತು. ಈ ಸಂಬಂಧ ನಡೆಸುತ್ತಿರುವ ರೈತಪರ ಹೋರಾಟಕ್ಕೆ ಮಹಾಸಭೆ ಬೆಂಬಲ ಸೂಚಿಸುತ್ತದೆ.
2. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ ಮಹತ್ತರವಾದಂತಹ ಮಹಿಳಾ ಮೀಸಲಾತಿಯ ಕ್ರಮವನ್ನು ಮಹಾಸಭೆ ಸ್ವಾಗತಿಸುತ್ತದೆ ಮತ್ತು ಈ ದಿಸೆಯಲ್ಲಿ ಕೇಂದ್ರ ಸರ್ಕಾರವನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ.
3. ಇತ್ತೀಚೆಗೆ ಮಧ್ಯಪ್ರದೇಶದ ಓಂಕಾರೇಶ್ವರ ಬಳಿ ಏಕಾತ್ಮತೆಯನ್ನು ಸಾರುವ ಶ್ರೀ ಶಂಕರಭಗವತ್ಪಾದರ ಬೃಹತ್ ಮೂರ್ತಿಯ ಸ್ಥಾಪನೆ ಸನಾತನ ಧರ್ಮೀಯರಿಗೆ ಅತ್ಯಂತ ಸಂತಸವನ್ನುಂಟು ಮಾಡಿದೆ. ಹಾಗೂ ಈ ಸಂದರ್ಭದಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಮಹಾಸಭೆ ಹಾರ್ದಿಕವಾಗಿ ಅಭಿನಂದಿಸುತ್ತದೆ.
4. ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ದೇವಸ್ಥಾನ ಹಾಗೂ ಪ್ರತಿಷ್ಠಾಪನೆ ಜನವರಿ ತಿಂಗಳಲ್ಲಿ ಜರುಗಲಿದೆ. ಈ ಸಂದರ್ಭದಲ್ಲಿ ಎಲ್ಲಾ ವಿಪ್ರಬಾಂಧವರು ಸಮಸ್ತ ಹಿಂದು ಜನಾಂಗದವರ ಒಡಗೂಡಿ ಮುಂದೆ ಬರುವ ನವರಾತ್ರಿಯ ಸಮಯದಲ್ಲಿ ಪ್ರಾರಂಭಿಸಿ "ಶ್ರೀರಾಮತಾರಕ ನಾಮ ಮಂತ್ರ ಜಪ"ವನ್ನು ಪ್ರತಿದಿನವೂ ನಡೆಸಿ, ಅಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿ ಪ್ರತಿಷ್ಠಾಪನಾ ದಿನವೇ ರಾಜ್ಯದ ಎಲ್ಲ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ "ಶ್ರೀರಾಮ ತಾರಕ ನಾಮ ಯಜ್ಞ" ಹಾಗೂ ರಾಮತಾರಕ ಮಹಾಯಾಗವನ್ನು ನಡೆಸಬೇಕೆಂದು ನಿರ್ಣಯಿಸಲಾಯಿತು.
5. ಇತ್ತೀಚಿನ ದಿನಗಳಲ್ಲಿ ಸನಾತನ ಧರ್ಮದ ಖಂಡನೆ, ಅವಹೇಳನ ಮತ್ತು ಬ್ರಾಹ್ಮಣರ ವಿರುದ್ಧದ ಟೀಕೆಗಳು ಅವ್ಯಾಹತವಾಗಿ ನಡೆದಿರುವುದು ಸಮಾಜದ ಕೆಲವು ಅಸ್ವಾಸ್ಥ್ಯ ಮನಸ್ಸುಗಳಿಗೆ ದ್ಯೋತಕವಾಗಿದ್ದು, ಈ ರೀತಿಯ ಮನಸ್ಥಿತಿಯನ್ನು ಮಹಾಸಭೆ ತೀವ್ರವಾಗಿ ಖಂಡಿಸುತ್ತದೆ.
6. ಸಂವಿಧಾನದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಶೇ.10ರಷ್ಟು ಮೀಸಲಾತಿ ಕೊಡಬಹುದೆಂಬ ನಿಯಮ ಇದ್ದರೂ ಸಹ, ರಾಜ್ಯ ಸರ್ಕಾರಕ್ಕೆ ಮಹಾಸಭೆಯು ಈ ಬಗ್ಗೆ ಮಾಡಿದ ಮನವಿಗೆ ಮನ್ನಣೆ ಕೊಡದೆ ಮತ್ತು ಸಂವಿಧಾನಾತ್ಮಕವಾಗಿರುವ ಕಾನೂನು ಜಾರಿಗೊಳಿಸದೆ ಇರುವುದರಿಂದ ಮಹಾಸಭೆ ನ್ಯಾಯಾಲಯದ ಮೊರೆ ಹೋಗಲು ತೀರ್ಮಾನಿಸಲಾಯಿತು.
7. ವಿಪ್ರ ಸಮುದಾಯದ ಮಹಿಳೆಯರನ್ನು ಸಂಘಟಿತಗೊಳಿಸುವ ದೃಷ್ಟಿಯಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶವನ್ನು ಬೆಂಗಳೂರಿನಲ್ಲಿ ಜನವರಿ 6 ಮತ್ತು 7ರಂದು ನಡೆಸಲು ತೀರ್ಮಾನಿಸಲಾಯಿತು. ಮತ್ತು ಈ ಸಮಾವೇಶದಲ್ಲಿ ರಾಜ್ಯದ ಎಲ್ಲಾ ವಿಪ್ರ ಮಹಿಳೆಯರು ಕ್ರಿಯಾಶೀಲರಾಗಿ ಭಾಗವಹಿಸಬೇಕೆಂದು ಮನವಿ ಮಾಡಿಕೊಳ್ಳಲಾಯಿತು.

**– ಪ್ರಧಾನ ಕಾರ್ಯದರ್ಶಿಗಳು**
**ಶ್ರೀ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ**

### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಶ್ರಯದಲ್ಲಿ

# ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗ

## ಬೆಲಗೂರು ಅವಧೂತ ಶ್ರೀ ಶ್ರೀ ವಿಜಯ ಮಾರುತಿ ಸ್ವಾಮಿಗಳಿಂದ ಆರಂಭ



ಅಯೋಧ್ಯಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ ಮಹಾಸಭೆಯು ಜನವರಿ 22, 2024ರಂದು ಆಯೋಜಿಸಿರುವ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗದ ಸಲುವಾಗಿ ದಿನಾಂಕ 24.10.2023 ಮಂಗಳವಾರ ವಿಜಯದಶಮಿಯಂದು ಸಂಜೆ 6.30 ಘಂಟೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯತ್ರಿ ಮಂದಿರದಲ್ಲಿ ಬೆಲಗೂರು ಶ್ರೀ ವೀರ ಪ್ರತಾಪ ಆಂಜನೇಯ ಸ್ವಾಮಿ ದೇವಾಲಯದ ಅವಧೂತ ಸದ್ಗುರು ಶ್ರೀ ಶ್ರೀ ಬಿಂಧುಮಾಧವ ಗುರುಗಳ ಆಶೀರ್ವಾದದೊಂದಿಗೆ, ಶ್ರೀ ಶ್ರೀ ವಿಜಯ ಮಾರುತಿ ಸ್ವಾಮಿಯವರಿಂದ ರಾಮ ತಾರಕ ಮಂತ್ರದ ಉಪದೇಶ, ಭಜನೆ ಮತ್ತು ಆಶೀರ್ವಾದದೊಂದಿಗೆ ಕಾರ್ಯಕ್ರಮವು, ಬಹುಳ ವಿಧ್ಯುಕ್ತವಾಗಿ ಚಾಲನೆಗೊಂಡಿತು. ಈ ಸಂದರ್ಭದಲ್ಲಿ ಪ್ರಧಾನ ಸಂಚಾಲಕರುಗಳಾದ ಶ್ರೀಯುತರಾದ ರಾಘವೇಂದ್ರ ಭಟ್, ಭಾನುಪ್ರಕಾಶ ಶರ್ಮ ಹಾಗೂ ಹರಿಪ್ರಸಾದ್ ಪೆರಿಯಾಪು, ಖಜಾಂಚಿಗಳಾದ ವಿ.ಎಸ್. ನಾಯಕ್, ಪ್ರಧಾನ ಕಾರ್ಯದರ್ಶಿ ಶ್ರೀಧರಮೂರ್ತಿ, ಮಾಜಿ ಅಧ್ಯಕ್ಷರಾದ ಡಾ॥ ಎಂ.ಆರ್.ವಿ. ಪ್ರಸಾದ್, ಉಪಾಧ್ಯಕ್ಷರುಗಳಾದ ಹೆಚ್.ಎನ್. ಸುರೇಶ್, ರಾಜೇಂದ್ರ ಪ್ರಸಾದ್, ಪಿ.ಸಿ. ರಾವ್ ಹಾಗೂ ಪುರುಶೋತ್ತಮ್, ತಾರನಾಥ, ಅರುಣ್, ಮಂಜುನಾಥ್ ಶಾಸ್ತ್ರಿ ಹಾಗೂ ಹಲವು ಪಧಾದಿಕರಿಗಳು ಪಾಲ್ಗೊಂಡು ಶ್ರೀ ಅವಧೂತರಿಂದ ಜಪ ಮಂತ್ರದ ಉಪದೇಶವಾಗಿ **"ಶ್ರೀರಾಮ ಜಯರಾಮ ಜಯ ಜಯ ರಾಮ"** ಎಂಬ ಮಹಾಮಂತ್ರವನ್ನು ಜಪಿಸುವ ಮೂಲಕ ಕಾರ್ಯಕ್ರಮ ಆರಂಭಗೊಂಡಿತು.

# ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗ ಮಾಹಿತಿ ಪತ್ರ ಬಿಡುಗಡೆ



ಲೋಕಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಶ್ರೀ ಅಶೋಕ್ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ಹಮ್ಮಿಕೊಂಡಿರುವ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗದ ಮಾಹಿತಿ ಪತ್ರ ಬಿಡುಗಡೆಯನ್ನು ಬಸವನಗುಡಿಯ ಶ್ರೀ ದೊಡ್ಡಗಣಪತಿ ದೇವಸ್ಥಾನದಲ್ಲಿ ದಿನಾಂಕ 17/10/23ರ ಸಂಜೆ ನೆರವೇರಿಸಲಾಯಿತು. ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಆಹ್ವಾನ ಪತ್ರಿಕೆಯ ಬಿಡುಗಡೆ ಮಾಡಿ ಮಾತನಾಡಿದ ಅವರು ರಾಜ್ಯದ ಎಲ್ಲ ಜನಾಂಗದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ರಾಮ ಚಂದ್ರ ಪ್ರಭುವಿನ ಕೃಪೆಗೆ ಪಾತ್ರರಾಗಬೇಕಾಗಿ ಕೋರಿದರು. ಈ ಸಂದರ್ಭದಲ್ಲಿ ಮಹಾಸಭಾದ ಪ್ರಧಾನ ಕಾರ್ಯದರ್ಶಿಗಳಾದ ಎಸ್ ಶ್ರೀಧರಮೂರ್ತಿ ಉಪಾಧ್ಯಕ್ಷರಾದ ಹಾಗೂ ಕಾರ್ಯಕ್ರಮದ ಪ್ರಧಾನ ಸಂಚಾಲಕರು ಆದ ಡಾ.ಎಸ್ ರಾಘವೇಂದ್ರ ಭಟ್, ಉಪಾಧ್ಯಕ್ಷರಾದ ಶ್ರೀ ಡಿ ವಿ ರಾಜೇಂದ್ರ ಪ್ರಸಾದ್, ಶ್ರೀ ಶಿವಶಂಕರ್ ಸಂಘಟನಾ ಕಾರ್ಯದರ್ಶಿಗಳಾದ ಟಿ ಎಸ್ ಸುಬ್ರಹ್ಮಣ್ಯ, ಎನ್ ನರಸಿಂಹಮೂರ್ತಿ, ಕಾ ಸ ಸದಸ್ಯರಾದ ಕಿಕ್ಕೇರಿ ಕೃಷ್ಣಮೂರ್ತಿ ಹಾಗೂ ದೇವಸ್ಥಾನದ ಅರ್ಚಕರು ಮತ್ತು ಅನೇಕ ವಿಪ್ರಬಾಂಧವರು ಉಪಸ್ಥಿತರಿದ್ದರು.

# ಧಾರ್ಮಿಕ ದತ್ತಿ ಇಲಾಖಾ ಸಚಿವರಿಂದ ಶುಭ ಹಾರೈಕೆ



ಲೋಕ ಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷಿತೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ರಾಜ್ಯಮಟ್ಟದಲ್ಲಿ ಬೃಹತ್ ಕಾರ್ಯಕ್ರಮವಾಗಿ ಹಮ್ಮಿಕೊಂಡಿರುವ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗ ವನ್ನು ದಿನಾಂಕ 24.10.2023 ಮಂಗಳವಾರ, ವಿಜಯದಶಮಿಯಂದು ಆರಂಭಗೊಂಡು, ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ಪ್ರತಿಷ್ಠಾಪನ ಮಹೋತ್ಸವದ ದಿನದಂದು ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸಂಪನ್ನಗೊಳಿಸಲು ಮಹಾ ಸಭಾ ವತಿಯಿಂದ ತೀರ್ಮಾನಿಸಲಾಗಿದ್ದು, ಇದರ ಪ್ರಯುಕ್ತವಾಗಿ ದಿನಾಂಕ 16/10/23 ರಂದು ಕರ್ನಾಟಕ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ಸಚಿವರಾದ ಶ್ರೀ ರಾಮಲಿಂಗ ರೆಡ್ಡಿ ಅವರನ್ನು ಮಹಾಸಭಾದ ಉಪಾಧ್ಯಕ್ಷರು ಹಾಗೂ ಈ ಕಾರ್ಯಕ್ರಮದ ಪ್ರಧಾನ ಸಂಚಾಲಕರು ಆದ ಡಾ. ಎಸ್ ರಾಘವೇಂದ್ರ ಭಟ್ ಅವರು ಹಾಗೂ ಮಹಾ ಸಭೆಯ ಸಂಘಟನಾ ಕಾರ್ಯದರ್ಶಿಗಳಾದ ಖಿ ಖ ಸುಬ್ರಹ್ಮಣ್ಯಂ ಮತ್ತು ರವಿಕುಮಾರ್ ಅವರು ಭೇಟಿ ಮಾಡಿ, ಕಾರ್ಯಕ್ರಮದ ಕುರಿತು ವಿವರಣೆಯನ್ನು ನೀಡಿದರು. ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಅವರು ಈ ಕಾರ್ಯಕ್ರಮಕ್ಕೆ ಉತ್ತಮವಾದ ಪ್ರತಿಕ್ರಿಯೆಯನ್ನು ನೀಡಿ ದೇಶದ ಸುಭಿಕ್ಷಿತೆಗಾಗಿ ನಡೆಯುತ್ತಿರುವ ಈ ಕಾರ್ಯಕ್ರಮವು ಅತ್ಯಂತ ಅಗತ್ಯ ಮತ್ತು ವಿಶೇಷವಾಗಿದ್ದು, ಈ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯಿಂದ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಮತ್ತು ಮುಜರಾಯಿ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲಿ ಶ್ರೀ ರಾಮ ತಾರಕ ಜಪವನ್ನು ನೆರವೇರಿಸಲು ಹಾಗೂ ಅಯೋಧ್ಯೆಯಲ್ಲಿ ಶ್ರೀರಾಮ ರಾಮಮಂದಿರ ಪ್ರತಿಷ್ಠಾಪನಾ ದಿನದಂದು ಶ್ರೀ ರಾಮ ತಾರಕ ಮಹಾಯಜ್ಞವನ್ನು ನಡೆಸುವಂತೆ ಸುತ್ತೋಲೆಯನ್ನು ಹೊರಡಿಸುವುದಾಗಿ ತಿಳಿಸಿದರು.


ಜಾಹಿರಾತು

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**
**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**
**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**
**ದೂರವಾಣಿ : 2672 2267, 98866 55755**

# ಐತಿಹಾಸಿಕ ರಾಜ್ಯ – ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ



ಮಹಾಸಭಾಧ್ಯಕ್ಷರಾದ **ಶ್ರೀ ಅಶೋಕ ಹಾರನಹಳ್ಳಿರವರ** ಮಾರ್ಗದರ್ಶನದಲ್ಲಿ, ಮಹಾಸಭಾ **ರಾಜ್ಯ ಉಪಾಧ್ಯಕ್ಷರುಗಳಾದ ಶ್ರೀಮತಿ ರೂಪಾ ಶಾಸ್ತ್ರಿ ಮತ್ತು ಶ್ರೀ ಪಿ.ಸಿ. ರಾವ್‌ರವರ** ಉಸ್ತುವಾರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ರಾಜ್ಯ ವ್ಯಾಪಾರ ಮತ್ತು ವಾಣಿಜ್ಯೋದ್ಯಮ ವಿಭಾಗದಿಂದ **ರಾಜ್ಯಮಟ್ಟದ ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶವು** ದಿನಾಂಕ 08–10–2023ರ ಭಾನುವಾರ ಬೆಂಗಳೂರಿನ ಮೆಜೆಸ್ಟಿಕ್ ಕೆ.ಜಿ. ರಸ್ತೆಯಲ್ಲಿರುವ ಸರ್ ಎಂ.ವಿ. ಆಡಿಟೋರಿಯಂ, ಎಫ್‌ಕೆಸಿಸಿಐ ಭವನದಲ್ಲಿ ವಿಜೃಂಭಣೆಯಿಂದ ಎಲ್ಲಾ ಹಂತಗಳಲ್ಲಿ ಯಶಸ್ಸನ್ನು ಸಾಧಿಸಿ, ಸರ್ವರ ಮನಸೂರೆಗೊಂಡಿತು.



ಸಮಾವೇಶದಲ್ಲಿ ಗುಡಿ ಕೈಗಾರಿಕೆ, ಮನೆಯಲ್ಲಿ ತಯಾರಿಸಿ ವ್ಯಾಪಾರ ಮಾಡುವ ಸಣ್ಣ ಸಣ್ಣ ಉದ್ಯಮಿಗಳಿಂದ ಹಿಡಿದು, ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿ, ನೂರಾರು ಕೋಟಿ ವ್ಯವಹಾರ ನಡೆಸುವ ದೊಡ್ಡ ಉದ್ಯಮಪತಿಗಳು ಸೇರಿದಂತೆ 2,000ಕ್ಕೂ ಹೆಚ್ಚಿನ ವಾಣಿಜ್ಯೋದ್ಯಮಿಗಳು ಭಾಗವಹಿಸಿ, ಸಮಾವೇಶದ ಯಶಸ್ಸಿಗೆ ಪಾತ್ರರಾದರು. ಸಮಾವೇಶದಲ್ಲಿ ವಿಪ್ರ ವಾಣಿಜ್ಯೋದ್ಯಮಿಗಳು ತಮ್ಮ ತಮ್ಮ ವ್ಯಾಪಾರ ಮತ್ತು ವ್ಯವಹಾರಗಳ ವಿನಿಮಯ ಮತ್ತು ಸಂಪರ್ಕವನ್ನು ಮಾಡಿಕೊಂಡರು. ಸಮಾವೇಶದ ಉದ್ದೇಶವಾಗಿದ್ದ ವಿಪ್ರ ಬಾಂಧವರ ನಡುವೆ ವ್ಯಾಪಾರ ಮತ್ತು ವ್ಯವಹಾರ ಕುದುರಿಸುವ ಮತ್ತು ಹೆಚ್ಚಿಸುವ ಆಶಯ ಯಶಸ್ವಿಯಾಗಿ ನೆರವೇರಿತು.

ಸಮಾವೇಶದಲ್ಲಿ 60ಕ್ಕೂ ಹೆಚ್ಚಿನ ವ್ಯಾಪಾರದ ಮಳಿಗೆಗಳನ್ನು ಹಾಕಲಾಗಿತ್ತು. ಈ ಮಳಿಗೆಗಳಲ್ಲಿ ಮನೆಯಲ್ಲಿ ತಯಾರಿಸಿದ ಕುರುಕುಲು ತಿಂಡಿಯಿಂದ ಹಿಡಿದು, ಮಕ್ಕಳ ಜ್ಞಾನಾರ್ಜನೆಗೆ ಪುಸ್ತಕಗಳ ಮಳಿಗೆ, ಚಿನ್ನ–ಬೆಳ್ಳಿ ಆಭರಣದ ಮಳಿಗೆ, ಸೀರೆಗಳ ಮಳಿಗೆ, ಕೃಷಿ ಯಂತ್ರೋಪಕರಣಗಳ ಮಳಿಗೆ, 1 ಗ್ರಾಂ ಜ್ಯೂವೆಲ್ಲರಿ, ಸಾವಯವ ಧಾನ್ಯಗಳು, ಪಾನೀಯಗಳು, ತಿಥಿ–ವಾರ–ನಕ್ಷತ್ರಗಳನ್ನು ಕರಾರುವಕ್ಕಾಗಿ ತಿಳಿಸುವ ಪಂಚಾಂಗ ಯಂತ್ರ ಹಾಗೂ ಇನ್ನಿತರ ಮಳಿಗೆಗಳು ಸರ್ವರ ಮನಸೂರೆಗೊಂಡವು.

**ಸಮಾವೇಶದ ಉದ್ಘಾಟನೆಯನ್ನು** ಮಧ್ಯಾಹ್ನ 2.30 ಗಂಟೆಗೆ ಗರುಡಾ ಫೌಂಡೇಶನ್‌ನ ಸಂಸ್ಥಾಪಕರಾದ **ಶ್ರೀಮತಿ ಮೇಧಿನಿ ಉದಯ ಗರುಡಾಚಾರ್** ನೆರವೇರಿಸಿದರು. ಎಲ್ಲಾ ಮಳಿಗೆಗಳನ್ನು ಸಂದರ್ಶಿಸಿ, ಸಮಾವೇಶದ ಸಭಾಂಗಣವನ್ನು ಪ್ರವೇಶಿಸಿದ ಶ್ರೀಮತಿ ಮೇಧಿನಿಯವರು ಅತ್ಯಂತ ಅಚ್ಚುಕಟ್ಟಾಗಿ ವ್ಯವಸ್ಥೆಯನ್ನು ಮಾಡಿರುವುದಕ್ಕೆ ಸಂತೋಷದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ವಾಣಿಜ್ಯ ವಿಭಾಗದಿಂದ ಶ್ರೀಮತಿ ಮೇಧಿನಿಯವರಿಗೆ ಗೌರವ ಸಮರ್ಪಣೆಯನ್ನು ಸಲ್ಲಿಸಲಾಯಿತು ಮಧ್ಯಾಹ್ನ 2.30ಕ್ಕೆ ಪೂರ್ಣಿಮ ರಜನಿರವರ ನಿಧಮ್ ಸಂಸ್ಥೆಯವರು ಸಂಯಮ ಎಂಬ ನೃತ್ಯರೂಪಕವನ್ನು ಪ್ರದರ್ಶಿಸಿದರು.

### ಮೊದಲ ವಿಚಾರಗೋಷ್ಠಿ




ಮಧ್ಯಾಹ್ನ 3.00 ಗಂಟೆಗೆ **ವ್ಯಾಪಾರ ಜಗತ್ತಿನಲ್ಲಿ ಬ್ರಾಹ್ಮಣರು ಎದುರಿಸುವ ಸವಾಲುಗಳು ಮತ್ತು ಅವಕಾಶಗಳು** ಎಂಬ ಶೀರ್ಷಿಕೆಯಡಿಯಲ್ಲಿ ಪ್ರಥಮ ಪ್ಯಾನಲ್ ಚರ್ಚೆ ಪ್ರಾರಂಭವಾಯಿತು. ಖ್ಯಾತ ಸ್ಟಾರ್ಟಪ್ ಮೆಂಟರ್ ಶ್ರೀಮತಿ ಶಕುಂತಲಾ ಐಯ್ಯರ್ ಸಂಚಾಲಕತ್ವದಲ್ಲಿ ಚೇತನ್ ಎಸ್., ಉಮೇಶ್ ಅಣ್ಣೆಕೆರೆ, ರವಿಶಂಕರ್, ಮೋಹಿನಿ ವಾಮನಾಚಾರ್ಯ, ಜಿ. ನವೀನ್, ದಿಶಾ ಮದನ್, ಅರುಣ್ ಅಡಿಗರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದೆ ಮಂಡಿಸಿದರು. ವೀಕ್ಷಕರ ಸಾಲಿನಲ್ಲಿ ಕುಳಿತು ಎಲ್ಲಾ ದಿಗ್ಗಜ ವಾಣಿಜ್ಯೋದ್ಯಮಿಗಳ ವಿಚಾರಗಳನ್ನು ಆಲಿಸುತ್ತಿದ್ದ ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ವಾಣಿಜ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ, ಯಶಸ್ಸನ್ನು ಸಾಧಿಸಿರುವ ತಾವೆಲ್ಲರೂ ವಿಪ್ರ ಸಮಾಜದ ಯುವ ಸಮುದಾಯವು ನೂತನ ಉದ್ದಿಮೆಯನ್ನು ಪ್ರಾರಂಭಿಸಲು ಮತ್ತು ಬೆಳೆಸಲು ಅವಶ್ಯಕವಾದ ಸಹಕಾರ ಮತ್ತು ಮಾರ್ಗದರ್ಶನವನ್ನು ನೀಡಲು ಅನುಕೂಲ ವಾಗುವಂತಹ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕೆಂದು ಕೋರಿದರು.

ಮೊದಲ ಪ್ಯಾನಲ್ ಚರ್ಚೆಯ ನಂತರ ಸುಮಾರು

25ಕ್ಕೂ ಹೆಚ್ಚಿನ ವಿಪ್ರ ವಾಣಿಜ್ಯೋದ್ಯಮಿಗಳು 30 ಸೆಕೆಂಡುಗಳಲ್ಲಿ ತಮ್ಮ ತಮ್ಮ ಉದ್ದಿಮೆಯ ಪರಿಚಯವನ್ನು ಮಾಡಿಕೊಂಡರು. ಪ್ರೇಕ್ಷಕರಿಂದಲೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡಲಾಗಿತ್ತು. 10ಕ್ಕೂ ಹೆಚ್ಚಿನ ವಾಣಿಜ್ಯೋದ್ಯಮಿಗಳು ಈ ಸದವಕಾಶವನ್ನು ಉಪಯೋಗಿಸಿಕೊಂಡರು.

### ಎರಡನೆ ವಿಚಾರಗೋಷ್ಠಿ




ಸಂಜೆ 5.00 ಗಂಟೆಗೆ **ಭಾರತದಲ್ಲಿ ಸ್ಟಾರ್ಟ್‌ಅಪ್‌ಗಳು ಮತ್ತು ವ್ಯಾಪಾರದಲ್ಲಿ ಬ್ರಾಹ್ಮಣರ ಪ್ರಸ್ತುತ ಸ್ಥಿತಿ** ಎಂಬ ಶೀರ್ಷಿಕೆಯಡಿಯಲ್ಲಿ 2ನೇ ಪ್ಯಾನಲ್ ಚರ್ಚೆಯು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಅಧ್ಯಕ್ಷತೆಯಲ್ಲಿ ಮತ್ತು ಶ್ರೀಮತಿ ಶಕುಂತಲಾ ಐಯ್ಯರ್‌ರವರ ಸಂಚಾಲಕತ್ವದಲ್ಲಿ ಪ್ರಾರಂಭವಾಯಿತು. ಈ ಚರ್ಚೆಯಲ್ಲಿ ನೂರಾರು ಕೋಟಿ ವಹಿವಾಟು ನಡೆಸುತ್ತಿರುವ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಹಿರಿಯ ವಿಪ್ರ ವಾಣಿಜ್ಯೋದ್ಯಮಿಗಳಾದ ಸೋನಾ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀ ಯಜ್ಞನಾರಾಯಣ ಕಮ್ಮಾಜೆ, ಹ್ಯಾಂಗ್ಯೋ ಐಸ್‌ಕ್ರೀಂನ ಮುಖ್ಯಸ್ಥ ಶ್ರೀ ಪ್ರದೀಪ್ ಪೈ, ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ವಾಣಿಜ್ಯೋದ್ಯಮಿಗಳಿಗೆ ದೊರಕುತ್ತಿರುವ ಸೌಲಭ್ಯಗಳ ಮಾಹಿತಿಗಳನ್ನು ನೀಡಲು ಹಿರಿಯ ಐಎಎಸ್ ಅಧಿಕಾರಿ ಶ್ರೀ ರಮೇಶ್, ವಿಪ್ರ ಛೇಂಬರ್ ಆಫ್ ಕಾಮರ್ಸ್‌ನ ಸಂಸ್ಥಾಪಕ ಶ್ರೀ ವಿ.ಕೆ. ದೀಕ್ಷಿತ್, ಖ್ಯಾತ ಚಲನಚಿತ್ರ ನಿರ್ಮಾಪಕಿ ಮತ್ತು ನಟಿ ಶ್ರೀಮತಿ ರೂಪಾ ಐಯ್ಯರ್, ಶಿಕ್ಷಣತಜ್ಞ ಶ್ರೀ ಶಶಿಭೂಷಣ ಹೆಗಡೆ, ನ್ಯೂಮೆಡ್ ಡಯೋಗ್ನೋಸ್ಟಿಕ್‌ನ ಸಂಸ್ಥಾಪಕರಾದ ಶ್ರೀ ಮುರಳಿ ಆರ್. ನಾಡಿಗ್ ಮತ್ತು ಸೆಲ್ಕೋ ಸೋಲಾರ್‌ನ ಡಿಜಿಎಂ ಶ್ರೀ ಪ್ರಸನ್ನ ಹೆಗಡೆ ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ಸಭೆಯಲ್ಲಿ ಹಂಚಿಕೊಂಡರು.

### ಸಮಾವೇಶ – ಸಮಾರೋಪ ಸಮಾರಂಭ

ಸಂಜೆ 6.30ಕ್ಕೆ ಸಮಾವೇಶದ ಪ್ರಮುಖ ಘಟ್ಟ ಸಭಾ ಕಾರ್ಯಕ್ರಮವು ವೇದಘೋಷ ಮತ್ತು ದೀಪ ಬೆಳಗುವ ಮೂಲಕ ಪ್ರಾರಂಭಿಸಲಾಯಿತು. ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರು, ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಸಿ.ಕೆ. ರಾಮಮೂರ್ತಿ ಮತ್ತು ಕೆಡೆನ್ಸ್–90 ಸಂಸ್ಥೆಯ ಸಂಸ್ಥಾಪಕ ಶ್ರೀ ಚೇತನ್ ರಾಮ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು, ವಿಪ್ರ ವಾಣಿಜ್ಯ ಸಮಾವೇಶದ ಉಸ್ತುವಾರಿಗಳಾದ ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ರೂಪಾ ಶಾಸ್ತ್ರಿ, ಶ್ರೀ ಪಿ.ಸಿ. ರಾವ್ ಹಾಗೂ ರಾಜ್ಯ ಉಪಾಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದ್ ಮತ್ತು ವಲಯ ಉಪಾಧ್ಯಕ್ಷರಾದ ಶ್ರೀ ಶ್ರೀಧರ ಶರಾಫ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಭಾ ವೇದಿಕೆಯಲ್ಲಿದ್ದ ಗಣ್ಯರನ್ನು ಮತ್ತು ಸರ್ವರನ್ನು ಶ್ರೀಮತಿ ರೂಪಾ ಶಾಸ್ತ್ರಿಯವರು ತಮ್ಮ ಸ್ವಾಗತ ಭಾಷಣದ ಮೂಲಕ ಸ್ವಾಗತಿಸಿದರು. ಶ್ರೀ ಪಿ.ಸಿ. ರಾಯರು ಸಮಾವೇಶದ ಔಚಿತ್ಯವನ್ನು ತಮ್ಮ ಪ್ರಾಸ್ತಾವಿಕ ಭಾಷಣದ ಮೂಲಕ ತಿಳಿಸಿದರು.

### ವಿಪ್ರ ವಾಣಿಜ್ಯ ರತ್ನ ಪ್ರಶಸ್ತಿ




ವಾಣಿಜ್ಯೋದ್ಯಮ ಕ್ಷೇತ್ರದಲ್ಲಿ ದೊಡ್ಡ ಹೆಸರು ಮತ್ತು ಯಶಸ್ಸನ್ನು ಸಾಧಿಸಿದ ಹಿರಿಯ ವಿಪ್ರ ವಾಣಿಜ್ಯೋದ್ಯಮಿಗಳಾದ ಸೋನಾ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀ ಯಜ್ಞನಾರಾಯಣ ಕಮ್ಮಾಜೆ, ಹ್ಯಾಂಗ್ಯೋ ಐಸ್‌ಕ್ರೀಂನ ಸಂಸ್ಥಾಪಕರಾದ ಶ್ರೀ ಪ್ರದೀಪ್ ಪೈ, ಸ್ಟಾರ್ಟಪ್ ಮೆಂಟರ್ ಶ್ರೀಮತಿ ಶಕುಂತಲಾ ಐಯ್ಯರ್, ಪ್ರಾರಸ್ ಬೈಯೋಸೈನ್ಸಸ್ ಪ್ರೈ. ಲಿ. ಸಂಸ್ಥೆಯ ನಿರ್ದೇಶಕಿ ಡಾ। ಸುಜಾತಾ ಓಜಾ, ವೆನ್ನಸ್ ಎಲೆಕ್ಟ್ರಿಕ್ ಪ್ರೈ.ಲಿ. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಂ.ವಿ. ಸತ್ಯನಾರಾಯಣ, ಕ್ಯಾನರೀಸ್ ಆಟೋಮೇಷನ್ ಸಂಸ್ಥೆ ಸಹ ಸಂಸ್ಥಾಪಕರಾದ ಶ್ರೀ ರಘು ಚಂದ್ರಶೇಖರಯ್ಯ ಇವರೆಲ್ಲರಿಗೆ ವಿಪ್ರ ವಾಣಿಜ್ಯ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

### ಅಧ್ಯಕ್ಷರ ಭಾಷಣ

**ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡುತ್ತಾ, ಈ ವಾಣಿಜ್ಯೋದ್ಯಮಿಗಳ ಸಮಾವೇಶ ಮಹಾಸಭಾ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. 2 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಾಣಿಜ್ಯೋದ್ಯಮಿಗಳನ್ನು ಸೇರಿಸಿ, ಹೆಚ್ಚಿನ ಮುತುವರ್ಜಿ ವಹಿಸಿ ಅಚ್ಚುಕಟ್ಟಾಗಿ ಸಮಾವೇಶವನ್ನು ನಿರ್ವಹಿಸಿದ ಶ್ರೀಮತಿ ರೂಪಾಶಾಸ್ತ್ರಿ, ಶ್ರೀ ಪಿ.ಸಿ. ರಾವ್ ಮತ್ತು ಶ್ರೀ ಉಮೇಶ ಶಾಸ್ತ್ರಿಯವರನ್ನು ಅಭಿನಂದಿಸಿದರು. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ವಾಣಿಜ್ಯೋದ್ಯಮ ವಿಭಾಗಗಳನ್ನು ರಚಿಸಿ, ವಿಪ್ರ ವಾಣಿಜ್ಯೋದ್ಯಮಿಗಳನ್ನು ಸಂಘಟಿಸಿ, ನಮ್ಮವರ ಮಧ್ಯೆ ಹೆಚ್ಚಿನ ವ್ಯಾಪಾರ ಮತ್ತು ವ್ಯವಹಾರ ನಡೆಸಲು ಈ ಸಮಾವೇಶವು ನಾಂದಿಯಾಗಿದೆ ಹಾಗೂ ವಾಣಿಜ್ಯೋದ್ಯಮ ವಿಭಾಗಕ್ಕೆ ಹೆಚ್ಚಿನ ಜವಾಬ್ದಾರಿ**

**ಬಂದಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಮಾಜದ ಉದ್ಯಮಪತಿಗಳು ಸಮಾಜದ ಏಳಿಗೆಗೆ ಶ್ರಮಿಸಬೇಕು ಹಾಗೂ ಯುವ ಸಮುದಾಯವು ಉದ್ದಿಮೆಗಳನ್ನು ಪ್ರಾರಂಭಿಸಲು ಸೂಕ್ತ ರೀತಿಯಲ್ಲಿ ಬೆಂಬಲ ಮತ್ತು ಮಾರ್ಗದರ್ಶನವನ್ನು ನೀಡಬೇಕೆಂದು ಕೋರಿದರು. ವಂದನಾರ್ಪಣೆಯನ್ನು ವಿಪ್ರ ವಾಣಿಜ್ಯ ಸಮಾವೇಶದ ಸಂಚಾಲಕ ಶ್ರೀ ಉಮೇಶ ಶಾಸ್ತ್ರಿ ನೆರವೇರಿಸಿದರು.**

ಸಭಾ ಕಾರ್ಯಕ್ರಮದ ನಂತರ ಸರ್ವರಿಗೂ ರಾತ್ರಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸಮಾವೇಶದಲ್ಲಿ ಮಧ್ಯಾಹ್ನದ ಭೋಜನ ಮತ್ತು ಸಂಜೆ ಲಘು ಉಪಹಾರದ ವ್ಯವಸ್ಥೆಯನ್ನು ಹಲವಾರು ಸಮಾಜದ ದೇಣಿಗೆದಾರರ ತುಂಬು ಸಹಕಾರ ಉಚಿತವಾಗಿ ವಾಣಿಜ್ಯೋದ್ಯಮ ವಿಭಾಗದಿಂದ ಏರ್ಪಡಿಸಲಾಗಿತ್ತು. ಶ್ರೀ ಮಾತಾಸ್ ಕಾಫಿಯವರು ಸಮಾವೇಶದಲ್ಲಿ ನಿರಂತರವಾಗಿ ಸಾವಿರಾರು ವಾಣಿಜ್ಯೋದ್ಯಮಿಗಳಿಗೆ ಉಚಿತವಾಗಿ ಕಾಫಿ ವಿತರಣೆಯನ್ನು ನೆರವೇರಿಸಿದರು.

ನಮ್ಮೆಲ್ಲರ ಆಶಯದಂತೆ, **ಕರ್ನಾಟಕದ ಅಗ್ರಗಣ್ಯ ವಿಪ್ರ ಸಂಘಟನೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೇತೃತ್ವದಲ್ಲಿ ಎಲ್ಲಾ ವಿಪ್ರ ವಾಣಿಜ್ಯೋದ್ಯಮಿಗಳನ್ನು ಸಂಘಟಿಸಲು, ವಾಣಿಜ್ಯ ಸಂಘಟನೆಗಳಾದ ವಿಪ್ರ ಬಿಸಿನೆಸ್ ಫೋರಂ, ಎಫ್‌ಕೆಸಿಸಿಐ, ಬಿಸಿನೆಸ್ ಬೈ ಬ್ರಾಹ್ಮಿನ್ಸ್, ದ್ವಿಜ ಎಂಟರ್‌ಪ್ರೆನ್ಯೂರ್ಸ್, ಸನಾತನಾ ಎಂಟರ್‌ಪ್ರೆನ್ಯೂರ್ಸ್ ಅಸೋಸಿಯೇಷನ್, ವಿಪ್ರ ಛೇಂಬರ್ ಆಫ್ ಕಾಮರ್ಸ್‌ನ ಪದಾಧಿಕಾರಿಗಳು ಸಹಕರಿಸಿದರು. ಸಮಾವೇಶದ ಆಯೋಜನೆಯಲ್ಲಿ ಡ್ಯಾಕ್ಸ್ ಆರೋ ಮತ್ತು ಡಿಜಿಟಲ್ ಪಿತಾ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡು ಸಮಾವೇಶದ ಯಶಸ್ಸಿಗೆ ತಮ್ಮ ಸೇವೆಯನ್ನು ಸಲ್ಲಿಸಿದರು.**

**ಕಾಲಕಾಲಕ್ಕೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿ, ಸದಾ ಉತ್ಸಾಹದ ಚಿಲುಮೆಯಾಗಿ ನಮ್ಮ ಬೆನ್ನು ತಟ್ಟುತ್ತಾ, ಹುರಿದುಂಬಿಸುತ್ತಿದ್ದ ನಮ್ಮ ಪ್ರೀತಿಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ನೇತೃತ್ವದಲ್ಲಿ ಮಹಾಸಭೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗುವಂತಹ ಯಶಸ್ಸು ಮತ್ತು ಈಗಿನ ಕಾಲಮಾನಕ್ಕೆ ಅತ್ಯಂತ ಅವಶ್ಯಕವಾಗಿದ್ದ ವಿಪ್ರ ವಾಣಿಜ್ಯೋದ್ಯಮ ಕ್ಷೇತ್ರವನ್ನು ಸಂಘಟಿಸುವ ಪ್ರಯತ್ನದಲ್ಲಿ ವಿಪ್ರ ವಾಣಿಜ್ಯ ಸಮಾವೇಶವು ಯಶಸ್ಸನ್ನು ಗಳಿಸಿದೆ.**



# ಮೈಸೂರಿನಲ್ಲಿ ವಿಪ್ರ ಮಹಿಳಾ ಸಂಗಮ ನೂತನ ಕಛೇರಿ ಉದ್ಘಾಟನೆ



ದಿನಾಂಕ ಸೆಪ್ಟೆಂಬರ್ 27, 2023 ರಂದು ಮೈಸೂರಿನ ರಾಜಾರಾಮ ಅಗ್ರಹಾರದಲ್ಲಿ ವಿಪ್ರ ಮಹಿಳಾ ಸಂಗಮದ ನೂತನ ಕಛೇರಿಯನ್ನು ಪೇಜಾವರ ಶ್ರೀಮಠದ ಪೂಜ್ಯ ವಿಶ್ವ ಪ್ರಸನ್ನತೀರ್ಥ ಶ್ರೀಪಾದರು ಉದ್ಘಾಟಿಸಿದರು. ಮೂಡ ಮಾಜಿ ಅಧ್ಯಕ್ಷರಾದ ಹೆಚ್ ವಿ ರಾಜೀವ್, ಪಾಲಿಕೆ ಸದಸ್ಯ ಮಾ ವಿ ರಾಮಪ್ರಸಾದ್, ಮಹಿಳಾ ಸಂಗಮದ ಅಧ್ಯಕ್ಷೆಯಾದ ಡಾ.ಲಕ್ಷ್ಮೀದೇವಿ, ಉಪಾಧ್ಯಕ್ಷೆ ಲಕ್ಷ್ಮೀರಾಜೀವ, ಸೌಭಾಗ್ಯ ಮೂರ್ತಿ, ಎಂ ಎ ಹೇಮಲತಾ, ಜಾನ್ಹವಿ ಮೂರ್ತಿ, ಡಾ.ರಮಾ, ವಿಜಯಾ ನಂಜುಂಡಯ್ಯ, ವನಜಾ, ಶಾಂತಾ ಸೋಮಶೇಖರ್, ಸಹನಾ, ರಶ್ಮಿ, ನಾಗಶ್ರೀ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರ ಮಹಿಳೆಯರು ಉಪಸ್ಥಿತರಿದ್ದರು. ನಂತರ ಮಹಿಳಾ ಸಂಗಮದ ಅಧ್ಯಕ್ಷೆಯಾದ ಡಾ.ಲಕ್ಷ್ಮೀದೇವಿ ರವರನ್ನು ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ ಶ್ರೀಕಂಠ ಕುಮಾರ್, ಶಂಕರನಾರಾಯಣ, ಸೌಭಾಗ್ಯ ಮೂರ್ತಿ, ಜಿಲ್ಲಾಧ್ಯಕ್ಷ ಡಿ ಟಿ ಪ್ರಕಾಶ್ ರವರು ಸನ್ಮಾನಿಸಿದರು.

# ಧಾರವಾಡ ಜಿಲ್ಲಾ ನೂತನ ಪದಾಧಿಕಾರಿಗಳ ಸಭೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ. ಧಾರವಾಡ ಜಿಲ್ಲೆಯ ನೂತನ ಪದಾಧಿಕಾರಿಗಳ ಸಭೆಯನ್ನು ಇತ್ತೀಚೆಗೆ ಕರೆಯಲಾಗಿತ್ತು ಸಭೆಯಲ್ಲಿ ರಾಜ್ಯ ಪದಾಧಿಕಾರಿಗಳಾದ ಶ್ರೀ ಹನುಮಂತ ಡಂಬಳ, ಶ್ರೀ ಎ.ಸಿ ಗೋಪಾಲ್, ಶ್ರೀ ವಿಜಯ ನಾಡಜೋಶಿ, ಶ್ರೀಮತಿ ವೀಣಾ ಹೆಗಡೆ, ಶ್ರೀ ಆರ್.ಡಿ. ಕುಲಕರ್ಣಿ, ಶ್ರೀ ಮದನ ಕುಲಕರ್ಣಿ, ವಸಂತ ಭಟ್ ಮಾತನಾಡಿದರು. ನೂತನ ಜಿಲ್ಲಾ ಪದಾಧಿಕಾರಿಗಳಿಗೆ ಹೆಚ್ಚು ಸದಸ್ಯರನ್ನಾಗಿ ಮಾಡಲು ವಿನಂತಿಸಲಾಯಿತು. ನೂತನ ಜಿಲ್ಲಾ ಪ್ರಮುಖ ಸಂಚಾಲಕ. ಬಿಂದು ಮಾದವ ಪುರೋಹಿತ್ ಅಧ್ಯಕ್ಷತೆಯನ್ನು ವಹಿಸಿದ್ದರು. ನೂತನ ಎಲ್ಲ ಪದಾಧಿಕಾರಿಗಳು ಸಲಹೆ ಸೂಚನೆಯನ್ನು ಕೊಟ್ಟರು. ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.



# ಸುರತ್ಕಲ್ ವಲಯ ಬ್ರಾಹ್ಮಣ ಮಹಾಸಭಾ ಸಭೆ





ತಾ. 23.09.2023 ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇದರ ನೋಂದಾಯಿತ ಸಂಸ್ಥೆ, ಬ್ರಾಹ್ಮಣ ಮಹಾಸಭಾ ಸುರತ್ಕಲ್ ವಲಯ ಇದರ 26ನೇ ವಾರ್ಷಿಕ ಮಹಾಸಭೆ ಹಾಗೂ 24ನೇ ಶನೀಶ್ವರ ಪೂಜೆ ರಾಘವೇಂದ್ರ ಮಠ ಹೊಸಬೆಟ್ಟು ಇಲ್ಲಿ ಹಮ್ಮಿಕೊಳ್ಳಲಾಯಿತು. ಇದರ ಅಂಗವಾಗಿ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹ ಕಾರ್ಯದರ್ಶಿ ಶ್ರೀಮತಿ ಚೇತನಾ ದತ್ತಾತ್ರೇಯ ಪಾಲ್ಗೊಂಡು, ಪ್ರತಿಭಾನ್ವಿತರನ್ನು ಗೌರವಿಸಿದರು. ಸಂಘದ ಗೌರವ ಅಧ್ಯಕ್ಷ ಶ್ರೀ ಪಿ. ಪುರುಷೋತ್ತಮ್ ರಾವ್ ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು, ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು, ಖ್ಯಾತ ನೇತ್ರ ತಜ್ಞ ಡಾ. ಬಿ ಗುರುರಾಜ್, ಇನ್ನಿತರರು ಉಪಸ್ಥಿತರಿದ್ದರು.

# ಮಹಾಸಭಾ ಪದಾಧಿಕಾರಿಗಳಿಂದ ಸೋಸಲೆ ಶ್ರೀ ವ್ಯಾಸರಾಜಮಠ ಶ್ರೀಗಳ ಭೇಟಿ



17–9–23 ರಂದು ಸಾಯಂಕಾಲ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬೆಂಗಳೂರು ರಾಜ್ಯ ಪದಾಧಿಕಾರಿಗಳು ಮುಖಂಡರು ಭಕ್ತರು ಸೇರಿ ಸೋಸಲೆಯ ಶ್ರೀವ್ಯಾಸರಾಜಮಠದ ಶ್ರೀ ಶ್ರೀ 1008 ಶ್ರೀವಿದ್ಯಾವಿಜಯತೀರ್ಥ ಶ್ರೀಪಾದಂಗಳವರು, ಉತ್ತರಾಧಿಕಾರಿ ಇವರಿಗೆ ಫಲ ಪುಷ್ಪ ಮಾಲಾರ್ಪಣೆ ಮಾಡಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಸಿ ಗೋಪಾಲ್ ಶ್ರೀ ಹನುಮಂತ್ ಡಂಬಳ್, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯ ನಾಡಜೋಶಿ, ರಾಜ್ಯ ಕಾರ್ಯಕಾರಣಿ ಸದಸ್ಯೆ ಶ್ರೀಮತಿ ವೀಣಾ ಹೆಗಡೆ, ವಿಪ್ರ ಮುಖಂಡರಾದ ಶ್ರೀ ಪಾರ್ವತಿ ಶ್ರೀ ಪುರೋಹಿತ್, ಸಂಜು ಕುಲಕರ್ಣಿ, ಶ್ರೀ ಸುಧೀರ್ ಇಂಗಳಗಿ, ಶ್ರೀ ನರಸಿಂಹ ಕೊತ್ವಾಲ್ ಪಂಡಿತರು ಆಚಾರ್ಯ ವರ್ಗ ಎಲ್ಲರೂ ಉಪಸಿತರಿದ್ದರು.

# ತಲಕಾಯಲಾಬೆಟ್ಟ ಬ್ರಾಹ್ಮಣ ಸಭಾ, ಗಾಯತ್ರಿ ಮಹಿಳಾ ಸಂಘದಿಂದ ಸನ್ಮಾನ ಕಾರ್ಯಕ್ರಮ





ದಿನಾಂಕ 15.10.23 ಭಾನುವಾರ ತಲಕಾಯಲಾಬೆಟ್ಟ ಬ್ರಾಹ್ಮಣ ಸಭಾ, ಗಾಯತ್ರಿ ಮಹಿಳಾ ಸಂಘ, ಶಂಕರ ಸೇವಾ ಮಂಡಳಿ ದಿಬ್ಬುರಹಳ್ಳಿ ಶಿಡ್ಲಘಟ್ಟ ತಾಲೂಕು ಚಿಕ್ಕಬಳ್ಳಾಪುರ ಜಿಲ್ಲೆ ವತಿಯಿಂದ ಚಂದ್ರಯಾನ 3 ಸೇವೆ ಸಲ್ಲಿಸಿದ ನಮ್ಮ ಜಿಲ್ಲೆಯವರಾದ ಇಸ್ರೋ ವಿಪ್ರ ವಿಜ್ಞಾನಿಗಳಿಗೆ, ಗ್ರಾಮಪಂಚಾಯತಿ ಹೊಸದಾಗಿ ಆಯ್ಕೆಯಾದ ವಿಪ್ರ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರುಗಳಿಗೆ ಸನ್ಮಾನ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು ಜೊತೆಗೆ ವಿಪ್ರರಿಗಾಗೇ ಸೇವೆ ಸಲ್ಲಿಸಿರುವ ಹಿರಿಯರಿಗೆ ಸನ್ಮಾನಿಸಲಾಯಿತು, ವಿಶೇಷವಾಗಿ 95 ವರ್ಷದ ಶ್ರೀ ವೆಂಕಟಾಚಲಪತಿ ಶಾಸ್ತ್ರೀ, ನಾರಾಯಣಮೂರ್ತಿ, ರಾಮಕೃಷ್ಣ ರಾವ್ ಅವರ ಸೇವೆ ಸ್ಮರಿಸಲಾಯಿತು. ಜಿಲ್ಲಾ ಸಭಾದ ಅಧ್ಯಕ್ಷರಾದ ಶ್ರೀ ನಾಗಭೂಷಣ ರಾವ್ ಕೆ, ಸಹ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಪಿ ಆರ್, ಸದಸ್ಯರಾದ ಶ್ರೀ ರಘುವೀರಾ ಶರ್ಮ, ಟಿ.ಎನ್. ರಮೇಶ್ ದಿಬ್ಬುರಹಳ್ಳಿ ಸಂಘಗಳ ಪದಾಧಿಕಾರಿಗಳಾದ ಶ್ರೀ ಅಶ್ವಥನಾರಾಯಣ, ಹರೀಶ್, ಸೂರಿ, ರವಿ, ರಾಜಶೇಖರ್, ಮಂಜುನಾಥ್, ಕೃಷ್ಣಮೂರ್ತಿ ಏನ್, ನಟರಾಜ್, ಸತ್ಯನಾರಾಯಣ ಮೂರ್ತಿ, ಶಂಕರ್, ಶ್ರೀಮತಿ ಮಂಜುಳಮ್ಮ, ಶ್ರೀಮತಿ ಗೀತಮ್ಮ, ಶ್ರೀಮತಿ ವಿಜಯಮ್ಮ, ಇನ್ನು ಇತರೆ ಮಹಿಳಾ ಮಣಿಗಳು ಹಾಗೂ ಎಲ್ಲ ಸಮುದಾಯದ ಮುಖಂಡರುಗಳು ಹಾಜರಿದ್ದರು

# ಕಲಬುರಗಿ ಜಿಲ್ಲೆಯಲ್ಲಿ ಸದಸ್ಯತ್ವ ಅಭಿಯಾನ ಹಾಗೂ ಪ್ರತಿಭಾಪುರಸ್ಕಾರ ಸಮಾರಂಭದ ಸಿದ್ಧತೆ



ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವತಿಯಿಂದ ಸದಸ್ಯತ್ವ ಅಭಿಯಾನ ಹಾಗೂ ವಿಪ್ರನುಡಿ ಪತ್ರಿಕೆಗೆ ಚಂದಾದಾರಿಕೆ ಕುರಿತು ತಿಳುವಳಿಕೆ ಕಾರ್ಯಕ್ರಮ 15ನೇ ಅಕ್ಟೋಬರ್ 2023 ರ ಸಂಜೆ ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪ್ರಾಂಗಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅನೇಕ ಯೋಜನೆಗಳು ಮತ್ತು ಮುಂಬರುವ ತಿಂಗಳಿನಲ್ಲಿ ಕಲಬುರಗಿಯಲ್ಲಿ ನಡೆಯಲಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಕುರಿತು ಮಾಹಿತಿ ನೀಡುವ ಮಹತ್ತರ ಕಾರ್ಯಕ್ರಮ ನೆರವೇರಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಕಲಬುರಗಿ ವಲಯ ಉಪಾಧ್ಯಕ್ಷರಾದ ಶ್ರೀ ಶ್ರೀಧರ್ ಸರಾಫ್, ಶ್ರೀ ಪ್ರಮೋದ್ ದೇಶಪಾಂಡೆ ಮಾತನಾಡಿ ಸರ್ವರೂ ಸದಸ್ಯರಾಗಲು ಮುಂದೆ ಬರುವಂತೆ ಆಮಂತ್ರಿಸಿದರು.

ಜೇವರ್ಗಿ ತಾಲ್ಲೂಕಿನ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ರಮೇಶ ಬಾಬು ವಕೀಲರು ಮಾತನಾಡಿ ಮಹಾಸಭೆಯ ಯೋಜನೆಗಳು ಮತ್ತು ಸದಸ್ಯತ್ವ ಅಭಿಯಾನದ ಕುರಿತು ಹರ್ಷ ವ್ಯಕ್ತಪಡಿಸುತ್ತ ಸರ್ವರೂ ಸದಸ್ಯತ್ವ ಪಡೆಯುವದಷ್ಟೇ ಅಲ್ಲದೇ ಮುಂಬರುವ ದಿನಗಳಲ್ಲಿ ಮಹಾಸಭೆ ಹಮ್ಮಿಕೊಳ್ಳುವ ಯಾವುದೇ ಸಮಾಜಮುಖಿ ಕೆಲಸಕ್ಕೆ ಬೆಂಬಲಿಸುವದಾಗಿ ಹೇಳುತ್ತಾ ಪ್ರಸ್ತುತ ಸಮಾಜ ಅನುಭವಿಸುತ್ತಿರುವ ಅನೇಕ ಸಮಸ್ಯೆಗಳ ಕುರಿತು ವಿವರಿಸಿ ಮಹಾಸಭೆಯಂತಹ ಸಂಘಟನೆಗಳು ಬ್ರಾಹ್ಮಣರಲ್ಲಿರುವ ಯಾವುದೇ ಮತ ಭೇದಗಳನ್ನು ತೊಡೆದು ಒಗ್ಗಟ್ಟಾಗಲು ಶ್ರಮಿಸಬೇಕು ಎಂದು ಹೇಳಿ ಅಂತಹ ಯಾವುದೇ ಕಾರ್ಯಕ್ರಮಗಳಲ್ಲಿ ತಾಲೂಕಿನ ಸಮಸ್ತ ಬ್ರಾಹ್ಮಣರು ಭಾಗವಹಿಸುವದಾಗಿ ತಿಳಿಸಿದರು. ಜೇವರ್ಗಿಯ ಅನೇಕ ವಿಪ್ರೋತ್ತಮರು ಅಲ್ಲದೇ ಎಡ್ರಾಮಿಯ ಶ್ರೀ ಮಲ್ಹಾರರಾವ್ ಕುಲಕರ್ಣಿ,ಹಂಗರಗಿಯ ಶ್ರೀ ಲಕ್ಷ್ಮಣ ಕುಲಕರ್ಣಿ ಮುಂತಾದ ಬ್ರಾಹ್ಮಣ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

## ಕಲ್ಬುರ್ಗಿಯಲ್ಲಿ ಯುವಕರ ತಂಡ ಉದ್ಯಮಶೀಲತೆ ಉಪನ್ಯಾಸ ಕಾರ್ಯಕ್ರಮ



ಕಲಬುರಗಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತಂಡದ ಸದಸ್ಯರೊಂದಿಗೆ ಉದ್ಯಮಶೀಲತೆ ಮತ್ತು ಬ್ರಾಹ್ಮಣ ಯುವಕರ ಕುರಿತು ಚರ್ಚಾ ಅಧಿವೇಶನವನ್ನು ಆಯೋಜಿಸಲಾಗಿತ್ತು, ಕಲ್ಯಾಣ ಕರ್ನಾಟಕ ಪ್ರದೇಶದ ಖ್ಯಾತ ವ್ಯಕ್ತಿ ಡಾ ವಾಸುದೇವ್ ಅಗ್ನಿಹೋತ್ರಿ ಸರ್ ಸೇಡಂ ಅವರು ಉಪನ್ಯಾಸ ನೀಡಿದರು. ಎಕೆಬಿಎಂಎಸ್ ಕಲಬುರಗಿ ವಲಯ ಉಪಾಧ್ಯಕ್ಷ ಶ್ರೀಧರ ಸರಾಫ್ ಅಧ್ಯಕ್ಷತೆ ವಹಿಸಿದ್ದರು. ಎಕೆಬಿಎಂಎಸ್ ಕಾರ್ಯಕಾರಿ ಸದಸ್ಯ ಪ್ರಮೋದ ದೇಶಪಾಂಡೆ ಕಾರ್ಯಕ್ರಮಗಳನ್ನು ಸಂಯೋಜಿಸಿದರು.

## ಮುಂಬೈಯಲ್ಲಿ ಹೊರನಾಡು ಕನ್ನಡಿಗರ ಸಭೆ

ಮುಂಬೈಯಲ್ಲಿ ಹೊರನಾಡ ಕನ್ನಡಿಗರ ವಿಪ್ರ ಮಹಾಸಭೆಯ ಸಭೆಯು ಜರುಗಿತು. ಅಧ್ಯಕ್ಷತೆಯನ್ನು ಶ್ರೀ ನರೇಂದ್ರ ದೇಶಪಾಂಡೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯ ನಾಡಜೋಶಿ ಹಾಗೂ ವಿಪ್ರ ಮುಖಂಡರು ಹುಬ್ಬಳ್ಳಿ ಧಾರವಾಡ ಮಹಾನಗರ್ ಜಿಲ್ಲ ಬಿಜೆಪಿ ಕೋಶ್ಯಾಧ್ಯಕ್ಷರಾದ ವಸಂತ ನಾಡಜೋಶಿ ಭಾಗವಹಿಸಿ ಹೊರನಾಡ ಕನ್ನಡಿಗ ವಿಪ್ರರನ್ನು ಉದ್ದೇಶಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯರಾಗಲು ವಿನಂತಿಸಿಕೊಂಡರು. ಸಭೆಯಲ್ಲಿ ಉತ್ತರ ಕರ್ನಾಟಕದ ಮುಂಬೈ ನಿವಾಸಿಗಳು ಮಾತೆಯರು ಯುವಕರು ಮುಖಂಡರು ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ ಲಕ್ಷ್ಮಣ್ ದೇಶಪಾಂಡೆ (ನರೇಂದ್ರ ಗ್ರಾಮ ಧಾರವಾಡ ಜಿಲ್ಲೆ, ಧಾರವಾಡ ತಾಲೂಕು) ಮಾತನಾಡಿ ಪ್ರತಿಯೊಬ್ಬ ವಿಪ್ರ ಕನ್ನಡಿಗರು ಅಶೋಕ್ ಹಾರನಹಳ್ಳಿ ಅವರ ನೇತೃತ್ವದಲ್ಲಿ ಮಹಾಸಭಾ ಸದಸ್ಯರಾಗಬೇಕು ಎಂದು ವಿನಂತಿಸಿಕೊಂಡು, ವೇದಿಕೆ ಮೇಲಿದ್ದ ಎಲ್ಲರೂ ತಾವೇ ಮೊದಲು ಸದಸ್ಯರಾಗಬೇಕು ಮುಂಬೈ ಭಾಗದಲ್ಲಿ ನಾವು ಹೆಚ್ಚು ಸದಸ್ಯರನ್ನು ಮಾಡಿಕೊಳ್ಳುತ್ತೇವೆ, ಉತ್ತರ ಕರ್ನಾಟಕದ ಬ್ರಾಹ್ಮಣರ ಆಧಾರಗಳು ಕರ್ನಾಟಕದಲ್ಲಿ ಇರುತ್ತವೆ ನಾವು ಮಹಾಸಭಾ ಸಂಘಟನೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು. ಸಭೆಯಲ್ಲಿ ಶ್ರೀಮತಿ ವೀಣಾ ಕುಲಕರ್ಣಿ. ಶ್ರೀ ವೆಂಕಟೇಶ ಕಬನೂರ. ಮುಂತಾದವರು ಉಪಸ್ಥಿತರಿದ್ದರು.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

# ಕಲ್ಬುರ್ಗಿಯಲ್ಲಿ ಚುರುಕುಗೊಂಡ ವಿಪ್ರ ಸಂಘಟನಾ ಕಾರ್ಯಕ್ರಮ

## ಕರ್ನಾಟಕ ಬ್ರಾಹ್ಮಣ ಸಂಘಕ್ಕೆ ಬಿಹಾರ ರಾಜ್ಯಪಾಲರ ಭೇಟಿ



ಇಂದು ಕಲಬುರಗಿಯ ಖ್ಯಾತ ನ್ಯಾಯವಾದಿಗಳಾದ ಶ್ರೀ ಪವನಕುಮಾರ ದೇಶಪಾಂಡೆಯವರ ಮನೆಯಲ್ಲಿ ತಂಗಿದ್ದ ಬಿಹಾರ ರಾಜ್ಯದ ಘನವೆತ್ತ ರಾಜ್ಯಪಾಲರಾದ ಶ್ರೀ ರಾಜೇಂದ್ರ ಅರ್ಲೆಕರ್ ಅವರನ್ನು ಭೇಟಿ ಮಾಡಿ ಸನ್ಮಾನಿಸಿ,ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಡೆಸುವ ಚಟುವಟಿಕೆಗಳ ಕುರಿತು ವಿವರಿಸಿ ಅವರಿಗೆ ವಿಪ್ರನುಡಿ ಪತ್ರಿಕೆಯ ಪ್ರತಿಯೊಂದನ್ನು ಸಮರ್ಪಿಸಿದರು. ಮಹಾಸಭಾ ಯುವ ತಂಡದಲ್ಲಿ ಶ್ರೀ ಪ್ರಮೋದ್ ದೇಶಪಾಂಡೆ, ಶ್ರೀ ಗುರುರಾಜ ದೇಶಪಾಂಡೆ ಮತ್ತು ಶ್ರೀ ನಾರಾಯಣ್ ಜಹಗೀರ್ದಾರ್‌ರಾದ್ದರು.

## ಕಲ್ಬುರ್ಗಿಯಲ್ಲಿ ಸಂಘಟನಾ ಸಭೆ

ಇಂದು ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಶ್ರೀ ರಮೇಶ್ ಬಾಬು ವಕೀಲ (ಕುಲಕರ್ಣಿ) ಯವರನ್ನು ಮಹಾಸಭೆಯ ವಲಯ ಉಪಾಧ್ಯಕ್ಷರಾದ ಶ್ರೀ ಶ್ರೀಧರ ಸರಾಫ ಅವರು ಭೇಟಿ ಮಾಡಿ ಮಹಾಸಭೆಯ ಕಾರ್ಯಕ್ರಮಗಳ ಕುರಿತು ವಿವರಿಸಿದರು.ದಿನಾಂಕ 15.10.2023 ಭಾನುವಾರ ಸದಸ್ಯತ್ವ ನೋಂದಣಿ ಮತ್ತು ವಿಪ್ರನುಡಿ ಕುರಿತು ಜೇವರ್ಗಿಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಭೆ ಕರೆಯುವುದಾಗಿ ತಿಳಿಸಿ ಮಹಾಸಭೆ ಹಮ್ಮಿಕೊಳ್ಳುವ ಎಲ್ಲ ಸಾಮಾಜಿಕ ಚಟುವಟಿಕೆಗಳಿಗೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.ತಾಲೂಕಿನ ಯುವ ರೈತರು ಮತ್ತು ಮುಖಂಡರಾದ ಶ್ರೀ ಮಲ್ಹಾರರಾವ್ ಕುಲಕರ್ಣಿ ಎಡ್ರಾಮಿ,ಶ್ರೀ ಲಕ್ಷ್ಮಣ ಕುಲಕರ್ಣಿ,ಹಂಗರಗಾ ಹಾಗೂ ಶ್ರೀ ಪಾಂಡುರಂಗ ಕುಲಕರ್ಣಿ,ಜೇವರಗಿ ಇನ್ನಿತರರು ಉಪಸ್ಥಿತರಿದ್ದರು.



## ಕಲ್ಬುರ್ಗಿಯಲ್ಲಿ ವಿಪ್ರ ರೈತಬಂಧುಗಳ ಸಂಘಟನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಲಬುರಗಿ ವಲಯ ಉಪಾಧ್ಯಕ್ಷ ಶ್ರೀ ಶ್ರೀಧರ ಸರಾಫ್ ಮತ್ತು ಅನೇಕ ವಿಪ್ರ ರೈತ ಬಂಧುಗಳ ಪ್ರಥಮ ಸಭೆ ಕಳೆದ ಭಾನುವಾರ ಶ್ರೀ ರವೀಂದ್ರ ಟೆಂಗಳಿ ಇವರ ಕಾರ್ಯಾಲಯದಲ್ಲಿ ನಡೆಯಿತು. ಮುಂಬರುವ ದಿನಗಳಲ್ಲಿ ಬ್ರಾಹ್ಮಣ ರೈತಬಾಂಧವರ ಸಂಘಟನೆ ಮಾಡಿ ಸಮಾಜವನ್ನು ಗಟ್ಟಿಗೊಳಿಸುವ ಕಾರ್ಯ ಮಾಡಲು ಒಗ್ಗಟ್ಟಾಗಿ ಕೆಲಸ ಮಾಡಲು ನಿರ್ಧರಿಸಿ – ಹಲವಾರು ವಿಷಯಗಳ ಕುರಿತು ಚರ್ಚಿಸಲಾಯಿತು.

ಶ್ರೀ ಸಂಜೀವ ಪಾಟೀಲ್,ಶ್ರೀ ಶ್ರೀಪಾದ್ ಕುಲಕರ್ಣಿ,ಶ್ರೀ ಪ್ರೀತಲ್ ಕುಲಕರ್ಣಿ,ಶ್ರೀ ಗುರುರಾಜ ದೇಶಪಾಂಡೆ,ಶ್ರೀ ಸಂತೋಷ್ ಪಾಟೀಲ್ ಇನ್ನಿತರ ಸದಸ್ಯರು ಉಪಸ್ಥಿತರಿದ್ದರು. ಹಲವಾರು ಬ್ರಾಹ್ಮಣ ರೈತ ಬಾಂಧವರು ಸಭೆಗೆ ಬೆಂಬಲ ವ್ಯಕ್ತಪಡಿಸಿದ್ದು, ಮುಂದಿನ ಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವದಾಗಿ ತಿಳಿಸಿದ್ದಾರೆ.

# ಬೆಂಗಳೂರಿನಲ್ಲಿ ನೂತನ ಕ್ಷೇತ್ರ ಸಂಘಟಕರ ಪ್ರಥಮ ಸಭೆ




ಬೆಂಗಳೂರು ನಗರ ಕ್ಷೇತ್ರ ಸಂಘಟಕರ ಪ್ರಪ್ರಥಮ ಸಮಾಲೋಚನೆ ಸಭೆ" ದಿನಾಂಕ : 06.10.2023 ರಂದು ಬೆಂಗಳೂರಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಛೇರಿಯಲ್ಲಿ ನಡೆಯಿತು. ಅಧ್ಯಕ್ಷರಾದ ಶ್ರೀ ಅಶೋಕ ಹಾರನ ಹಳ್ಳಿಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಬೆಂಗಳೂರಿನಾದ್ಯಂತ ಸಂಘಟನೆಯನ್ನು ಬಲ ಪಡಿಸಿ ಮುಂದಿನ ದಿನಗಳಲ್ಲಿ ಮಹಾಸಭೆ ವಿಪ್ರ ಸಮುದಾಯದ ಸಮಗ್ರ ಅಭಿವೃದ್ಧಿಗೆ ಬೇರು ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯತೆಯ ಬಗ್ಗೆ ಮಾತನಾಡಿದರು, ಸಂಘಟಕರು ಅತ್ಯಂತ ಉತ್ಸಾಹದಿಂದ ಈ ಸಭೆಯಲ್ಲಿ ಪಾಲ್ಗೊಂಡಿದ್ದರು.ಈ ಸಂದರ್ಭದಲ್ಲಿ ಬೆಂಗಳೂರು ನಗರದ ಉಸ್ತುವಾರಿಗಳಾದ ಉಪಾಧ್ಯಕ್ಷರಾದ ವೈ.ಎ.ಸುಧಾಕರ್ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಕಾರ್ತಿಕ್ ಬಾಪಟ್, ಜಯಸಿಂಹ ಶತ್ರುಘ್ನ, ಜಂಟಿ ಕಾರ್ಯದರ್ಶಿಗಳಾದ ಶಂಕರ್ ಪ್ರಸಾದ್, ಕುಮಾರ್ ಹಾಗೂ ಉಪಾಧ್ಯಕ್ಷರಾದ ಹಿರಣ್ಣಯ್ಯ ಸ್ವಾಮಿ, ಶಿವಶಂಕರ್, ಮುರಳೀಧರ್ ಹಾಗೂ ಇನ್ನೂ ಹಲವಾರು ಪದಾಧಿಕಾರಿಗಳು ಭಾಗವಹಿಸಿದ್ದರು.




ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

ಶುಭಾಶಯಗಳೊಂದಿಗೆ

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಬೆಳ್ತಂಗಡಿಯಲ್ಲಿ ಚಿತ್ಪಾವನ ಪ್ರತಿಭಾ ಕಾರಂಜಿ




ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ವತಿಯಿಂದ ಬೆಳ್ತಂಗಡಿ ತಾಲೂಕಿನ ಚಿತ್ಪಾವನರಿಗಾಗಿ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ತಾ 24/9/2023 ರಂದು ಸೂಳಬೆಟ್ಟು ಗೋಪಾಲ ಕೃಷ್ಣ ದೇವಸ್ಥಾನದಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕಿನ ಹೆಚ್ಚಿನ ಸಂಖ್ಯೆಯ ಚಿತ್ಪಾವನರು ಮುಖ್ಯವಾಗಿ ಮಹಿಳೆಯರು ಪಾತ್ರವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.ಇದರಲ್ಲಿ 9 ತಂಡಗಳಿಂದ ಪ್ರಹಸನ, ಇಬ್ಬರಿಂದ ಏಕಪಾತ್ರಾಭಿನಯ ಮತ್ತು 11 ಜನರ ಏಕವ್ಯಕ್ತಿ ಕಾರ್ಯಕ್ರಮ ಪ್ರೇಕ್ಷಕರ ಮನ ಸೂರೆಗೊಂಡಿತು. ಎಲ್ಲಾ ಕಾರ್ಯಕ್ರಮಗಳು ಚಿತ್ಪಾವನಿ ಭಾಷೆಯಲಿದಿದ್ದು ವಿಶೇಷವಾಗಿತ್ತು. ಸುಮಾರು 150 ಜನ ವೀಕ್ಷಕರು ಪೂರ್ತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದದ್ದು ಕಾರ್ಯಕ್ರಮಕ್ಕೆ ಹೆಚ್ಚು ಮೆರಗು ನೀಡಿತು.

ಕಾರ್ಯಕ್ರಮದ ಮೊದಲು ಶ್ರೀ ಶಂಕರ ತಾಹಮನ್ಕಾರ್ ರಚಿಸಿದ ಚಿತ್ಪಾವನಿ ಭಾಷೆಯ ಪ್ರಾರ್ಥನೆಯನ್ನು ಶ್ರೀ ನಿರಂಜನ ಜೋಶಿಯವರು ಸುಶ್ರಾವ್ಯವಾಗಿ ಹಾಡಿದರು. ಕಾರ್ಯಕ್ರಮವನ್ನು ಸೂಳಬೆಟ್ಟು ಗೋಪಾಲಕೃಷ್ಣ ದೇವಸ್ಥಾನದ ಆಡಳಿತ ಮುಕ್ತೇಸರರಾದ ಶ್ರೀ ಸದಾನಂದ ಸಹಸ್ರಬುದ್ದೆಯವರು ದೀಪ ಬೆಳಗಿಸಿ ಉದ್ಘಾಟಿಸಿದರು. ಬೆಳ್ತಂಗಡಿ ತಾಲೂಕು ಚಿತ್ಪಾವನ ಸಂಘದ ಅಧ್ಯಕ್ಷರಾದ ಶ್ರೀ ತ್ರಿವಿಕ್ರಮ ಹೆಬ್ಬಾರ್ ,ಕೇಳ್ಕರ್ ಅವರು ಸ್ವಾಗತಿಸುತ್ತಾ ಚಿತ್ಪಾವನರ ಸಂಘಟನೆಗೆ ಇಂಥಹ ಕಾರ್ಯಕ್ರಮ ಅಗತ್ಯ ಎಂದರು. ಕಾರ್ಯದರ್ಶಿ ಶ್ರೀ ನಾರಾಯಣ ಫಡಕೆ ಮತ್ತು ಕಾರ್ಯಕಾರಿ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ದೀಪಕ್ ಅಠವಳೆ ಅವರು ಕಾರ್ಯಕ್ರಮ ನಿರೂಪಿಸಿದರು. ಶಶಿಧರ ಡೊಂಗ್ರೆ, ಶ್ರೀ ಚಂದ್ರಕಾಂತ ಗೊರೆ, ವಿವೇಕ್ ಕೇಳ್ಕರ್, ಪ್ರಜ್ಞಾ ಹೆಬ್ಬಾರ್, ಉಷಾ ಮೆಹೆಂದಳೆ, ಭಾರ್ಗವ ಮರಾಠೇ ಕಾರ್ಯಕ್ರಮ ನಿರ್ವಾಕರಾಗಿದ್ದರು. ಶ್ರೀ ಚಂದ್ರಕಾಂತ ಗೋರೆಯವರು ಧನ್ಯವಾದ ಅರ್ಪಿಸಿದರು. ಸೂಳಬೆಟ್ಟಿನ ಮಕ್ಕಳಿಂದ ವೈದಿಕ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನ ವಾಯಿತು.

ಚಿತ್ಪಾವನ ಪ್ರತಿಭಾ ಕಾರಂಜಿ ಯಲ್ಲಿ ಭಾಗವಹಿಸಿದ ಕಲಾವಿದರು.

**ತಂಡಗಳು**

1. ರೇಣುಕಾ ಶಕ್ತಿ ಚಿತ್ಪಾವನ ಗುಂಪು ಮುಂಡಾಜೆ
2. ಬಾಲಕೃಷ್ಣ ಸಹಸ್ರಬುದ್ದೆ, ನಿರಂಜನ ಜೋಶಿ, ಚಂದ್ರಕಾಂತ ಗೋರೆ ತಂಡ ಸೂಳಬೆಟ್ಟು
3. ಪದ್ಮನಾಭ ಜೋಶಿ ತಂಡ ಸೂಳಬೆಟ್ಟು
4. ಲಲಿತಾ ವಿಷ್ಣು ಸಂಘ ಸೂಳಬೆಟ್ಟು.
5. ಫಲ್ಗುಣಿ ಸ್ವಸಹಾಯ ಸಂಘ ಸೂಳಬೆಟ್ಟು
6. ನಾದ ಮಾಧುರ್ಯ ಸಂಘಟನೆ ಸೂಳಬೆಟ್ಟು
7. ಗೀತಾ ಬೆಂಡೆ ಮತ್ತು ಬಳಗ ಉಜಿರೆ
8 ನಂದಿನಿ ಮಹಿಳಾ ಸಂಘ ಹೊಸ್ತೋಟ,ಶಿಶಿಲ
9. ಧೃತಿ ಹಾಗೂಅನಘ ಸೂಳಬೆಟ್ಟು.

**ಏಕ ಪಾತ್ರಾಭಿನಯ**

1. ಧರಿತ್ರಿ ಭಿಡೆ ಮುಂಡಾಜೆ
2. ಛಾಯಾ ತುಳುಪುಳೆ ಅಳದಂಗಡಿ

**ಏಕ ವ್ಯಕ್ತಿ (solo)**

1. ಶಂಕರ್ ತಾಹ್ಮನ್ಕಾರ್, ಮುಂಡಾಜೆ
2. ಸಾತ್ವಿಕ್ ಜೋಶಿ ಸೂಳಬೆಟ್ಟು
3. ಕೃಷ್ಣ ಆಠವಳೆ ಸೂಳಬೆಟ್ಟು
4. ಕೌಸ್ತುಭ ಗೋರೆ ಕುದ್ಯಾ ಡಿ
5. ಮೈಥಿಲಿ ಗೊರೆ ಕುದ್ಯಾ ಡಿ
6. ಶಕುಂತಲಾ ನಾತು ಸೂಳಬೆಟ್ಟು
7. ವಿಜಯಾ ತಾಹ್ಮನ್ಕಾರ್ ಘಂಡಿಜೆ
8. ರವೀಂದ್ರನಾಥ ಮಹೆಂದಳೆ ಹೊಸ್ತೋಟ ಶಿಶಿಲ
9. ಗಾಯತ್ರಿ ಮಹೆಂದಳೆ ಹೊಸ್ತೋಟ ಶಿಶಿಲ.
10. ರತ್ನಾಕರ ಹೆಬ್ಬಾರ್ ಘಂಡಿಜೆ
11. ಗೋವಿಂದ ದಾಮ್ಲೆ ಉಜಿರೆ

# ಜನವರಿ 6,7 ರಂದು ಅದ್ದೂರಿ ಮಹಿಳಾ ಸಮಾವೇಶಕ್ಕೆ ನಿರ್ಧಾರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ವತಿಯಿಂದ ರಾಜ್ಯ ಮಟ್ಟದ ಮಹಿಳಾ ಸಮಾವೇಶವನ್ನು ಅಧ್ಯಕ್ಷರಾದ ಶ್ರೀ ಅಶೋಕ್ ಹಾರ್ನಳ್ಳಿ ಯವರ ನೇತೃತ್ವದಲ್ಲಿ ಜನವರಿ 6. ಹಾಗು 7.2024 ರಂದು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದಲ್ಲಿ ನಡೆಸಲು ನಿಶ್ಚಯಿಸಲಾಗಿದೆ. ನಾಡಿನಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡು ಸಮ್ಮೆಳನ ಯಶಸ್ವಿಗೊಳಿಸಬೇಕೆಂದು ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕಹಾರನಹಳ್ಳಿಯವರು ದಾವಣಗೆರೆಯಲ್ಲಿ ನಡೆದ ಕಾರ್ಯಕಾರಿ ಸಭೆಯಲ್ಲಿ ಕರೆನೀಡಿದರು. ಈ ಸಂಬಂಧವಾಗಿ ಅಧ್ಯಕ್ಷರ ಮಾರ್ಗದರ್ಶನದಲ್ಲಿ ವಿವಿಧ ಸಮಿತಿಗಳ ರಚನಾ ಕಾರ್ಯ






**ಕೇಂದ್ರ ಕಾರ್ಯಕಾರಿಣಿ ಸಭೆಯಲ್ಲಿ ಮಹಿಳಾ ಸಮಾವೇಶ ಕುರಿತು ಮಾಹಿತಿ ನೀಡುತ್ತಿರುವ ರಾಜ್ಯ ಸಂಚಾಲಕಿ ಶ್ರೀಮತಿ ಶುಭಮಂಗಳ**

ಆರಂಭಗೊಂಡಿದ್ದು ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸಲು ಭರದಿಂದ ಸರ್ವಸಿದ್ಧತೆಗಳನ್ನು ಮಾಡಲಾಗುತ್ತಿದೆ.

ಈ ನಿಮಿತ್ತ ಕೆ ಅರ ಪುರಂ ನಲ್ಲಿ ಕೆ ಅರ ಪುರಂ ವಿಭಾಗದ ಪೂರ್ವಭಾವಿ ಸಭೆ ನಡೆಸಲಾಯಿತು, ಈ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಅಶೋಕ್ ಹಾರ್ನಳ್ಳಿ, ರಾಜ್ಯ ಮಹಿಳಾ ಸಂಚಾಲಕಿ ಶ್ರೀಮತಿ ಶುಭ ಮಂಗಳ ಸುನಿಲ್, ಶ್ರೀಯುತ ನಾಗರಾಜಾಚಾರ್ಯರು – ಹರಿದಾಸ ಸಂಘದ ಅಧ್ಯಕ್ಷರು ವಿಪ್ರ ಮುಖಂಡರಾದ ಶ್ರೀ ಕೃಷ್ಣನ್, ಶ್ರೀ ಗುರುರಾಜ್ ರಾವ್ ,ಶ್ರೀಮತಿ ಇಂದಿರಮ್ಮ , ಶ್ರೀಮತಿ ಗಾಯತ್ರಿ ,ಶ್ರೀಮತಿ ನಾಗಲಕ್ಷ್ಮಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಶ್ರೀ ನಾಗೇಶ್ ಭಾಗವಹಿಸಿದ್ದರು.

ಈ ಸಂಧರ್ಭದಲ್ಲಿ ಕೆ ಆರ್ ಪುರಂ ವಿಭಾಗದಿಂದ ಕನಿಷ್ಠ 500 ಜನ ವಿಪ್ರ ಮಹಿಳೆಯರು ಭಾಗವಹಿಸಲು ಉತ್ಸಕರಾಗಿದ್ದರೆಂದು ಮಹಾಸಭಾದ ಸಂಘಟನಾ ಕಾರ್ಯದರ್ಶಿಗಳಾದ ಮುರಳೀಧರ್ ಅವರು ತಿಳಿಸಿದಿರು

ಕಾರ್ಯಕ್ರಮವನ್ನು ಸಂಘಟನಾ ಕಾರ್ಯದರ್ಶಿಗಳಾದ ಶ್ರೀಯುತ ಮುರಳೀಧರ್ ಅವರು ಆಯೋಜಿಸಿದ್ದರು.

# ತುಮಕೂರಿನಲ್ಲಿ ಭಜನಾ ಸ್ಪರ್ಧೆ ಉದ್ಘಾಟನೆ

ಇಂದು(04.10.2023) ತುಮಕೂರು ಜಿಲ್ಲೆ ರಾಜ್ಯ ಮಹಿಳಾ ತಂಡದ ಮಾರ್ಗದರ್ಶನದಂತೆ ಭಜನಾ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಿತ್ತು ಮತ್ತು ಇದು ಉತ್ತಮವಾದ ಕಾರ್ಯಕ್ರಮವಾಗಿತ್ತು. 15 ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು ಮತ್ತು ಸುಮಾರು 200 ರಿಂದ 250 ಪ್ರೇಕ್ಷಕರು ಉಪಸ್ಥಿತರಿದ್ದರು. ಇತರ ಜಿಲ್ಲೆಯ ಸದಸ್ಯರೂ ಸಹ ಭಜನಾ ಸ್ಪರ್ಧೆಯನ್ನು ಪ್ರಾರಂಭಿಸಲು ಮತ್ತು ದೀಪಾವಳಿ ಹಬ್ಬದ ಮೊದಲು ಸ್ಪರ್ಧೆಯ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಕೋರುತ್ತೇವೆ. ಅಲ್ಲದೆ ಸ್ಪರ್ಧೆಯನ್ನು ನಡೆಸುತ್ತಿರುವವರು ನಿಗದಿತ ನಮೂನೆಯಲ್ಲಿ ತಂಡದ ಹಾಗು ವಿಜೇತರ ಮಾಹಿತಿಗಳನ್ನು ಒದಗಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ (ಹೆಸರು ಭಜನಾ ಮಂಡಳಿಯಾ ಸಂಪೂರ್ಣ ಮಾಹಿತಿ)






# ಕಾವೇರಿಗಾಗಿ ವಿಪ್ರರ ಹೋರಾಟ



ಕಾವೇರಿ ನೀರಿನ ಉಳಿವಿಗಾಗಿ ರೈತ ಹಿತರಕ್ಷಣಾ ಸಮಿತಿಯ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಪ್ರತಿಭಟನಾ ಧರಣಿಯಲ್ಲಿ ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದ ಸದಸ್ಯರುಗಳು ತಮಿಳುನಾಡಿಗೆ ನೀರು ಬಿಡುತ್ತಿರುವ ವಿರುದ್ಧವಾಗಿ ಹೋರಾಟ ನಡೆಸಿದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.**

## ಹಾವೇರಿಯಲ್ಲಿ "ಮಹಾಸಭಾ ಭವನ"ಕ್ಕೆ ಉದಾರ ದೇಣಿಗೆ ನೀಡಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಘಟಕಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಗಿದ್ದು, ರೂ.26 ಲಕ್ಷ ಶುಲ್ಕವನ್ನು ಈಗಾಗಲೇ ಪಾವತಿಸಲಾಗಿದೆ. ಈ ನಿವೇಶನದಲ್ಲಿ "ಸಭಾ ಭವನ" ನಿರ್ಮಾಣ ಮಾಡಲು ಯೋಚಿಸಲಾಗಿದ್ದು, ಜಿಲ್ಲೆಯ ವಿಪ್ರರು, ಸಂಘ–ಸಂಸ್ಥೆಗಳು ಉದಾರವಾಗಿ ದೇಣಿಗೆ ನೀಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳನ್ನು ಸಂಪಕಿಸಲು ಕೋರಿದೆ.

– ಪ್ರದಾನ ಕಾರ್ಯದರ್ಶಿಗಳು

| | |
|---|---|
| ಬ್ಯಾಂಕಿನ ವಿವರಗಳು : | A/C DETAILS |
| A/C NAME | : SAPTHARSHI FOUNDATION DONATION |
| BANK | : KARNATAKA BANK LTD. |
| A/C NO. | : 1072500102061901 |
| IFSC | : KARB0000107 |
| BRANCH | : BANASHANKARI 2ND STAGE |

# ಯಶಸ್ವಿ ಉಚಿತ ಚರ್ಮ ರೋಗ ತಪಾಸಣಾ ಶಿಬಿರ





ದಿನಾಂಕ 09.10.2023ರ ಶನಿವಾರದಂದು ಗಾಯತ್ರಿ ಭವನದ 3ನೇ ಮಹಡಿಯಲ್ಲಿ ಮೆಡಿಕೇರ್ ಚರ್ಮ ಮತ್ತು ಕಾಸ್ಮ್‌ಮೆಟಿಕ್ ಸೆಂಟರ್‌ನ ಶ್ರೀಮರಿ ಡಾ॥ ಸುಜಯ್ ಶಾಂತಕುಮಾರ್ ಮತ್ತು ತಂಡದವರಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಹಯೋಗದಲ್ಲಿ ಉಚಿತ ಚರ್ಮರೋಗ ತಪಾಸಣಾವನ್ನು ಏರ್ಪಡಿಸಲಾಗಿತ್ತು. ಸದರಿ ಶಿಬಿರದಲ್ಲಿ ಬ್ರಾಹ್ಮಣ ಮಹಾಸಭೆಯ ಸದಸ್ಯರುಗಳಿಗೂ ಮತ್ತು ಸಮುದಾಯದವರಿಗೂ ಉಚಿತವಾಗಿ ಚರ್ಮದ ತಪಾಸಣೆಯನ್ನು ಮತ್ತು ತಲೆಗೂದಲಿನ ತಪಾಸಣೆಯನ್ನು ನೆರವೇರಿಸಿ, ಅವರವರ ಸಮಸ್ಯೆಗಳಿಗೆ ಅನುಗುಣವಾಗಿ ಉಚಿತವಾಗಿ ಔಷಧಿ ಮತ್ತು ಕ್ರೀಂಗಳನ್ನು ಕೂಡ ನೀಡಲಾಗಿತ್ತು.

ಬ್ರಾಹ್ಮಣ ಸಮುದಾಯದ ಅನೇಕ ವ್ಯಕ್ತಿಗಳು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. ಸದರಿ ಶಿಬಿರವು ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ಸಂಚಾಲಕರಾದ ಶ್ರೀ ವೆಂಕಟೇಶ್ ದ್ವಾರಕನಾಥ್ ರವರ ನೇತೃತ್ವದಲ್ಲಿ ಮತ್ತು ಸಂಯೋಜನೆಯಲ್ಲಿ ನಡೆಸಲಾಗಯಿತು. ಮತ್ತು ಮಹಾಸಭೆಯ ಆರೋಗ್ಯ ಸೇವೆಗಳ ಉಪಾಧ್ಯಕ್ಷರಾದ ಡಾ॥ ಮುರುಳೀಧರ್‌ರವರು ಸದರಿ ಶಿಬಿರಕ್ಕೆ ತಮ್ಮ ಮಾರ್ಗದರ್ಶನವನ್ನು ನೀಡಿ ಸಹಕರಿಸಿರುತ್ತಾರೆ. ಮತ್ತು ಅತಿಮುಖ್ಯವಾಗಿ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ತಮ್ಮ ಅನುಮೋದನೆಯನ್ನು ಮತ್ತು ಮಾರ್ಗದರ್ಶನವನ್ನು ಈ ಉಚಿತ ಶಿಬಿರಕ್ಕೆ ನೀಡಿ ಆಶೀರ್ವದಿಸಿರುತ್ತಾರೆ.



## ವೈದ್ಯಕೀಯ ಸೇವೆಗಳ ವಿಭಾಗ,

## ಉಚಿತ ಆರೋಗ್ಯ ತಪಾಸಣಾ ಶಿಬಿರ

ಜ್ಯುಪಿಟರ್ ಆಸ್ಪತ್ರೆ, ಮಲ್ಲೇಶ್ವರಂ ಮತ್ತು ನೆಲಮಂಗಲ ಹಾಗೂ ಪ್ರಜ್ಞಾ ಮೆದುಳು ಮತ್ತು ಮನಸ್ಸು ಕ್ಲಿನಿಕ್, ಬನಶಂಕರಿ ಇವರ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯರುಗಳಿಗೂ ಬ್ರಾಹ್ಮಣ ಸಮುದಾಯದವರಿಗೂ ಉಚಿತ ತಪಾಸಣಾ ಶಿಬಿರ ದಿನಾಂಕ 26.11.2023, ಭಾನುವಾರ ಸ್ಥಳ: ಗಾಯತ್ರಿ ಭವನದ 3ನೇ ಮಹಡಿ, ಬೆಂಗಳೂರು. ಶಿಬಿರದ ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00ರವರೆಗೆ.

ಸದರಿ ಶಿಬಿರದಲ್ಲಿ ಹಿರಿಯ ರಕ್ತದಾನ ತಜ್ಞರಾದ ಡಾ॥ ಮುರಳೀಧರ್ (ಉಪಾಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ), ಡಾ॥ ಚಂದ್ರಿಕಾ, ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ, ಡಾ॥ ಸೂರಜ್ ಮುರಳೀಧರ್, ಮೂತ್ರಕೋಶ ತಜ್ಞ ಹಾಗೂ ಡಾ॥ ಕಾರ್ತಿಕ್ ಕಶ್ಯಪ್, ಮನೋರೋಗ ಪರಿಣಿತ ವೈದ್ಯರು. ಇವರುಗಳು ಉಚಿತವಾಗಿ ವ್ಯಕ್ತಿಗಳ ಜೊತೆ ಸಮಾಲೋಚನೆಗಳನ್ನು ನಡೆಸಿ ತಮ್ಮ ಸಂಸ್ಥೆಗಳಿಂದ ರಿಯಾಯಿತಿ ದರದಲ್ಲಿ ಶುಶ್ರೂಷೆಗಳನ್ನು ನೀಡುತ್ತಾರೆ.

ಈ ಕಾರ್ಯಕ್ರಮವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ಸಂಘಟನಾ ಕಾರ್ಯದರ್ಶಿ ಶ್ರೀ ವೆಂಕಟೇಶ್ ದ್ವಾರಕಾನಾಥ್ ರವರು ಸಂಯೋಜಕರಾಗಿರುತ್ತಾರೆ ದೂರವಾಣಿ ಸಂಖ್ಯೆ : 9845038669ಕ್ಕೆ ಸಂಪರ್ಕಿಸಿ, ಹೆಸರನ್ನು ನೋಂದಾಯಿಸಬಹುದು.

## ಬಡಗನಾಡು ಮಹಾಸಂಘ

# ಯಶಸ್ವಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಬಡಗನಾಡು ಮಹಾಸಂಘವು ದಿನಾಂಕ 30.09.2023ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಮಣಿಪಾಲ್ ಆಸ್ಪತ್ರೆಗಳ ಸಮೂಹ ಸಹಯೋಗದೊಂದಿಗೆ "ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಸಸ್ವಿಯಾಗಿ ನಡೆಸಿತು. ಈ ಶಿಬಿರದ ಉದ್ಘಾಟನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ಮಾನ್ಯ ಶ್ರೀ ದಿನೇಶ್ ಗುಂಡೂರಾವ್‌ರವರು ನೆರವೇರಿಸಿದರು. ಅವರು ಮಾತನಾಡುತ್ತಾ, ಜನರು ಈಗಿನ ಒತ್ತಡದ ಜೀವನದಲ್ಲಿ ತಮ್ಮ



ಆರೋಗ್ಯದ ಕಡೆ ಗಮನ ಹರಿಸುವುದಕ್ಕೆ ಸಮಯವಿರುವುದಿಲ್ಲ. ಈ ರೀತಿ ತಪಾಸಣಾ ಶಿಬಿರಗಳನ್ನು ಏರ್ಪಡಿಸಿದರೆ ಬಂದು ಆರೋಗ್ಯ ತಪಾಸಣೆ ನಡೆಸಿ, ಏನಾದರೂ ಸಮಸ್ಯೆಗಳಿದ್ದರೆ ಅದನ್ನು ನಿವಾರಿಸಿಕೊಳ್ಳಲು ಜಾಗ್ರತೆ ವಹಿಸಬಹುದು ಎಂದು ತಿಳಿಸಿದರು. ರಕ್ತದಾನದ ಬಗ್ಗೆ ಮಾತನಾಡುತ್ತಾ ಈಗಿನ ದಿನಗಳಲ್ಲಿ ಅಪಘಾತಗಳು ಹೆಚ್ಚಾಗಿರುವುದರಿಂದ ಜನರಿಗೆ ರಕ್ತದ ಅವಶ್ಯಕತೆ ಇರೋದನ್ನು ದಾನಿಗಳಿಂದ ಸಂಗ್ರಹಿಸಿ ವಿತರಿಸಲಾಗುವುದು ಎಂದು ತಿಳಿಸಿದರು.

ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬ್ರಾಹ್ಮಣ ಸಭೆಗಳಿಗೆ ಅಭಿನಂದನೆ ಸಲ್ಲಿಸಿದರು. ಈ ಸಮಯದಲ್ಲಿ ಬಡಗನಾಡು ಬ್ರಾಹ್ಮಣ ಸಭಾ ವತಿಯಿಂದ ಮಾನ್ಯ ಮಂತ್ರಿಗಳನ್ನು ಗೌರವಿಸಿ ವಂದಿಸಲಾಯಿತು. ಅಧ್ಯಕ್ಷರಾದ ಎನ್.ಎಲ್. ಚಿದಾನಂದ್, ಗೌ॥ ಕಾರ್ಯದರ್ಶಿ ಎನ್.ಸಿ. ವಿದ್ಯಾಶಂಕರ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗೌ॥ ಉಪಾಧ್ಯಕ್ಷರಾದ ಎಂ.ಆರ್. ಶಿವಶಂಕರ್ ಮತ್ತು ಶ್ರೀಮತಿ ನಳಿನಿ ವಿದ್ಯಾಶಂಕರ್ ಮತ್ತು ಸಂಘಟನಾ ಕಾರ್ಯದರ್ಶಿ ವೆಂಕಟೇಶ್ ದ್ವಾರಕಾನಾಥ್ ಮತ್ತು ಸಮರ್ಪಣಾ ಲಯನ್ಸ್ ವತಿಯಿಂದ ಶ್ರೀಮತಿ ಶಾರದ ಮುಳುಗುಂದ ಮತ್ತು ಚಂಪಕಾ ಶ್ರೀನಿವಾಸ್, ಮಣಿಪಾಲ್ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿವರ್ಗದವರು ಹಾಗೂ ಲಯನ್ಸ್ ರಕ್ತನಿಧಿ ಸಂಸ್ಥೆಯ ಸಿಬ್ಬಂದಿವರ್ಗದವರು ಮತ್ತು ಬಡಗನಾಡು ಸಂಘದ ಸದಸ್ಯರುಗಳು ಸಾಕ್ಷಿಯಾದರು. ಗೌ॥ ಉಪಾಧ್ಯಕ್ಷರಾದ ಎಂ.ಆರ್. ಶಿವಶಂಕರ್ ಮತ್ತು ನಳಿನಿ ವಿದ್ಯಾಶಂಕರ್ ಮತ್ತು ಸಂಘಟನಾ ಕಾರ್ಯದರ್ಶಿ ವೆಂಕಟೇಶ್ ದ್ವಾರಕಾನಾಥ್‌ರವರಿಗೆ ಸನ್ಮಾನಿಸಿ ವಂದಿಸಲಾಯಿತು.

ಉಚಿತ ಆರೋಗ್ಯ ತಪಾಸಣ ಶಿಬಿರಕ್ಕೆ ಬಡಗನಾಡು ಸಂಘದ ಸದಸ್ಯರು, ಕುಮಾರಪಾರ್ಕ್‌ನ ನಿವಾಸಿಗಳು, ಬಡಗನಾಡು ಸಂಘದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು, ಎಸ್.ಬಿ.ಐ.ನ ಉದ್ಯೋಗಿಗಳು ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕಿನ ಉದ್ಯೋಗಿಗಳು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಬಡಗನಾಡು ಸಂಘದ ಸದಸ್ಯರು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.





# ಓಂಕಾರೇಶ್ವರದ ಶ್ರೀ ಶಂಕರಾಚಾರ್ಯಮೂರ್ತಿಗೆ ರುದ್ರಾಕ್ಷಿ ಮಾಲೆ ಸಮರ್ಪಣೆ





ದಿನಾಂಕ 21.09.2023ರಂದು ಮಧ್ಯಪ್ರದೇಶದ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಉದ್ಘಾಟನೆಗೊಂಡ ಜಗದ್ಗುರು ಶ್ರೀ ಶಂಕರಾಚಾರ್ಯರ 108 ಅಡಿ ಎತ್ತರದ ಮೂರ್ತಿಗೆ ಮಠದ ಪರಮಭಕ್ತರಾದ ಕೂಳೂರು ಶೃಂಗೇಶ್ವರರಾಯರು ತಾವೇ ಬೆಳೆದ ರುದ್ರಾಕ್ಷಿಯಲ್ಲಿ 112 ಅಡಿ ಉದ್ದ ರುದ್ರಾಕ್ಷಿ ಹಾರವನ್ನು ಸಿದ್ಧಪಡಿಸಿ, ಶ್ರೀಮಠದ ಗುರುಭವನದಲ್ಲಿ ಜಗದ್ಗುರು ಶ್ರೀ ಶ್ರೀ ವಿದುಶೇಖರ ಭಾರತೀ ಸ್ವಾಮಿಯವರಿಗೆ ಅರ್ಪಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕಿನ ಕೂಳೂರು ಗ್ರಾಮದವರಾದ ಶ್ರೀ ಶೃಂಗೇಶ್ವರರಾಯರು ಜಮೀನ್ದಾರರು. ಕಾಫಿ, ಅಡಿಕೆ ಬೆಳಗಾರರಾದ ಇವರು ರುದ್ರಾಕ್ಷಿಯನ್ನೂ ಬೆಳೆಸುತ್ತಾರೆ. ಎಂ.ಎಸ್ಸಿ. ಪದವೀಧರರಾದ ಇವರು ಬೆಂಗಳೂರಿನಲ್ಲಿ ಓದಿದವರಾದರೂ ಕೃಷಿ ಹಾಗೂ ವ್ಯಾಪಾರದಲ್ಲಿ ತಮ್ಮನ್ನು ತಾವು ತಾವು ವಿಶಿಷ್ಠ ರೀತಿಯಲ್ಲಿ ತೊಡಗಿಸಿಕೊಂಡು ಯಶಸ್ವಿಯಾದವರು.

ದಕ್ಷಿಣ ಭಾರತದಲ್ಲಿ ಮೊದಲು ರುದ್ರಾಕ್ಷಿ ಬೆಳದದ್ದು ಇವರೇ. ಸುಮಾರು ಇವರ ತೋಟದಲ್ಲಿ 42 ರುದ್ರಾಕ್ಷಿ ಮರಗಳಿವೆ. ಪ್ರತಿವರ್ಷ 15 ರಿಂದ 20 ಕ್ವಿಂಟಾಲ್ ರುದ್ರಾಕ್ಷಿ ಬೆಳೆದಿರುತ್ತಾರೆ. ಇವರಲ್ಲಿ 3 ಮುಖದಿಂದ 12 ಮುಖದವರೆಗೆ ರುದ್ರಾಕ್ಷಿ ಸಂಗ್ರಹವಿದೆ. ರುದ್ರಾಕ್ಷಿ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿರುತ್ತಾರೆ. ಅದೆಷ್ಟೋ ಮಠ–ಮಂದಿರಗಳಿಗೆ ಉಚಿತವಾಗಿ ರುದ್ರಾಕ್ಷಿಯನ್ನು ನೀಡಿರುತ್ತಾರೆ.

ಶೃಂಗೇಶ್ವರಾಯರರಿಂದ ಇಂತಹ ಸತ್ಕಾರ್ಯಗಳು ಮುಂದೆಯೂ ನಡೆಯಲೆಂದು ಅವರಿಗೂ ಹಾಗೂ ಅವರ ಕುಟುಂಬವರ್ಗಕ್ಕೆ ಮಾತ ಗಾಯತ್ರಿ ದೇವಿಯು ಸಕಲ ಸನ್ಮಂಗಳನ್ನುಂಟುಮಾಡಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾರೈಸುತ್ತದೆ.

# ಕೃಷಿ ವಿಭಾಗ ರಚನೆಗೆ ಸಿದ್ಧತೆ



ಬೆಂಗಳೂರು ಗಾಯತ್ರಿ ಸಂಘದ ಕೃಷಿ ತಜ್ಞರು, ಪ್ರಾಧ್ಯಾಪಕರು ಮತ್ತು ನಿವೃತ್ತ ಪ್ರಾಧ್ಯಾಪಕರು ಮತ್ತು ಕೃಷಿ ವಿದ್ಯಾರ್ಥಿಗಳು ಮಹಾಸಭಾ ಕೇಂದ್ರ ಕಚೇರಿ ಗಾಯತ್ರಿ ಭವನದಲ್ಲಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಭೇಟಿ ಮಾಡಿ, ತಮ್ಮ ಸಂಸ್ಥೆಯಡಿ ಕೃಷಿ ವಿಭಾಗಕ್ಕೆ ಸಂಬಂಧಿಸಿದಂತೆ ನಡೆಸುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ಮಹಾಸಭಾಧ್ಯಕ್ಷರಿಗೆ ವಿಸ್ತೃತವಾಗಿ ತಿಳಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯದ ವಿಪ್ರ ಕೃಷಿಕರಿಗೆ ಹೆಚ್ಚಿನ ರೀತಿಯಲ್ಲಿ ಸಹಕಾರ, ಸಲಹೆ, ಸೌಲಭ್ಯಗಳನ್ನು ಒದಗಿಸುವ ಕುರಿತು ಚರ್ಚಿಸಲಾಯಿತು. ಮಹಾಸಭಾಧ್ಯಕ್ಷರು ಮಹಾಸಭಾ ಅಡಿಯಲ್ಲಿ ಕೃಷಿ ವಿಭಾಗವನ್ನು ರಚಿಸಿ, ಸಕ್ರಿಯವಾಗಿ ರಾಜ್ಯದ ಕೃಷಿಕರಿಗೆ ಬೇಕಾದ ನೆರವನ್ನು ನೀಡಲು ಮುಂದಾಗಬೇಕೆಂದು ತಿಳಿಸುವುದರೊಂದಿಗೆ, ಮಹಾಸಭಾ ಪರವಾಗಿ ಉಮೇಶ್ ಶಾಸ್ತ್ರಿ ಅವರನ್ನು ಈ ಕೃಷಿ ವಿಭಾಗ ರಚನೆಯ ಪ್ರಕ್ರಿಯೆಯಲ್ಲಿ ಸಹಕರಿಸಲು ನೇಮಿಸಿ, ಶೀಘ್ರದಲ್ಲಿ ಕೃಷಿ ವಿಭಾಗಕ್ಕೆ ಚಾಲನೆ ನೀಡಬೇಕೆಂದು ತಿಳಿಸಿದರು.

# ಮಂಡ್ಯದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ ಆಚರಣೆ




ದಿನಾಂಕ 1/10/2023ರ ಭಾನುವಾರ ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾವತಿಯಿಂದ ಡಾ॥ಸರ್ ಎಂ.ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ ಅಂಗವಾಗಿ ನಡೆದ ಸರ್.ಎಂ. .ವಿಶ್ವೇಶ್ವರಯ್ಯ ಪುರಸ್ಕೃತ ಇಂಜಿನಿಯರ್‌ಗಳೆಂದರೆ ಡಾ॥ ಎಸ್ ಆನಂದ್ ಹಿರಿಯ ವಿಜ್ಞಾನಿಗಳು, ಇಸ್ರೋ ಸಂಸ್ಥೆ, ಬೆಂಗಳೂರು ಶ್ರೀ ಆಕಾಶ್ ಬಾಲಕೃಷ್ಣ, ತಾಂತ್ರಿಕ ಅಧಿಕಾರಿ ಇಸ್ರೋ ಸಂಸ್ಥೆ, ಬೆಂಗಳೂರು ಮತ್ತು ಡಾ॥ ಬಿ.ಎಸ್. ಶಿವಕುಮಾರ್, ನಿವೃತ್ತ ಪ್ರಾಧ್ಯಾಪಕರು, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ ಎಂಬ ಮೂವರು ಇಂಜಿನಿಯರ್‌ಗಳು. ಮುಖ್ಯ ಅತಿಥಿಗಳಾಗಿ ಸೂರ್ಯೋಪಾಸಕರಾದ ಶ್ರೀ ಎಸ್.ಎನ್.ಇಂದಿರೇಶ್‌ರವರು ಭಾಗವಹಿಸಿದ್ದರು. ಆರೋಗ್ಯಕ್ಕೆ ಸೂರ್ಯೋಪಾಸನೆಯ ಅವಶ್ಯಕತೆ ಹೇಗೆ? ಸೂರ್ಯನನ್ನು ಯಾವ ರೀತಿ ಆರಾಧಿಸುವುದರ ಮೂಲಕ ಉತ್ತಮ ಆರೋಗ್ಯ ಪಡೆಯುವ ಬಗ್ಗೆ, ಮಹತ್ವದ ಮಾಹಿತಿ ತಿಳಿಸಿಕೊಟ್ಟರು. ಡಾ॥ ಎಸ್.ಆನಂದ ರಾಕೆಟ್ ಉಡಾವಣೆ ಯಾವ ರೀತಿ ನಡೆಸಲ್ಪಡುತ್ತದೆ. ಅದರ ಕಾರ್ಯಚಟುವಟಿಕೆ, ವಿಶ್ವೇಶ್ವರಯ್ಯನವರ ಗುಣಗಳು, ದೂರದರ್ಶಿತ್ವದ ಬಗ್ಗೆ ತಿಳಿಸಿಕೊಟ್ಟರು. ಶ್ರೀ ಆಕಾಶರವರು ಇಸ್ರೋ "ಸಂಸ್ಥೆ" "ಸಂಸ್ಕೃತಿ" ಯ ಸಮ್ಮಿಲನವನ್ನು ಹೊಂದಿದೆ. ಆಸಕ್ತ ಪ್ರತಿಭಾನ್ವಿತ ವಿದ್ಯಾರ್ಥಿಗಳು ಯಾರು ಬೇಕಾದರೂ ಇಲ್ಲಿ ಕೆಲಸ ಮಾಡಬಹುದೆಂದು ತಿಳಿಸಿಕೊಟ್ಟರು. ಹಿರಿಯರು ಕಿರಿಯರೆನ್ನದೆ ಎಲ್ಲರೊಡನೆ ಇಬ್ಬರೂ "ಸಂವಾದ" ನಡೆಸಿದರು ಎಲ್ಲಾ ವಿಪ್ರ ಬಾಂಧವರು ಭಾಗವಹಿಸಿ ಸಂತಸಪಟ್ಟರು. ಚಂದ್ರಯಾನದ ಬಗ್ಗೆ ಅವರ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡುವುದರ ಮೂಲಕ ಜನಮನ ಗೆದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್.ಶಂಕರನಾರಾಯಣ ಶಾಸ್ತ್ರಿ, ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದ ಅಧ್ಯಕ್ಷರು, ಶ್ರೀ ಬೆಳ್ಳೂರು ಶಿವರಾಂ, ಗೌರವಾಧ್ಯಕ್ಷರು, ಶ್ರೀಪಾದು, ಕೊಳಲು ಪತ್ರಿಕೆ ಸಂಪಾದಕರು, ಹಿರಿಯ ವಕೀಲರಾದ ಶ್ರೀ ಕೆ.ವಿ.ಶೇಷಾದ್ರಿಯವರು, ಕಾರ್ಯದರ್ಶಿ ಕೆ.ಪ್ರಭಾಕರ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಮಮತ ರಮೇಶ್, ಉಮಾ ದೊರೆಸ್ವಾಮಿ ಪ್ರಾರ್ಥನೆಯ ಮೂಲಕ ಚಾಲನೆ ನೀಡಿದರೆ, ವೇದಿಕೆಯ ಗಣ್ಯರು ತುಳಸಿಗೆ ನೀರೆರೆಯುವುದರ ಮೂಲಕ, ಶ್ರೀ ಗಾಯತ್ರಿ ಮಾತೆಗೆ ಡಾ॥ ಸರ್ ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ದೀಪ ಬೆಳಗಿಸಿ, ಪುಷ್ಪನಮನದ ಮೂಲಕ ಸಭೆ ಪ್ರಾರಂಭವಾಯಿತು. ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಎಂ.ಬಿ.ಬಿ.ಎಸ್.ನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ "ಪ್ರತಿಭಾ ಪುರಸ್ಕಾರ" ಕಾರ್ಯಕ್ರಮ ಹಮ್ಮಿಕೊಂಡು ಗೌರವಿಸಲಾಯಿತು. ಅದೇ ರೀತಿ ಸಹಾಯಧನ ಕೇಳಿದ ಹಲವಾರು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಹಾಯಧನ ನೀಡಲಾಯಿತು. ಉಮಾ ದೊರೆಸ್ವಾಮಿ ನಿರೂಪಣೆ ಮಾಡಿದರು. ಶ್ರೀ ನರಸಿಂಹಮೂರ್ತಿಗಳು ಪ್ರಾಸ್ತಾವಿಕ ನುಡಿಗಳನ್ನಾಡಿದರು, ಶ್ರೀ ಪ್ರಭಾಕರ್‌ರವರು ಸ್ವಾಗತಿಸಿದರು ಸಭೆಯಲ್ಲಿ ಉಪಾಧ್ಯಕ್ಷರಾದ ಮಧುಸೂದನ್‌ರವರು , ಸಹಕಾರ್ಯದರ್ಶಿ ಗೋಪಾಲಕೃಷ್ಣ ಶೆಣೈರವರು, ನಿರ್ದೇಶಕರಾದ ಟಿ.ಸದಾಶಿವಭಟ್, ಶ್ರೀಎಸ್.ಎಲ್.ಗೋಪಾಲ್, ಶ್ರೀ ಎನ್. ಬಾಲಕೃಸ್ಣ, ಎಸ್.ಶ್ರೀಧರ್, ಶ್ರೀ ಪ್ರಸನ್ನ ಮಯ್ಯ, ಶ್ರೀ ಎ.ವಿ.ಅನಂತರಾಮನ್ ಉಪಸ್ಥಿತರಿದ್ದರು, ತಾಲ್ಲೂಕು ಪ್ರತಿನಿಧಿಗಳಾದ ಶ್ರೀರಾಜೇಶ್, ನಾಗಮಂಗಲ ತಾಲ್ಲೂಕು, ಶ್ರೀ ಬಿ.ಎ.ಶಶಿಧರ ಬಲ್ಲೇನಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಶ್ರೀ ಅನಂತ ಕುಮಾರ್, ಮಳವಳ್ಳಿ ತಾಲ್ಲೂಕು ಪ್ರತಿನಿಧಿಗಳು ಹಾಜರಿದ್ದರು. ಅತ್ಯಂತ ವಿಜೃಂಭಣೆಯಿಂದ, ಯಶಸ್ವಿಯಾಗಿ ಕಾರ್ಯಕ್ರಮ ಜರುಗಿತು.

## ಖ್ಯಾತ ಗಾಯಕ ಹಾಗೂ ಸುಗಮ ಸಂಗೀತಗಾರರಾದ ಕಿಕ್ಕೇರಿ ಕೃಷ್ಣಮೂರ್ತಿ ಜಪಾನ್ ವಿಶ್ವ ಕನ್ನಡ ಸಮ್ಮೇಳನ ಅಧ್ಯಕ್ಷತೆ,

### "ಕನ್ನಡದ ಸೇವೆಗಾಗಿ ನನ್ನ ಜೀವನವೇ ಮುಡಿಪು"



ಜಪಾನ್ ಒಸಾಕದಲ್ಲಿರುವ ಬೈ ಟವರ್ ಸಭಾಂಗಣದಲ್ಲಿ ಕುವೆಂಪು ಕಲಾ ನಿಕೇತನ ಮತ್ತು ಜಪಾನ್ ಕನ್ನಡ ಸಂಘದ ಆಶ್ರಯದಲ್ಲಿ ಕುವೆಂಪು ಕಲಾ ಉತ್ಸವ ಮತ್ತು 24ನೇ ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಪತ್ರಕರ್ತ ಅನಿಲ್ ಕುಮಾರ್ ನೆರವೇರಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕೇಂದ್ರ ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರು, ಖ್ಯಾತ ಗಾಯಕ ಹಾಗೂ ಸಂಗೀತ ನಿರ್ದೇಶಕ ಡಾ. ಕಿಕ್ಕೇರಿ ಕೃಷ್ಣಮೂರ್ತಿಯವರು ಸಮ್ಮೇಳನದ ಅಧ್ಯಕ್ಷತೆವಹಿಸಿದ್ದರು. ಅವರು ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆ ಜಯಭಾರತ ಜನನಿಯ ತನುಜಾತೆ, ಓ ನನ್ನ ಚೇತನ ಆಗು ನೀ ಅನಿಕೇತನ, ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು, ತನುವು ನಿನ್ನದು ಮನವು ನಿನ್ನದು, ಮುಂತಾದ ಗೀತೆಗಳನ್ನು ಹಾಡಿ ಜಪಾನ್‌ನಲ್ಲಿರುವ ಕನ್ನಡಿಗರ ಮನತಣಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ನಡೆಯುತ್ತಿರುವ ಈ ಅಂತಾರಾಷ್ಟ್ರೀಯ ಮಟ್ಟದ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ನನ್ನನ್ನು ಆಯ್ಕೆ ಮಾಡಿರುವುದು ನನ್ನ ಪೂರ್ವಜನ್ಮದ ಪುಣ್ಯ ಎಂದರಲ್ಲದೆ ಬದುಕಿರುವವರೆಗೂ ಕನ್ನಡಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವುದಾಗಿ ಭಾವುಕರಾಗಿ ನುಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಜಿ ಸಹಾಯಕ ನಿರ್ದೇಶಕ ಅಣ್ಣೇಗೌಡ, ಜಪಾನ್‌ನಲ್ಲಿ ನೆಲೆಸಿ ಕನ್ನಡ ಕಂಪನ್ನು ಪಸರಿಸುತ್ತಿರುವ ಜಿಡಿಯಾ ಕನಕ್ ಸಮರ್, ಯು.ಕೊ, ಯಮಾ, ದಾದಾಫಿರ್, ಮನುಕಾಂಡ್, ಕೈಜಾಮೊ ಕ್ಯುಟೊ, ಆರ್‌ಶಿ ಒಸಾಕಾ, ಪ್ರವೀಣ್ ಓಸ್ವಾಲ್, ಇಂಡಿಯನ್ ರೆಸ್ಟೋರೆಂಟ್‌ನ ಆತ್ಮಾರಮ್, ಕುವೆಂಪು ಕಲಾ ನಿಕೇತನದ ಅಧ್ಯಕ್ಷ ಡಿ. ಪ್ರಕಾಶ್, ಹಂಸಕುಮಾರಿ, ನಳಿನಾಕ್ಷಿ, ಸುಜಾತ, ಶ್ರೀರಾಮಯ್ಯ, ಲತಾ ಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು. ವಿವಿಧ ಕ್ಷೇತ್ರದ ಸಾಧಕರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಅಭಿನಂದನೆ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ನ ಉಪಾಧ್ಯಕ್ಷರಾದ ಶ್ರೀ ಛಾಯಾಪತಿ ಅವರಿಂದ ಸದಸ್ಯತ್ವ ಅಭಿಯಾನಕ್ಕೆ ಅಭೂತ ಪೂರ್ವ ಬೆಂಬಲ, ಶ್ರೀ ಛಾಯಾಪತಿ ಅವರು ತಮ್ಮ ತೀವ್ರ ಆಸಕ್ತಿಯಿಂದ ಸರಿ ಸುಮಾರು 100 ಕ್ಕೂ ಹೆಚ್ಚು ಸದಸ್ಯರನ್ನು ಸೆಪ್ಟೆಂಬರ್ ತಿಂಗಳಲ್ಲಿ ಮಹಾಸಭೆಯೊಂದಿಗೆ ಜೋಡಿಸಿದ್ದಾರೆ, ಅಲ್ಲದೆ ಛಾಯಾಪತಿ ಸತತವಾಗಿ ಮಹಾಸಭೆಯ ಕಾರ್ಯಕ್ರಮದಲ್ಲಿ ಹಾಗು ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಂಡಿರುವುದನ್ನು ನಾವು ಕಾಣಬಹುದು. ಈ ಸದಸ್ಯತ್ವ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಉಪಾಧ್ಯಕ್ಷರ ನಡೆಯನ್ನು ಮಹಾಸಭೆ ತುಂಬು ಹೃದಯದಿಂದ ಅಭಿನಂದಿಸುತ್ತದೆ.

# ಮಹಾಸಭಾ ಆಯೋಜಿಸಿದ ಕಾಶಿ ಯಾತ್ರೆ



**ಕಾಶಿಯ ಹನುಮಾನ್ ಘಾಟ್ ಬಳಿ ಗಂಗಾ ನದಿ ಸ್ನಾನ ಸಂಕಲ್ಪ ಮಾಡುತ್ತಿರುವುದು.**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ 5 ದಿನಗಳ ಕಾಲ ಹಮ್ಮಿಕೊಂಡಿದ್ದ ಕಾಶಿ ಯಾತ್ರೆ ಪ್ರವಾಸವು ಮಹಾಸಭೆಯಲ್ಲಿ ಒಂದು ಹೊಸ ಇತಿಹಾಸವನ್ನೇ ಸೃಷ್ಟಿ ಮಾಡಿತು. ಮಹಾಸಭಾ ವತಿಯಿಂದ ಪ್ರಪ್ರಥಮ ಬಾರಿಗೆ ಹಮ್ಮಿಕೊಂಡಿದ್ದ ಈ ಕಾಶಿಯಾತ್ರೆಯಲ್ಲಿ ಸುಮಾರು 130 ರಿಂದ 150 ಜನ ವಿಪ್ರ ಬಾಂಧವರು ಪಾಲ್ಗೊಂಡಿದ್ದರು.ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರ ನೇತೃತ್ವದಲ್ಲಿ, ಟ್ರಾವೆಲ್ ಲಾಂಚ್ ನ ಶ್ರೀಮತಿ ವಿನುತರವರು ಪ್ರವಾಸವನ್ನು ಆಯೋಜಿಸಿದ್ದರು. ನಾನು ಮತ್ತು ಮತ್ತು ರವಿಕುಮಾರ್ ಅವರು ಇದರ ಉಸ್ತುವಾರಿಯನ್ನು ವಹಿಸಿದ್ದೆವು.

ಈ ಪ್ರವಾಸವು ದಿನಾಂಕ 11/08/2023 ರಂದು ಬೆಳಿಗ್ಗೆ ಬೆಂಗಳೂರಿನಿಂದ ಪ್ರಯಾಗ್ ರಾಜ್ ಅಥವಾ ಅಲಹಾಬಾದ್ ಗೆ ವಿಮಾನ ಮಾರ್ಗವಾಗಿ ತೆರಳಿ, ಗಂಗಾ ಯಮುನಾ ಸರಸ್ವತಿ ಮೂರು ನದಿಗಳ ಸಂಗಮದಲ್ಲಿ ಮಿಂದು, ತ್ರಿವೇಣಿ ಸ್ನಾನ, ವೇಣಿ ದಾನ, ಪಿತೃ ಶಾದ್ರ ಗಳನ್ನು ಶ್ರೀ ಜಗನ್ನಾಥ ಶಾಸ್ತ್ರಿ ಮಾರ್ಗದರ್ಶನದಲ್ಲಿ ಅತ್ಯಂತ ಶಾಸ್ತ್ರೋಕ್ತವಾಗಿ ಮುಗಿಸಿದರು.ಅಂದು ರಾತ್ರಿ ಕಾಶಿ ಅಥವಾ ವಾರಣಾಸಿಗೆ ಬಂದು ತಲುಪಿದೆವು.

ಮರುದಿನ ಅಂದರೆ ದಿನಾಂಕ 12/08/2018 ಬೆಳಿಗ್ಗೆ, ಹಿಂದೂ ಧರ್ಮದಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಜೀವನದಲ್ಲಿ ಒಮ್ಮೆಯಾದರೂ ಸಾಕ್ಷಾತ್ ಪರಮೇಶ್ವರನು ನೆಲೆಸಿರುವ ಕಾಶಿಯ ಶ್ರೀ ವಿಶ್ವನಾಥ ಸ್ವಾಮಿಯ ದರ್ಶನವನ್ನು ಪಡೆದರೆ ತಮ್ಮ ಪುಣ್ಯ ಎಂದು ನಂಬಿರುವಂತೆ ಎಲ್ಲರೂ ಕಾಶಿ ಶ್ರೀ ವಿಶ್ವನಾಥ ಸ್ವಾಮಿಯ ದರ್ಶನವನ್ನು ಪಡೆದು ಪುನೀತರಾದೆವು. ಅಲ್ಲೇ ಇರುವ ಶ್ರೀ ಪಾರ್ವತಿ ದೇವಿಯ ಸ್ವರೂಪಳಾದ ಜಗನ್ಮಾತೆ ಶ್ರೀ ಅನ್ನಪೂರ್ಣೇಶ್ವರಿ ಹಾಗೂ ಶ್ರೀ ವಿಶಾಲಾಕ್ಷಿಯ ದರ್ಶನವನ್ನು ಪಡೆದ ಭಾಗ್ಯವು ಸಹ ಎಲ್ಲರಿಗೂ ದೊರೆಯಿತು. ಸಂಜೆ ವಾರಣಾಸಿಯ ಬಿರ್ಲಾ ಮಂದಿರದ (ಹೊಸ ವಿಶ್ವನಾಥ ಮಂದಿರ), ಸಂಕಟಮೋಚನ ಹನುಮಾನ್, ಕವಡೆಯಮ್ಮ ಶ್ರೀ ದುರ್ಗಾ ದೇವಿಯ ದರ್ಶನವನ್ನು ಸಹ ಪಡೆದು ಪುನೀತರಾದೆವು.

ಮರುದಿನ ಮೂರನೇ ದಿನ ಅಂದರೆ 13/8/23ರಂದು ಬೆಳಿಗ್ಗೆ ಶ್ರೀ ಕಾಲಭೈರವನ ದರ್ಶನ ಪಡೆದು ಅಲ್ಲಿಂದ ಹನುಮಾನ್ ಘಾಟ್ ಗೆ ತೆರಳಿ, ಮಾನವನ ಪಾಪಗಳನ್ನು ತೊಳೆಯುವ ತಾಯಿಯೆಂದು ಪ್ರಸಿದ್ಧವಾಗಿರುವ ಗಂಗಾಮಾತೆಯನ್ನು ಕುರಿತು, ತಾಯಿ ನಾವು ತಿಳಿದು ಅಥವಾ ತಿಳಿಯದೆ ಮಾಡಿರುವ ನಮ್ಮ ತಪ್ಪುಗಳನ್ನು ಕ್ಷಮಿಸಿ, ನಾವು ಮಾಡಿರುವ ಎಲ್ಲಾ ಪಾಪಗಳನ್ನು ತೊಳೆದು ನಮ್ಮನ್ನು ಪುನೀತರನ್ನಾಗಿ ಮಾಡು ಎಂದು ಸಂಕಲ್ಪವನ್ನು ಮಾಡಿ ಎಲ್ಲರೂ ಗಂಗಾ ನದಿಯಲ್ಲಿ ಸ್ನಾನವನ್ನು ಮಾಡಿದೆವು. ಸುಮಂಗಲಿಯರು ಗಂಗಾ ಮಾತೆಯನ್ನು ಪೂಜಿಸಿ ಮರದ ಬಾಗಿನವನ್ನು ಅರ್ಪಿಸಿದರು. ಪಿತೃ ಕಾರ್ಯಗಳಿಗೆ ಅರ್ಹರಾದ ಎಲ್ಲರೂ ಪಿತೃ ಶಾದ್ರಗಳನ್ನು ನೆರವೇರಿಸಿದರು. ಮೂಲತಃ ಕರ್ನಾಟಕದ ಮೈಸೂರಿನವರಾದ ಶ್ರೀ ವಿಶ್ವನಾಥ ಶರ್ಮ ಅವರ ಮಕ್ಕಳು ಬಹಳ ಶಾಸ್ತ್ರೋಕ್ತವಾಗಿ ವಿಧಿ ವಿಧಾನಗಳಿಂದ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಂಚಿ ಕಾಮಕೋಟಿ ಮಠದ ಶ್ರೀ ಶ್ರೀ ವಿಜಯೇಂದ್ರ ಸರಸ್ವತಿ ಸನ್ನಿದಾನಂಗಳವರನ ಭೇಟಿ ಮಾಡಿ ಅವರ ಆಶೀರ್ವಾದವನ್ನು ಪಡೆದು, ಕಾಶಿಯಲ್ಲಿ ನೆಲೆಸಿರುವ ಶಿವಗಂಗೆ ಶಂಕರ ಮಠದ ಶ್ರೀ ಶ್ರೀ ಪುರುಷೋತ್ತಮ ಭಾರತಿ ಸನ್ನಿದಾನಂಗಳವರನ್ನು ಭೇಟಿ ಮಾಡಿ ಫಲಸಮರ್ಪಣೆ ನೀಡಿ ಅವರ ಅನುಗ್ರಹ ಆಶೀರ್ವಾದ ಪಡೆದೆವು. ಸಂಜೆ ಕಾಶಿಯಲ್ಲಿ ಗಂಗಾ ಮಾತೆಯ ಪ್ರಸಿದ್ಧ ಮತ್ತು ಸುಂದರವಾದ ಗಂಗಾಆರತಿಯನ್ನು ನೋಡಿ ಪುಳಕಿತರಾದೆವು.

ನಾಲ್ಕನೇ ದಿನ ಅಂದರೆ 14/08/2023 ರಂದು ಕಾಶಿಯಿಂದ ಮುಂಜಾನೆ 4:00 ಗಂಟೆಗೆ ಎದ್ದು ಪ್ರಯಾಣ ಬೆಳೆಸಿದ ನಾವು ಮಧ್ಯಾಹ್ನ 12:30 ರಿಂದ 1 ಗಂಟೆ ಸುಮಾರಿಗೆ ಗಯಾ ತಲುಪಿದೆವು. ಪುರಾಣಗಳಲ್ಲಿ ತಿಳಿಸಿರುವಂತೆ ಶಾದ್ಧಾಗಳಲ್ಲಿ ಅತ್ಯಂತ ಮುಖ್ಯವಾದ ಗಯಾಶಾದ್ಧಾ, ಜೀವನದಲ್ಲಿ ಒಮ್ಮೆಯಾದರೂ ಗಯಾದಲ್ಲಿ ಶಾದ್ಧ ಮಾಡಿ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿದರೆ ಅವರ ಆತ್ಮ ಸಂತೃಪ್ತಿಯಾಗುತ್ತದೆ ಎಂದು ಹೇಳುತ್ತಾರೆ ಹಾಗೂ ಗಯಾದಲ್ಲಿ ಮಹಿಳೆಯರಿಗೂ ಸಹ ಪಿಂಡಪ್ರದಾನ ಮಾಡುವ ಹಕ್ಕು ಇರುತ್ತದೆ. ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ದಶರಥ ಮಹಾರಾಜರು ನನಗೆ ತುಂಬಾ ಹಸಿವಾಗುತ್ತಿದೆ ಏನಾದರೂ ನೀಡು ಎಂದು ಕೇಳಿದಾಗ ಸಾಕ್ಷಾತ್ ಸೀತಾ ಮಾತೆಯು ತನ್ನಲ್ಲಿ ಏನು ಇಲ್ಲದ ಕಾರಣ ಮರಳಿನಿಂದ ಪಿಂಡಗಳನ್ನು ಮಾಡಿ ಮಾವನಿಗೆ ನೀಡಿದಳಂತೆ, ದಶರಥನು ಸ್ವತಃ ತನ್ನ ಕೈಯನ್ನು ಅಡ್ಡಿ ಪಿಂಡಗಳನ್ನು ಸ್ವೀಕರಿಸಿ ಸಂತೃಪ್ತನಾದನಂತೆ. ಇಂತಹ ಪವಿತ್ರ ಸ್ಥಳದಲ್ಲಿ ಮಾಡಲು ಅರ್ಹರಾದ ಎಲ್ಲರೂ ಶಾದ್ಧಗಳನ್ನು



**ಪ್ರಯಾಗ್ ರಾಜ್‌ನಲ್ಲಿ ವೇಣಿ ದಾನ ಮತ್ತು ಪಿತೃ ಕಾರ್ಯಗಳನ್ನು ಮಾಡುತ್ತಿರುವುದು.**

ಮಾಡಿ ಸಾಕ್ಷಾತ್ ಶ್ರೀ ಮಹಾವಿಷ್ಣು ಕಾಲಿಟ್ಟ ವಿಷ್ಣುಪಾದದ ಮೇಲೆ, ಫಲ್ಗುಣಿ ನದಿಯಲ್ಲಿ ಹಾಗೂ ವಟವೃಕ್ಷದ ಬಳಿ ಪಿಂಡಪ್ರಧಾನವನ್ನು ಮಾಡಿದರು.

ಮೂಲತಃ ಕರ್ನಾಟಕದವರೇ ಆದ ಶ್ರೀಪವನ್ ಶರ್ಮ ಅವರು ಗಯಾ ಶ್ರಾದ್ಧವನ್ನು ಅತ್ಯಂತ ಶಾಸ್ತ್ರೋಕ್ತವಾಗಿ ಮತ್ತು ವಿಧಿ ವಿಧಾನಗಳಿಂದ ನಡೆಸಿಕೊಟ್ಟರು ಹಾಗೂ ಅಲ್ಲಿನ ಸ್ಥಳ ಮಹಿಮೆಯನ್ನು ಸಹ ಎಲ್ಲರಿಗೂ ವಿವರಿಸಿದರು. ಶಕ್ತಿಪೀಠಗಳಲ್ಲಿ ಒಂದಾದ ಶ್ರೀ ಮಹಾಲಕ್ಷ್ಮಿಯ ಮಂಗಳ ಗೌರಿಯ ದರ್ಶನ ಭಾಗ್ಯವು ಸಹ ಪಡೆದೆವು. ಸಂಜೆ ಬುದ್ಧ ಗಯಾದ ವಸತಿಗೃಹಗಳಿಗೆ ತೆರಳಿ ವಿಶ್ರಾಂತಿಯನ್ನು ಪಡೆದೆವು.

ಐದನೇ ದಿನ ಅಂದರೆ 15/08/2023 ಇಡೀ ನಮ್ಮ ಭಾರತಕ್ಕೆ ದೇಶಕ್ಕೆ ವಿಶೇಷವಾದಂತ ದಿನ ಆಗಸ್ಟ್ 15 ಸ್ವಾತಂತ್ರ್ಯ ದಿನ ಬುದ್ಧ ಗಯಾದ ಹೋಟೆಲ್ ನ ಮುಂಭಾಗದ ಆವರಣದಲ್ಲಿ ಧ್ವಜಾರೋಹಣವನ್ನು ಮಾಡಿ, ರಾಷ್ಟ್ರಗೀತೆಯನ್ನು ಹಾಡಿ 76ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಬುದ್ಧನಿಗೆ ಜ್ಞಾನೋದಯವಾದ ಭೋದಿ ವೃಕ್ಷ ಮತ್ತು ಅನೇಕ ಬುದ್ಧನ ಮಂದಿರಗಳನ್ನು ವೀಕ್ಷಿಸಿ, ಅಲ್ಲಿಂದ ಪಟ್ನ ವಿಮಾನ ನಿಲ್ದಾಣಕ್ಕೆ ಬಂದು ಪಾಟ್ನಾ ವಿಮಾನ ನಿಲ್ದಾಣದಿಂದ,ವಿಮಾನ ಮಾರ್ಗವಾಗಿ ಬೆಂಗಳೂರಿಗೆ ರಾತ್ರಿ ಸರಿ ಸುಮಾರು 9:30ಕ್ಕೆ ಎಲ್ಲರೂ ಆರೋಗ್ಯ ಮತ್ತು ಕ್ಷೇಮದಿಂದ ಬಂದು ತಲುಪುವ ಮೂಲಕ ಯಾತ್ರೆಯು ಅಂತಿಮಗೊಂಡಿತು.

ಮಹಾಸಭಾ ವತಿಯಿಂದ ಆಯೋಜಿಸಿದ್ದ ಈ ಯಾತ್ರೆಯಲ್ಲಿ ರಾಜ್ಯದ ಹಲವಾರು ಭಾಗಗಳಾದ ಉಡುಪಿ,ಶೃಂಗೇರಿ, ಅರಸೀಕೆರೆ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಮೈಸೂರು ಮತ್ತು ಬೆಂಗಳೂರು ನಗರದ ಅನೇಕ ಪ್ರಾಂತ್ಯಗಳಿಂದ ಆಗಮಿಸಿದ ಎಲ್ಲರೂ ಸಂತಸ ವ್ಯಕ್ತಪಡಿಸಿದರು. ಮಹಾಸಭೆಯ ಆಯೋಜಿಸಿರುವ ಯಾತ್ರೆಯ ವಿಭಿನ್ನವಾಗಿದ್ದು ,ಮುಂದಿನ ದಿನಗಳಲ್ಲಿ ಇಂತಹ ಯಾತ್ರೆಗಳು ನಿರಂತರವಾಗಿ ನಡೆಯಲಿ ನಮ್ಮೆಲ್ಲರ ಸಹಕಾರ ಸಂಪೂರ್ಣವಾಗಿ ಇರುವುದಾಗಿ ತಿಳಿಸಿದರು, ಮುಖ್ಯವಾಗಿ ಈ ಯಾತ್ರೆಯಲ್ಲಿ , ವೇದ ಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮ ಮತ್ತು ವೇದ ಬ್ರಹ್ಮ ಶ್ರೀ ಮಂಜುನಾಥ ಶಾಸ್ತ್ರಿ ಅವರ ನೇತೃತ್ವದಲ್ಲಿ ನಡೆದ ಶ್ರಾದ್ಧ ಕಾರ್ಯಕ್ರಮಗಳು ಅತ್ಯಂತ ಶಾಸ್ತ್ರೋಕ್ತವಾಗಿ ವಿಧಿ ವಿಧಾನಗಳಿಂದ ನಡೆದಿದ್ದು, ಹಾಗೂ ಆ ಸ್ಥಳದ ಮಹಿಮೆಯನ್ನು ಸಹ ವಿವರಿಸಿದ್ದು ನಮ್ಮೆಲ್ಲರಿಗೂ ಅತ್ಯಂತ ಖುಷಿ ಎಂದು ಹೇಳುವ ಮೂಲಕ ಎಲ್ಲರೂ ಅವರಿಗೆ ಅಭಿನಂದನೆಗಳನ್ನು ತಿಳಿಸಿ ಆಶೀರ್ವಾದವನ್ನು ಸಹ ಪಡೆದರು.

ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯಿಂದ ಅವರು ಪ್ರವಾಸಕ್ಕೆ ಬಂದಿದ್ದ ಎಲ್ಲಾ ಯಾತ್ರಿಕರಿಗೂ ಭಗವಂತನ ಆಶೀರ್ವಾದ ಮತ್ತು ಅನುಗ್ರಹ ಇರಲಿ. ಎಂದು ಎಲ್ಲರಿಗೂ ಮಹಾಸಭಾ ವತಿಯಿಂದ ಶುಭವನ್ನು ಕೋರಿದರು. ಮುಂದಿನ ದಿನದಲ್ಲಿ ಮಹಾಸಭೆಯ ಸಂಘಟನೆಯನ್ನು ಬಲಪಡಿಸಲು ತಮ್ಮೆಲ್ಲರ ವಿಶ್ವಾಸ ಮತ್ತು ಸಹಕಾರ ತುಂಬಾ ಮುಖ್ಯ ತಾವೆಲ್ಲರೂ ಮಹಾ ಸಭೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಹಾಸಭೆನ್ನು ಬಲಪಡಿಸಬೇಕಾಗಿ ಕೋರಿದರು.



ಈ ರೀತಿಯ ಪ್ರವಾಸವನ್ನು ಆಯೋಜಿಸಲು ಮಹಾಸಭಾ ವತಿಯಿಂದ ಅವಕಾಶ ನೀಡಿದ ಅಧ್ಯಕ್ಷರಿಗೆ ಧನ್ಯವಾದಗಳನ್ನು ತಿಳಿಸುತ್ತ, ಯಾತ್ರೆಗೆ ಆಗಮಿಸಿದ ಎಲ್ಲರೂ ಭಗವಂತನು ಆಯುರಾರೋಗ್ಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**– ಡಿ.ವಿ. ರಾಜೇಂದ್ರ ಪ್ರಸಾದ್**

ಉಪಾಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ


ಜಾಹಿರಾತು

ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ**

**ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು– 570023**

**ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ**

ಶ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ)ಅಪರ, ಪೂರ್ವ, ಅಂತ್ಯೆಷ್ಟಿ ಕರ್ಮಾಧಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಿಗ್ಗೆ ಪ್ರಾತಃ ಕಾಲ 6 ರಿಂದ 6–30 ವೇದ ಪಠಣ, 6–30 ರಿಂದ 7–00 ವರೆಗೆ ಭಗವದ್ಗೀತ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜ್ಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ **ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ, ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.**

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**

**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**

**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ: 8088799540**

**8861998817**

**ಡಾ. ಬಿ.ಆರ್.ನಟರಾಜ್ ಜೋಯಿಸ್**

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ**

## ಶ್ರದ್ಧಾಂಜಲಿ

### ಶ್ರೀಮತಿ ಸುಶೀಲಮ್ಮ ಹಾರನಹಳ್ಳಿ ರಾಮಸ್ವಾಮಿಯವರು



ರಾಜ್ಯದ ಮಾಜಿ ಸಚಿವರಾದ ಹಾಗೂ ಹಾಸನ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದ ದಿವಂಗತ ಹಾರನಹಳ್ಳಿ ರಾಮಸ್ವಾಮಿ ಅವರ ಧರ್ಮಪತ್ನಿ ಶ್ರೀಮತಿ ಸುಶೀಲಮ್ಮನವರು ದಿನಾಂಕ 23/10/2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕರ್ನಾಟಕ ಏಕೀಕರಣ ಧುರೀಣ ದಿ॥ ಆಲೂರ ಸರ್ದಾರ್ ವೆಂಕಟರಾಮಯ್ಯ ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿ ದಿ॥ ಗೌರಮ್ಮನವರ ಪುತ್ರಿಯಾಗಿರುವ ಇವರಿಗೆ 92 ವರ್ಷ ವಯಸಾಗಿತ್ತು. ಇಬ್ಬರು ಗಂಡು ಮಕ್ಕಳು ಹಿರಿಯ ಸುಪುತ್ರರಾದ ಶ್ರೀ ಅರವಿಂದ ಹಾರನಹಳ್ಳಿ ಅವರು ಅಮೆರಿಕಾದ ಇಂಟೆಲ್ನಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ, ಕಿರಿಯ ಪುತ್ರರಾದ ಶ್ರೀ ಅಶೋಕ್ ಹಾರನಹಳ್ಳಿ ರವರು ಮಾಜಿ ಅಡ್ವೊಕೇಟ್ ಜನರಲ್ ಹಾಗೂ ಹಾಸನ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನ ದಯಪಾಲಿಸಲಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪರವಾಗಿ ಭಗವಂತನಲ್ಲಿ ಪ್ರಾರ್ಥಿಸಿ ಸಂತಾಪ ಸೂಚಿಸುತ್ತೇವೆ.

### ಪತ್ರಕರ್ತ ಕೆ. ಪ್ರಹ್ಲಾದರಾಯರು



ಕೋಲಾರದಲ್ಲಿ ಪತ್ರಿಕೋದ್ಯಮಕ್ಕೆ ಒಂದು ಗಟ್ಟಿ ನೆಲೆಗಟ್ಟನ್ನು ತಂದ ಕೋಲಾರದ ಪ್ರಪ್ರಥಮ ದೈನಿಕ 'ಕೋಲಾರ ಪತ್ರಿಕೆ' ಸಂಪಾದಕರಾದ ಕೆ.ಪ್ರಹ್ಲಾದರಾವ್ ನಮ್ಮನ್ನು ಅಗಲಿದ್ದಾರೆ, ಹಿಂದುಳಿದ ಕೋಲಾರ ಅವಿಭಜಿತ ಜಿಲ್ಲೆಯಲ್ಲಿ ಸ್ಥಳೀಯ ದಿನ ಪತ್ರಿಕೆ ಆರಂಭಿಸುವ ಮೂಲಕ ಜನ ಹುಬ್ಬೇರಿಸುವಂತೆ ಮಾಡಿದವರು ರಾಯರು. ಸಾಹಿತ್ಯ, ರಾಜಕೀಯ, ವ್ಯಾಪಾರ, ಕ್ರೀಡೆ, ಶಿಕ್ಷಣ, ಮನರಂಜನೆ ಹೀಗೆ ನಾನಾ ಕ್ಷೇತ್ರಗಳ ಬೆಳವಣಿಗೆಗೆ 'ಕೋಲಾರ ಪತ್ರಿಕೆ' ಪೂರಕವಾಯಿತು. ಬಂಡಾಯ ಸಂಘಟನೆ ಸೇರಿ ಜನಪರ ಹೋರಾಟಗಳಿಗೆ ಪತ್ರಿಕೆ ತನ್ನದೇ ಆದ ಕೊಡುಗೆ ನೀಡಿತು.ಜಿಲ್ಲೆಯಲ್ಲಿ ಪತ್ರಿಕೆ ಹೊಸ ಸಂಚಲನ ತಂದಿತು. ಈ ಎಲ್ಲವೂ ಆಗು ಮಾಡಿದ್ದು ಕೆ. ಪ್ರಹ್ಲಾದರಾಯರು. ಹಲವು ಪತ್ರಕರ್ತರು, ಸಾಹಿತಿಗಳ ಬೆಳವಣಿಗೆಗೆ, ರಾಜಕಾರಣಿಗಳ ಉನ್ನತಿಗೆ, ಶಿಕ್ಷಣ ಸುಧಾರಣೆಗೆ ಪ್ರಹ್ಲಾದರಾಯರು ಕಾರಣರಾದರು. ಇವರಿಗೆ ಸದ್ಗತಿ ದೊರಕಲೆಂದು ಹಾಗೂ ಕುಟುಂಬದವರಿಗೆ ದುಃಖಭರಿಸುವ ಶಕ್ತಿ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

# ಶ್ರೀ ನವರಾತ್ರಿ

– ಡಾ। ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ




ನವರಾತ್ರಿಯನ್ನು ಆಬಾಲವೃದ್ಧರೆಲ್ಲರೂ ಆಚರಿಸುತ್ತಾರೆ. ಅದನ್ನು ತಪ್ಪದೇ ಆಚರಿಸಬೇಕೆಂದು ದೇವೀಭಾಗವತ(3.26)ವು ಒತ್ತಾಯಿಸುತ್ತದೆ.

ನವರಾತ್ರಿಯಲ್ಲಿ ಎಲ್ಲರೂ ಉತ್ಸವದಲ್ಲಿ ಸಂತೋಷಿಸಿದರೂ ಅದರಲ್ಲಿ ಸ್ತ್ರೀಯರ ಪಾಲು ಹೆಚ್ಚು. ಬೆಳಗಿನಿಂದ ಸಂಜೆಯ ವರೆಗೆ ಸಿದ್ಧತೆಯನ್ನು ಮಾಡುವವರೂ ಅವರೇ, ಪೂಜೆಯಲ್ಲಿ ಪಾಲ್ಗೊಂಡು ಪೂಜೆಯನ್ನು ಪಡೆಯುವವರೂ ಅವರೇ.

ಸಪ್ತಶತಿಯಲ್ಲಿ ಹೇಳುವಂತೆ, ಶರತ್ಕಾಲದಲ್ಲಿಯೂ ವರ್ಷದ ಆದಿಯಲ್ಲಿಯೂ ದೇವೀ ಮಾಹಾತ್ಮ್ಯವನ್ನು ಕೇಳಿದವನಿಗೆ ಎಲ್ಲಾ ತೊಂದರೆಗಳಿಂದಲೂ ಮುಕ್ತಿ ದೊರೆಯುತ್ತದೆ, ಧನ ಧಾನ್ಯಗಳು ಉಂಟಾಗುತ್ತವೆ.(12.11). ಈ ಮಾತನ್ನು ಅನುಸರಿಸಿ ಸಪ್ತಶತಿಯ ಪಾರಾಯಣವನ್ನು ಮಾಡಲಾಗುತ್ತದೆ.

ದೇವೀ ಮಾಹಾತ್ಮ್ಯದಲ್ಲಿ(ಸಪ್ತಶತಿಯಲ್ಲಿ) ದೇವಿಯ ರೂಪಗಳ ವರ್ಣನೆಯಿದೆ. ಅವುಗಳನ್ನೇ ನವರಾತ್ರಿಯ ದಿನಗಳಲ್ಲಿ ಪೂಜಿಸುವುದುಂಟು. ಮೊದಲನೆಯ ದಿನ ಯೋಗನಿದ್ರೆಯನ್ನೂ, ಎರಡನೆಯ ದಿನ ದೇವಜಾತೆಯನ್ನೂ, ಮೂರನೆಯ ದಿನ ಮಹಿಷಮರ್ದಿನಿಯನ್ನೂ, ನಾಲ್ಕನೆಯ ದಿನ ಶೈಲಜೆಯನ್ನೂ, ಐದನೆಯ ದಿನ ಧೂಮ್ರಘಾತಿನಿಯನ್ನೂ, ಆರನೆಯ ದಿನ ಚಂಡಮುಂಡಘಾತಿನಿಯನ್ನೂ, ಏಳನೆಯ ದಿನ ರಕ್ತಬೀಜಘಾತಿನಿಯನ್ನೂ, ಎಂಟನೆಯ ದಿನ ನಿಶುಂಭ ಘಾತಿನಿಯನ್ನೂ, ಒಂಬತ್ತನೆಯ ದಿನ ಶುಂಭಘಾತಿನಿಯನ್ನೂ ಪೂಜಿಸುತ್ತಾರೆ.

ದೇವೀ ಮಾಹಾತ್ಮ್ಯದಲ್ಲಿಯೇ ಬ್ರಾಹ್ಮೀ ಮಾಹೇಶ್ವರೀ ಕೌಮಾರೀ ವೈಷ್ಣವೀ ವಾರಾಹೀ ಇಂದ್ರಾಣೀ ಚಾಮುಂಡಾ ಎಂಬ ಸಪ್ತ ಮಾತೃಕೆಯರ ಉಲ್ಲೇಖವೂ ಇದೆ. ಕಾಲಿಕಾ ಕೌಶಿಕೀ ನಾರಸಿಂಹೀ ಎಂಬ ಶಕ್ತಿದೇವತೆಗಳೂ ಅಲ್ಲಿಯೇ ಉಕ್ತವಾಗಿವೆ.

ನವರಾತ್ರಿಯನ್ನು ನವ ದುರ್ಗೆಯರ ಪೂಜೆಯೆಂದೂ ಹೇಳುವುದುಂಟು. ಶೈಲಪುತ್ರೀ ಬ್ರಹ್ಮಚಾರಿಣೀ ಚಂಡಘಂಟಾ ಕೂಷ್ಮಾಂಡಾ ಸ್ಕಂದಮಾತಾ ಕಾತ್ಯಾಯನೀ ಕಾಲರಾತ್ರಿ ಮಹಾಗೌರೀ ಸಿದ್ಧಿದಾತ್ರೀ ಎಂಬ ನವ ದುರ್ಗೆಯರನ್ನು ಪೂಜಿಸುವ ಕ್ರಮವು ರೂಢಿಯಲ್ಲಿದೆ.

ಕಲಶ ಸ್ಥಾಪನೆಯಾದ ಮೇಲೆ ಪ್ರತಿದಿನವೂ (ಎರಡು ವರ್ಷದಿಂದ ಆರಂಭಿಸಿ ಹತ್ತು ವರ್ಷದ ವರೆಗಿನ) ಕುಮಾರಿಯನ್ನು ವಸ್ತ್ರಾಲಂಕಾರಭೋಜನಾದಿಗಳಿಂದ ಪೂಜಿಸುವ ರೂಢಿಯಿದೆ. ಹೇಮಾದ್ರಿಯಲ್ಲಿ ಕ್ರಮವಾಗಿ ಕುಮಾರಿಯ ಸಂಖ್ಯೆಯನ್ನು ಹೆಚ್ಚಿಸಬೇಕೆಂದಿದೆ. ಭೂಲಾಭ ಐಶ್ವರ್ಯ ಮುಂತಾದ ಫಲಗಳಿಗಾಗಿ ಅಲ್ಲದಿದ್ದರೂ ಮನೆಯ ಹೆಣ್ಣು ಮಕ್ಕಳಿಗೆ ಹಸ್ತೋದಕವನ್ನಿತ್ತು, ಊಟ ಮಾಡಿಸಿ, ದಕ್ಷಿಣೆ ಕೊಡುತ್ತಾರೆ.

ಬೆಳಗಿನಲ್ಲಿ ಎದ್ದು ಹೊಸ್ತಿಲು ಸಾರಿಸಿ ಸ್ತ್ರೀಯರು ಪೂಜೆಯ ಸ್ಥಳದಲ್ಲಿ ರಂಗವಲ್ಲಿಯನ್ನು ಬಿಡಿಸುತ್ತಾರೆ. ಚಿತ್ರ ವಿಚಿತ್ರವಾದ ಹೂಗಳನ್ನು ಸಂಗ್ರಹಿಸಿ ಮಾಲೆಗಳನ್ನು ಕಟ್ಟುತ್ತಾರೆ. ನೀರಾಜನಕ್ಕಾಗಿ ತಟ್ಟೆಯಲ್ಲಿ ಅರಿಸಿನ ಕುಂಕುಮ ಮುಂತಾದವುಗಳಿಂದ ಚಿತ್ರಗಳನ್ನು ಬರೆಯುತ್ತಾರೆ.

ನೈವೇದ್ಯಕ್ಕಾಗಿ ಬಗೆ ಬಗೆಯ ಅನ್ನ ಭಕ್ಷ್ಯಗಳನ್ನು ತಯಾರಿಸಿ ಶಾರದೆಯ ಎಡೆಯನ್ನು ಸಜ್ಜುಗೊಳಿಸುತ್ತಾರೆ. ಮೊಸರನ್ನ ಅಥವಾ ಬುತ್ತಿಯನ್ನ ತುಪ್ಪದನ್ನ ಕೋಸಂಬರಿ ನವರಾತ್ರಿಯಲ್ಲಿ ಮಾಡಲೇಬೇಕು. ಶಾರದೆಯ ಎಡೆಯನ್ನು ಊಟದಲ್ಲಿ ಮನೆಯ ಮಕ್ಕಳಿಗೆ ಹಾಕಿದರೆ ಅವರು ಬುದ್ಧಿವಂತರಾಗುವರೆಂಬ ನಂಬಿಕೆಯಿದೆ.

ಕೆಲವರು ಹಾಡುಗಳನ್ನು ಹೇಳುತ್ತಾರೆ.

ದೇವಿಯ ಕರೆದದ್ದು, ಪೂಜೆ ಮಾಡಿದ್ದು, ನೈವೇದ್ಯ ಮಾಡಿದ್ದು, ಬಳೆ ತೊಡಸಿದ್ದು, ಮಂಗಳಾರತಿ ಎತ್ತಿದ್ದು, ನಮಸ್ಕಾರ, ಹೂ ಬೇಡಿದ್ದು, ಪ್ರಾರ್ಥಿಸಿದ್ದು – ಇಂತಹ ಹಾಡುಗಳನ್ನು ಹಾಡುತ್ತಾ ಪೂಜೆಯಲ್ಲಿ ಭಾಗವಹಿಸುತ್ತಾರೆ. ಇದಲ್ಲದೆ ಲಲಿತಾ ಸಹಸ್ರನಾಮ, ಸೌಂದರ್ಯಲಹರಿಗಳನ್ನು ಹೇಳುವುದುಂಟು.

ನವರಾತ್ರಿಯ ಹಿಂದಿನ ದಿನವೇ, ಗೊಂಬೆಗಳನ್ನು ಸ್ವಚ್ಛಗೊಳಿಸಲು ತೆಗೆದಿರಿಸುತ್ತಾರೆ. ಮೊದಲ ದಿನವೇ ಪೂಜಾ ಪ್ರದರ್ಶನಕ್ಕಾಗಿ ಗೊಂಬೆಗಳನ್ನು ಸ್ಥಾಪಿಸುತ್ತಾರೆ. ಅವುಗಳ ಜೊತೆಗೆ ವೀಳ್ಯದ ಎಲೆಗಳಿರುವ ಒಂದು ಚಿಕ್ಕ ಕಲಶವೂ ಇರುತ್ತದೆ. ತವರಿನಲ್ಲಿ ಕೊಟ್ಟಿರುವ ಪಟ್ಟದ ಗೊಂಬೆಯನ್ನು ಎಲ್ಲಕ್ಕಿಂತ ಮೊದಲು ಮೇಲಿರಿಸುತ್ತಾರೆ. ಅಷ್ಟಲಕ್ಷ್ಮಿಯರು ದಶಾವತಾರ ರಾಮಾಯಣ –ಮಹಾಭಾರತ ಪಾತ್ರಗಳು, ತ್ರಿಮೂರ್ತಿಗಳು, ಶ್ರೀಶಂಕರಭಗವತ್ಪಾದರು, ಗವಾಯಿಗಳು ಮುಂತಾದವುಗಳೊಂದಿಗೆ ವ್ಯಾಪಾರ ಮಾಡುವ ಸೆಟ್ಟಿ ಮತ್ತು ಅವನ ಹೆಂಡತಿಯ ಗೊಂಬೆ ಇದ್ದೆ ಇರುತ್ತದೆ. ಹಸು ಕರು ಕುದುರೆ ಆನೆ ಮುಂತಾದ ಪ್ರಾಣಿಗಳೊಂದಿಗೆ ಕ್ರೀಡಾ ಸಾಮಗ್ರಿಗಳೂ ಇರುತ್ತವೆ. ಗಂಗಾವತರಣ, ಸಮುದ್ರ ಮಥನ ಮುಂತಾದ ಪುರಾಣ ಪುಣ್ಯ ಕಥೆಗಳನ್ನು ಬಿಂಬಿಸುವ ಪ್ರದರ್ಶನವೂ ಅಲ್ಲಿ ನಡೆಯುತ್ತದೆ. ಪ್ರತಿದಿನವೂ ಅವುಗಳನ್ನು ಸಂಜೆ ಪೂಜಿಸಿ ಆರತಿಗೈದು ಮಕ್ಕಳಿಗೆ ತಿನಿಸುಗಳನ್ನು ನೀಡುತ್ತಾರೆ. ಹೆಣ್ಣು ಮಕ್ಕಳಿಗೆ ಬಾಗಿನ ಕೊಡುತ್ತಾರೆ.

ನವರಾತ್ರಿಯ ಮೊದಲಿನ ಆರು ದಿನಗಳಲ್ಲಿ ಪೂಜೆ ಮಾಡಲಾಗದಿದ್ದರೆ, ಕೊನೆಯ ಮೂರು ದಿನಗಳಲ್ಲಿ ಪೂಜಿಸಿದರೂ ಶ್ರೀ ದೇವಿಯು ಸಂತುಷ್ಟಳಾಗುತ್ತಾಳೆ. ಅಷ್ಟಮಿಯ ದಿನ ಪೂಜೆ ಮಾಡಿದರೂ ಸಾಕು ಎಂದು ಶಾಸ್ತ್ರದಲ್ಲಿದೆ. ಈ ದಿನಗಳಲ್ಲಿ ಪುಸ್ತಕವನ್ನುಪೂಜೆ ಮಾಡಿ, ಪ್ರಸಾದವನ್ನು ಪಡೆದು, ಪಠನ ಮಾಡಿದರೆ ಶಾರದೆಯ ಅನುಗ್ರಹವುಂಟಾಗುತ್ತದೆ.

ನವರಾತ್ರಿ ಹಗಲಿನಲ್ಲಿ ಉಪವಾಸ, ರಾತ್ರಿಯ ಪೂಜೆಯಿಂದ ಸಂಪನ್ನವಾದರೆ, ವಿಜಯ ದಶಮಿಯಂದು ಮಧ್ಯಾಹ್ನವೇ ಪೂಜೆಯಿರುತ್ತದೆ. ಅಂದು ಎಲ್ಲರೂ ಆಭರಣಗಳನ್ನು ಧರಿಸುತ್ತಾರೆ. ನವರಾತ್ರಿಯ ಕೊನೆಯ ಮೂರು ದಿನಗಳ ಕಾಲ ಓದುವುದಾಗಲಿ, ಬರೆಯುವುದಾಗಲಿ ದೇವಿಗೆ ಇಷ್ಟವಾಗುವುದಿಲ್ಲ. ಆದರೆ ವಿದ್ಯಾ ದಶಮಿಯಂದು ಅದನ್ನು ಮಾಡದಿದ್ದರೆ ಜಗನ್ಮಾತೆಯು ಹರಸುವುದಿಲ್ಲ. ಅಂದು ಶಾರದಾ ಪೂಜೆಯನ್ನು ಶಾಲೆಗಳಲ್ಲಿಯೂ ಏರ್ಪಡಿಸುತ್ತಾರೆ.

# ಸಂತ ಭದ್ರಗಿರಿ ಕೇಶವದಾಸರು

– ಸುರೇಶ್ ಮೂನ



ಬೆಂಗಳೂರಿನಿಂದ ತುಮಕೂರಿಗೆ ಹೋಗುವ ದಾರಿಯಲ್ಲಿ ಸುಮಾರು 24 ಕಿಲೋಮೀಟ ದೂರ ಸಾಗಿದರೆ ನೆಲಮಂಗಲದ ಬಳಿ ಹೆದ್ದಾರಿಯ ಎಡಬದಿಗೆ ಅರಿಶಿನಕುಂಟೆಯಲ್ಲಿ ಇರುವ ಪುಣ್ಯಕ್ಷೇತ್ರವೇ ವಿಶ್ವಶಾಂತಿ ಆಶ್ರಮ. ಎತ್ತರದ ವೇದಿಕೆಯ ಮೇಲೆ ನಿಂತಿರುವ ವಿಶ್ವ ವಿಜಯ ವಿಠಲನ ಸುಂದರ ಮೂರ್ತಿ ಹಾಗೂ ಬಳಿಯೇ ಇರುವ ಮತ್ತು ಭಾರತದಲ್ಲಿ ಅತ್ಯುತ್ತಮವಾದ ಗೀತಾ ಮಂದಿರ ಇಲ್ಲಿನ ಪ್ರಮುಖ ಆಕರ್ಷಣೆಗಳು. ಇಂತಹ ಸುಂದರ, ಪ್ರಶಾಂತ ಹಾಗೂ ದೇಶ ವಿದೇಶಗಳಲ್ಲೂ ಹೆಸರು ಮಾಡಿರುವ ಈ ಪವಿತ್ರ ಕ್ಷೇತ್ರ ಮತ್ತು ಪ್ರವಾಸಿ ತಾಣವನ್ನು ನಿರ್ಮಿಸಿದವರು ಸಂತ ಭದ್ರಗಿರಿ ಕೇಶವದಾಸರು. ನಮ್ಮ ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಕೀರ್ತನ ಕಲಾಕ್ಷೇತ್ರಗಳ ಅಭಿವೃದ್ಧಿಗೆ ಅತ್ಯಮೂಲ್ಯ ಕೊಡುಗೆ ನೀಡಿದ, ಎಂದಿಗೂ ಮರೆಯಲಾಗದ ಮಹಾನುಭಾವರು. ಬಹಳ ಹಿಂದೆಯೇ ಜಾಗತಿಕ ಮಟ್ಟದಲ್ಲಿ ಭಾರತದ ಸನಾತನ ಧರ್ಮದ ಸಾರವನ್ನು ತಿಳಿಸುತ್ತಾ ಅನೇಕ ಪ್ರಜ್ಞಾವಂತ ವಿದೇಶಿಯರು ಭಾರತಕ್ಕೆ ಅದರಲ್ಲೂ ಬೆಂಗಳೂರನ್ನು ಅರಸಿ ಬರುವಂತೆ ಮಾಡಿದ ಪುಣ್ಯಾತ್ಮರು. ಅದರ ಪರಿಣಾಮವಾಗಿ ರಾಜಾಜಿನಗರದ ದಾಸ ಆಶ್ರಮ, ವಿಶ್ವ ಶಾಂತಿ ಆಶ್ರಮದಂತಹ ಪವಿತ್ರ ಕೇಂದ್ರಗಳು ರೂಪಗೊಂಡವು .

ಒಂದು ಶತಮಾನಕ್ಕೂ ಹಿಂದೆಯೇ ಸ್ವಾಮಿ ವಿವೇಕಾನಂದರು ಅಮೆರಿಕಕ್ಕೆ ತೆರಳಿಎಲ್ಲಧರ್ಮಗಳಮೂಲವೇ, ಆಧಾರವೇ ಸನಾತನ ಧರ್ಮ ಎಂಬ ತತ್ವವನ್ನು ಸಾರಿ ಹೊರಗಿನವರು ಈ ದೇಶದ ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಗೌರವದಿಂದ ಕಣ್ತೆರೆದು ನೋಡುವಂತೆ ಮಾಡಿದರು. ಅಂತಹದೇ ಕಾರ್ಯವನ್ನು ಕೇಶವದಾಸರು ಕೀರ್ತನ ಕಲೆಯ ಮೂಲಕ ನೆರವೇರಿಸಿ ಭಾರತಕ್ಕೆ, ನಮ್ಮ ರಾಜ್ಯಕ್ಕೆ ಅದರಲ್ಲೂ ಬೆಂಗಳೂರಿಗೆ ವಿಶೇಷ ಗೌರವವನ್ನು ತಂದಿರುವರು.

ಕೇಶವದಾಸರು ಉಡುಪಿಯ ಬಳಿ ಇರುವ ಶ್ರೀ ಕ್ಷೇತ್ರ ಭದ್ರಗಿರಿಯ ವೆಂಕಟರಮಣ ಪೈ ಮತ್ತು ರುಕ್ಮಿಣಮ್ಮ ದಂಪತಿಗಳಿಗೆ ಮೂರನೆಯ ಪುತ್ರನಾಗಿ 1934 ರಜುಲೈ 22 ರಂದು ಜನಿಸಿದರು. ರಾಧಾಕೃಷ್ಣ ಇವರಿಗೆ ಇಟ್ಟ ಹೆಸರು. ರುಕ್ಮಿಣಮ್ಮ ಅವರ ಸ್ನೇಹಿತೆ ರಾಧಾಬಾಯಿ ಈ ಸುಂದರ ಮಗುವನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಆಕೆಯ ಪತಿ ಹೆಸರು ರಾಧಾಕೃಷ್ಣ. ಈ ಮಗುವನ್ನು ಆ ಹೆಸರಿನಿಂದ ಕರೆಯಲು ನಾಚಿಕೆಯಾಗುತ್ತಿತ್ತು. ಹೀಗಾಗಿ ಕೇಶವ ಎಂದು ಕರೆಯುತ್ತಿದ್ದರು. ಈ ಹೆಸರೇ ಮುಂದೆ ಬಳಕೆಗೆ ಬಂದಿತು.

ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎಂಬ ಮಾತಿನಂತೆ ತನ್ನ ವಯಸ್ಸಿನ ಇತರೆ ಮಕ್ಕಳಂತೆ ಆಟಗಳಲ್ಲಿ ತೊಡಗದೆ ಕೇಶವನು ಶ್ರೀಕೃಷ್ಣನ ಬಾಲಲೀಲೆಗಳನ್ನು ಕೇಳುವುದು, ಭಜನೆಗಳನ್ನು ಕಲಿತು ತನ್ನ ಗೆಳೆಯರಿಗೂ ಹೇಳಿಕೊಡುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿದ್ದ. ತನ್ನ ಸ್ನೇಹಿತರ ಗುಂಪನ್ನು ಸೇರಿಸಿಕೊಂಡು ಶ್ರೀಕೃಷ್ಣ ಸಂಘವನ್ನು ಪ್ರಾರಂಭಿಸಿದ, ಇವನ ಶಾಲೆಗೆ ಒಮ್ಮೆ ಇನ್ಸ್ಪೆಕ್ಟರ್ ಬಂದಿದ್ದಾಗ ಅವರ ಎದುರಿಗೆ ಶ್ರೀ ಭದ್ರಾಚಲ ರಾಮದಾಸರ ನಾಟಕವನ್ನು ಆಡಿ ರಾಮದಾಸನಾಗಿ ಅದ್ಭುತವಾದ ಪ್ರದರ್ಶನವನ್ನು ನೀಡಿದ. ಇವನ ಪ್ರತಿಭೆಯನ್ನು ಗುರುತಿಸಿದ ಉಪಾಧ್ಯಾಯಿನಿ ನಾಗವೇಣಿಯಮ್ಮ, ಭಕ್ತ ಪ್ರಹ್ಲಾದನ ಹರಿಕಥೆಯನ್ನು ಹೇಳಿಕೊಟ್ಟರು. ಚಿಕ್ಕ ವಯಸ್ಸಿನಲ್ಲಿ ಕೇಶವನು ಮಾಡಿದ ಭಕ್ತ ಪ್ರಹ್ಲಾದ ಕಥೆ ಅವನ ಭವ್ಯ ಭವಿಷ್ಯಕ್ಕೆ ನಾಂದಿಯಾಯಿತು. ಕೀರ್ತನ ಕಲೆ ಜೀವನದ ಉಸಿರಾಯಿತು. ಬಹುಬೇಗ ಈ ಬಾಲಕನ ಪ್ರತಿಭೆ ಸುತ್ತಮುತ್ತಲ ಹಳ್ಳಿಗೂ ಹರಡಿ ಆಹ್ವಾನಿಸ ತೊಡಗಿದರು, ಕೇಶವನಿಗೆ ಇನ್ನು 11 ವರ್ಷವಾಗಿದ್ದಾಗ ಒಮ್ಮೆ ಊರಿನ ವೀರ ವಿಠಲನ ಗುಡಿಗೆ ಬರಲು ಗರ್ಭಗುಡಿಯಲ್ಲಿದ್ದ ವಿಠಲನ ಸುಂದರ ಮೂರ್ತಿಯೇ ಕೈಬೀಸಿ ಕರೆದಂತಾಯಿತು. ವಿಗ್ರಹದ ಬಳಿ ಹೋದ ಬಾಲಕನಿಗೆ ಭಾವೋನ್ಮಾದಸ್ಥಿತಿ ಉಂಟಾಗಿ ಅಲ್ಲಿಯೇ ಉರುಳಿದ. ಆಗ ವಿಠಲನೇ ಮುಂದೆ ಬಂದು, ಮಗು ಹೆದರಬೇಡ, ಜಗತ್ತಿಗೆ ನಿನ್ನಿಂದ ಭಕ್ತಿ ಮತ್ತು ಧರ್ಮಗಳ ಪ್ರಚಾರವಾಗ ಬೇಕಾಗಿದೆ. ಮುಂದೆ ಹೋಗು, ನಾನಿದ್ದೇನೆ' ಎಂದು ಹೇಳಿದ ದಿವ್ಯಾನುಭವವಾಯಿತು. ಎಷ್ಟು ಹೊತ್ತಾದರೂ ಮಗ ಮನೆಗೆ ಬರಲಿಲ್ಲವಾಗಿ ತಾಯಿ ಹುಡುಕುತ್ತಾ ಗುಡಿಗೆ ಬಂದು ಆ ಸ್ಥಿತಿಯಲ್ಲಿರುವ ಮಗನನ್ನು ಕಂಡು ಎಬ್ಬಿಸಿದರು. ತನ್ನ ಅನುಭವವನ್ನು ತಾಯಿಗೆ ತಿಳಿಸಿದಾಗ ಅತ್ಯಂತ ಸಂತೋಷಗೊಂಡ ಆಕೆ 'ನಿನಗೆ ವಿಠಲನ ಅನುಗ್ರಹವಾಗಿದೆ' ಎಂದರು.

ಕೇಶವ ಏಳನೇ ತರಗತಿಗೆ ಬರುವ ವೇಳೆಗಾಗಲೇ ಆಗಿನ ಹೆಸರಾಂತ ಹರಿದಾಸರುಗಳ ಕಥೆಗಳಿಗೂ ಹೋಗಿ ಅವರಲ್ಲಿನ ವಿಶೇಷ ಪ್ರತಿಭೆ ಹಾಗೂ ಕಲೆಗಳನ್ನು ಗುರುತಿಸಿ ತಾನು ಅವುಗಳನ್ನು ರೂಢಿಸಿ

ಕೊಂಡ. ಈ ಮಧ್ಯೆ ಉಪನಯನವು ಆಗಿ ನಿಷ್ಠೆಯಿಂದ ಗಾಯತ್ರಿ ಮಂತ್ರೋಪಾಸನೆ ಮಾಡಿದ. ಒಮ್ಮೆ ಮೂಡಬಿದ್ರೆಯಲ್ಲಿ ಶ್ರೀ ಕಾಶಿ ಮಠದ ಶ್ರೀ ಶ್ರೀ ಸುಧೀಂದ್ರ ತೀರ್ಥರ ಚಾತುರ್ಮಾಸದ ವೇಳೆಯಲ್ಲಿ ಕೇಶವನಿಂದ ರಾಮಾಯಣದ ಹರಿಕಥೆಯನ್ನು ಏರ್ಪಡಿಸಿದರು. ಬಾಲಕಾಂಡವನ್ನು ಕನ್ನಡದ ಚೌಪದಿಯಲ್ಲಿ ರಚಿಸಿ ನಿರೂಪಿಸಿದ ಈ ತನಜಾಣ್ಮೆ ಎಲ್ಲರಿಗೂ ಮೆಚ್ಚುಗೆಯಾಯಿತು. ಮಂಗಳದ ದಿನ ಸ್ವಾಮಿಗಳು ಕೇಶವನಿಗೆ 'ಬಾಲ ಹರಿದಾಸ' ಎಂಬ ಬಿರುದನ್ನಿತ್ತು ಜಗತ್ತಿನಲ್ಲಿ ಧರ್ಮ ಜಾಗೃತಿಯ ಸೇವಾಕಾರ್ಯವನ್ನು ಕೈಗೊಳ್ಳುವಂತೆ ಆಶೀರ್ವದಿಸಿದರು.

ಕೀರ್ತನ ಕಲೆ ಕೇಶವನ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಲಿಲ್ಲ. ಜೊತೆಗೆ ನಿರ್ಮಲ ಎಂಬ ಕನ್ಯೆಯೊಂದಿಗೆ ವಿವಾಹವೂ ಆಯಿತು. ಇವರ ಮನೆಗೆ ಆಗಮಿಸಿದ ಮೇಲೆ ಆಕೆಯನ್ನು ರಮಾ ಎಂದು ಕರೆದರು. ಕೇಶವ ಮದುವೆಯ ನಂತರವೂ ಶಿಕ್ಷಣವನ್ನು ಮುಂದುವರೆಸಿ ಬಿಎ ಪದವಿಯನ್ನು ಪಡೆದ.

ಬೆಂಗಳೂರಿನ ಮಲ್ಲೇಶ್ವರದ ರಾಮ ಮಂದಿರದ ಪದಾಧಿಕಾರಿಗಳಿಗೆ ಸುಪ್ರಸಿದ್ಧ ಕಲಾವಿದರನ್ನು ಮೊದಲು ಕರೆಸಿ ಕಾರ್ಯಕ್ರಮವನ್ನು ಏರ್ಪಡಿಸುವ ಪದ್ಧತಿ ಇತ್ತು. ಅದಕ್ಕನುಗುಣವಾಗಿ ಆಗಲೇ ಕೇಶವದಾಸರು ಎಂದೆ ಪ್ರಸಿದ್ಧರಾಗಿದ್ದ ಇವರನ್ನು ಇಲ್ಲಿಗೆ ಬಂದು ಹರಿಕಥೆ ನಡೆಸಿಕೊಡಬೇಕೆಂದು ವಿನಂತಿಸಿದರು. 1957ರ ಜೂನ್ 13 ರಂದು ಬೆಂಗಳೂರಿನಲ್ಲಿ ಭಕ್ತಿ ವಿಜಯ ಎಂಬ ಹರಿಕಥೆಯ ಮೂಲಕ ಈ ನಗರದಲ್ಲಿ ಇವರು ಪಾದಾರ್ಪಣೆ ಮಾಡಿದರು. ಪದವೀಧರ ಯುವಕನೊಬ್ಬ ಅತ್ಯುತ್ತಮವಾಗಿ ಹರಿಕಥೆಯನ್ನು ನಡೆಸಿಕೊಡುತ್ತಿದ್ದಾನೆ ಎಂದು ತಿಳಿದು ನಗರದ ಬೇರೆ ಬೇರೆ ಕಡೆಗಳಿಂದಲೂ ಅಧಿಕ ಸಂಖ್ಯೆಯಲ್ಲಿ ಜನ ಬರತೊಡಗಿದರು. ಪುಂಡಲೀಕ, ನಾಮದೇವ, ಮುಂತಾದ ಮಹಾ ಮಹಿಮರ ಜೀವನ ಚರಿತ್ರೆಯ ಮಾಲೆಯಲ್ಲಿ ಕೇಶವದಾಸರ ಶೈಲಿ, ನಿರೂಪಣೆ, ಧ್ವನಿಯಲ್ಲಿನ ಮಾಧುರ್ಯ ಕೇಳುವವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು. ಮಂಗಳದ ದಿನದಂದು ರಾಮ ಮಂದಿರದವರು ಭಿನ್ನವತ್ತಳೆಗಳೊಂದಿಗೆ ಇವರನ್ನು ಸತ್ಕರಿಸಿ ಮುಂದೆಯೂ ಇದೇ ರೀತಿ ಕಾರ್ಯಕ್ರಮಗಳನ್ನು ನಡೆಸಿ ಕೊಡಬೇಕೆಂದು ಕೇಳಿಕೊಂಡರು. ಬಳಿಕ ಮಧ್ವಸಂಘ, ವಿಶ್ವೇಶ್ವರಪುರದ ಶ್ರೀ ರಾಮ ಸೇವಾ ಮಂಡಳಿ, ಆನಂದಾಶ್ರಮ, ಶ್ರೀ ಕೃಷ್ಣಾನಂದ ಮಂಡಳಿ ಈ ಸಂಸ್ಥೆಗಳೆಲ್ಲವೂ ಇವರನ್ನು ಕಾರ್ಯಕ್ರಮಕ್ಕಾಗಿ ಆಹ್ವಾನಿಸಿದರು. ಹೀಗೆ ತಮ್ಮ ಪ್ರಥಮ ಆಗಮದಲ್ಲಿ ಕೇಶವದಾಸರು ಬೆಂಗಳೂರಿನ ಸಹೃದಯರಮನವನ್ನು ಗೆದ್ದುಬಿಟ್ಟಿದ್ದರು.

ಬೆಂಗಳೂರು ನಗರದಲ್ಲಿ ವ್ಯಾಪಕವಾಗಿ ಕಾರ್ಯಕ್ರಮಗಳು, ಹೆಚ್ಚಾಗುತ್ತಿದ್ದ ಭಕ್ತರ ಸಂಖ್ಯೆ ಇವೆಲ್ಲವುಗಳಿಂದಾಗಿ ಕೇಶವದಾಸರು ಬೆಂಗಳೂರಿನ ಪ್ಯಾಲೇಸ್ಗುಟ್ಟಹಳ್ಳಿಯಲ್ಲಿ ಒಂದು ದೊಡ್ಡಮನೆಯನ್ನು ಬಾಡಿಗೆ ಪಡೆದು ನೆಲೆಸಿದರು. ಈ ಮಧ್ಯೆ ಮಂಜುನಾಥ ಶೆಣೈ ಎಂಬುವರು ಭಕ್ತರ ಅನುಕೂಲಕ್ಕಾಗಿ ಒಂದು ಭಜನಾಮಂಡಳಿಯನ್ನು ಪ್ರಾರಂಭಿಸಬೇಕೆಂದು ಕೋರಿಕೊಂಡರು ಅದರಂತೆ 1959ರ ಅಕ್ಟೋಬರ್ 18 ರಂದು ಸಂಜೆ ಎಂ.ಎ. ಸ್ಫೂರ್ತಿ ಎಂಬ ಭಕ್ತರ ಮಲ್ಲೇಶ್ವರದ ಐದನೇ ಕ್ರಾಸ್‌ನಲ್ಲಿರುವ ದೊಡ್ಡ ಮನೆಯಲ್ಲಿ ಕೇಶವದಾಸರ ಕೀರ್ತನ ಮಂಡಳಿ ಸ್ಥಾಪನೆಯಾಯಿತು ಈ ಸಂಘದ ಬಗ್ಗೆ ಮಾತನಾಡುತ್ತಾ' ಚೆನ್ನಕೇಶವನೆ ಈ ಮಂಡಳಿಯ ಅಧ್ಯಕ್ಷ. ಅವನ ದಾಸನುದಾಸರು ನಾವು ಎಂಬ ಭಾವನೆ ಬರಲು ಈ ಮಂಡಳಿಗೆ ದಾಸ ಕೀರ್ತನ ಮಂಡಳಿ ಎಂದು ಹೆಸರಿಡಲಾಗಿದೆ. ಎಲ್ಲರೂ ಒಂದೆಡೆ ಸೇರಿ ಆಧ್ಯಾತ್ಮಿಕ ಚಿಂತನೆಯನ್ನು ನಡೆಸುವುದೇ ಇದರ ಮೂಲ ಉದ್ದೇಶ'. ಎಂದರು. ಆಗ ಆಗಮಿಸಿದ್ದ ಶ್ರೀ ಸಿದ್ಧಾಶ್ರಮ ಸ್ವಾಮಿಗಳು' ಈ ಮಂಡಳಿಯು ಜಗತ್ತಿನ ಕಲ್ಯಾಣಕ್ಕಾಗಿ ವಟವೃಕ್ಷದಂತೆ ಬೆಳೆದು ಮುಂದೆ ಬರಲಿ' ಎಂದು ಆಶೀರ್ವದಿಸಿದರು.

ಕೀರ್ತನೆ, ಹರಿಕಥೆ. ಭಜನೆ, ದಾಸವಾಣಿ ಎಂಬ ಪತ್ರಿಕೆ ಮುಂತಾದ ಜನಪ್ರಿಯ ಮಾಧ್ಯಮಗಳ ಮೂಲಕ ಕೇಶವದಾಸರು ಮನೆಮಾತಾಗಿದ್ದರು. ಆಸಕ್ತಿಯುಳ್ಳವರಿಗೆ ಕೀರ್ತನ ಕಲೆಯನ್ನು ಕಲಿಸಿ ಕೊಡುವ ಕಾಲೇಜೊಂದನ್ನು ತೆರೆದು ಹರಿದಾಸರ ಮುಂದಿನ ಪೀಳಿಗೆಯನ್ನು ರೂಪಿಸುವ ಬಗ್ಗೆ ತಮ್ಮ ಹಿರಿಯ ಸಹೋದರರೂ, ಪ್ರಸಿದ್ಧ ಹರಿಕಥಾ ಕಲಾವಿದರೂ ಆದ ಭದ್ರಗಿರಿ ಅಚ್ಯುತ ದಾಸರೊಂದಿಗೆ ಸಮಾಲೋಚಿಸಿದರು. ಈ ವೇಳೆಗಾಗಲೆ ಇವರ ಕುಟುಂಬದವರೆಲ್ಲ ಉಡುಪಿಯಿಂದ ಬೆಂಗಳೂರಿಗೆ ಬಂದಿದ್ದರಿಂದ ಸ್ವಿಮ್ಮಿಂಗ್‌ಪೂಲ್ಬಡಾವಣೆಯ ಒಂದು ದೊಡ್ಡ ಮನೆಯನ್ನುಬಾಡಿಗೆಗೆ ಪಡೆದು ಗುಟ್ಟಹಳ್ಳಿ ಮನೆಯಲ್ಲಿ ದಾಸಕೀರ್ತನೆಯ ಕಾಲೇಜನ್ನು ಪ್ರಾರಂಭಿಸಲು ನಿರ್ಧರಿಸಿದರು. 1961ರ ಏಪ್ರಿಲ್ 16 ರಂದು ವಿದ್ವಾಂಸರುಗಳು, ಜ್ಞಾನಿಗಳು ಮುಂತಾದವರ ಸಮ್ಮುಖದಲ್ಲಿ ಈ ಕಾಲೇಜು ಪ್ರಾರಂಭಗೊಂಡಿತು. ನಂತರ ಗಾಂಧಿನಗರದ ಮನ್ನುಬಾಯಮ್ಮ ಎಂಬ ಭಕ್ತರ ಮನೆಯಲ್ಲಿ ಕೇಶವದಾಸರು 1961ರ ಅಕ್ಟೋಬರ್ 8 ರಂದು ಶ್ರೀ ಕೃಷ್ಣ ಚೈತನ್ಯ ಸಪ್ತಾಹವನ್ನು ಪ್ರಾರಂಭಿಸಿದರು. ಇದರಿಂದ ಸಂತೋಷಗೊಂಡ ಆಕೆ ಇವರ ಸೇವಾ ಕಾರ್ಯಗಳಿಗೆ ನೆರವಾಗಲು ರಾಜಾಜಿನಗರದ ಐದನೇ ಬ್ಲಾಕ್‌ನಲ್ಲಿರುವ ತಮ್ಮದೇ ಆದ ಛತ್ರವನ್ನು ದಾನಮಾಡಿದರು. ಹೆಚ್ಚು ಗಿಡಮರಗಳಿಂದ ಕೂಡಿ ತೋಟದ ಮನೆಯಂತಿದ್ದ ಈ ಜಾಗವು ಆಶ್ರಮದ ವಾತಾವರಣವನ್ನು ಹೊಂದಿದ್ದರಿಂದ ಇದಕ್ಕೆ ದಾಸಾಶ್ರಮ ಎಂದು ಹೆಸರಿಡಲಾಯಿತು. 1961ರ ಅಕ್ಟೋಬರ್ 19 ರಂದು ಪಾಂಡುರಂಗನ ಮೂರ್ತಿಯನ್ನು ಪ್ರತಿಷ್ಠಾಪಿಸಿ ದಾಸಾಶ್ರಮದ ಉದ್ಘಾಟನೆಯನ್ನು ಅದಮಾರು ಮಠಾಧೀಶರಾಗಿದ್ದ ಶ್ರೀ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು ನೆರವೇರಿಸಿ' 'ಈ ನಿಮ್ಮ ಆಧ್ಯಾತ್ಮಿಕ ಪ್ರಚಾರ ಸೇವೆ ಇಡೀ ಜಗತ್ತನ್ನೇ ವ್ಯಾಪಿಸಲಿ, ಜಯಪ್ರದವಾಗಲಿ' ಎಂದು ಹರಸಿದರು. ಇದಾದ ಒಂದೆರಡು ವರ್ಷಗಳಲ್ಲೇ ದಾಸಾಶ್ರಮದ ವಿಶಾಲವಾದ ಆವರಣದಲ್ಲಿ 1963 ರ ಜೂನ್ 30 ರಂದು ಪುರಂದರ

ವಿಠಲನ ಮಂದಿರದ ಶಂಕು ಸ್ಥಾಪನೆ ಕಾರ್ಯ ನಡೆಯಿತು. ಆಗಿನ ವಿಧಾನಸಭಾ ಅಧ್ಯಕ್ಷ ವೈಕುಂಠ ಬಾಳಿಗ ಅವರು ಅಧ್ಯಕ್ಷತೆ ವಹಿಸಿ ತ್ಯಾಗ ರಾಜಕೀರ್ತನೆ ಮತ್ತು ಆರಾಧನಾ ಮಹೋತ್ಸವವು ಹೇಗೆ ಪ್ರತಿ ವರ್ಷ ನಡೆಯುತ್ತದೆಯೋ ಹಾಗೆ ಪುರಂದರದಾಸರ ಆರಾಧನೆ, ಅವರ ಜೀವನ ಮತ್ತು ಕೀರ್ತನೆಗಳ ಬಗ್ಗೆ ಸಂಶೋಧನೆಯು ಈ ಕೇಂದ್ರದಲ್ಲಿ ನಡೆಯ ಬೇಕು ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಮುಂದೆ ನಮ್ಮ ನಾಡಿನ ಮತ್ತು ಭಾರತದ ವಿವಿಧ ಕಡೆಗಳಿಂದ ಬಂದಿದ್ದ ಭಕ್ತರ ಸಮ್ಮುಖದಲ್ಲಿ 1965ರ ಜುಲೈ 7 ರಂದು ವಿಶ್ವೇಶ್ವರ ತೀರ್ಥರು ವಿದ್ಯುಕ್ತವಾಗಿ ಈ ಮಂದಿರದ ಉದ್ಘಾಟನೆಯನ್ನು ಮಾಡಿದರು.

ಈ ಮಧ್ಯೆ, ಕೇಶವದಾಸರು ಉತ್ತರ ಭಾರತದ ಯಾತ್ರೆಗೆ ಹೋಗಿದ್ದಾಗ ದೆಹಲಿಗೂ ತೆರಳಿ ಆಗಿನ ರಾಷ್ಟ್ರಪತಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನವರ ಅಧಿಕೃತ ನಿವಾಸದಲ್ಲಿ ಹರಿಕಥೆಯನ್ನು ಮಾಡಿದರು. ರಾಷ್ಟ್ರಪತಿಗಳು ಕಾರ್ಯ ಭಾರದ ಒತ್ತಡವಿದ್ದರೂ ಆಸಕ್ತಿಯಿಂದ ಆಲಿಸಿ ಈ ಕಲೆಗೆ ಸಂಬಂಧಿಸಿದ ವಿಚಾರಗಳನ್ನು ಕೇಳಿ ತಿಳಿದುಕೊಂಡರು. ಕೇಶವದಾಸರು, ಬೆಂಗಳೂರಲ್ಲಿ ತಾವು ನಿರ್ಮಿಸ ಬೇಕೆಂದಿದ್ದ ಕೀರ್ತನ ಕಾಲೇಜಿನ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಬೇಕೆಂದು ಕೇಳಿಕೊಂಡಾಗ ರಾಷ್ಟ್ರಪತಿಗಳು ಕೂಡಲೇ ಸಂತೋಷದಿಂದ ಒಪ್ಪಿದರು. 1965ರ ಡಿಸೆಂಬರ್ 12 ರಂದು ರಾಷ್ಟ್ರಪತಿಗಳು ಬೆಂಗಳೂರಿಗೆ ಆಗಮಿಸಿ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪ, ರಾಜ್ಯಪಾಲ ವಿ.ವಿ. ಗಿರಿ ಮತ್ತಿತರ ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ಕಾಲೇಜಿನ ಶಂಕುಸ್ಥಾಪನೆಯನ್ನು ನೆರವೇರಿಸಿ 'ಧಾರ್ಮಿಕ ಭಾವನೆಗಳು ಜನಸಾಮಾನ್ಯರಲ್ಲಿ ಒಗ್ಗಟ್ಟನ್ನು ಮೂಡಿಸಲು ಈ ಸಂಸ್ಥೆ ನೆರವಾಗುತ್ತದೆ' ಎಂದು ಕೇಶವದಾಸರ ಕುಟುಂಬದವರ ಈ ಪ್ರಯತ್ನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದರು. ಸುಮಾರು 10,000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಈ ಕಾರ್ಯಕ್ರಮ ಮಾರನೇ ದಿನ ಎಲ್ಲ ಮಾಧ್ಯಮಗಳ ಪ್ರಮುಖ ಸುದ್ದಿಯಾಗಿತ್ತು.

ಕೇಶವದಾಸರ ಕೀರ್ತನ ಕಲೆಯ ಪ್ರತಿಭೆ ಸಾಗರದಾಚೆಗೂ ಹರಡಿತ್ತು. ಜರ್ಮನಿಯ ದಿವ್ಯ ಜೀವನ ಸಂಘ ಇವರನ್ನು ಕಾರ್ಯಕ್ರಮಕ್ಕಾಗಿ ಆಹ್ವಾನಿಸಿತು. ಇಲ್ಲಿಂದ ಪ್ರಾರಂಭವಾಗಿ ಕೇಶವದಾಸರು ಸುಮಾರು 40 ಬಾರಿ ವಿವಿಧ ದೇಶಗಳಿಗೆ ತೆರಳಿ ಭಾರತದ ಆಧ್ಯಾತ್ಮಿಕ ಸಂಪತ್ತಿನ ಮಹತ್ವವನ್ನು ತಿಳಿಸಿ ಬಂದರು. ಇದರ ಪರಿಣಾಮವಾಗಿ ಅಧಿಕ ಪ್ರಮಾಣದ ವಿದೇಶಿ ಭಕ್ತರು ಇವರ ಯೋಜನೆಗಳಿಗೆ ತನು–ಮನ–ಧನವನ್ನು ಅರ್ಪಿಸಿದರು. ದೇಶ–ವಿದೇಶಗಳ ಇಂತಹ ಅಭಿಮಾನಿಗಳ ನೆರವಿನಿಂದಾಗಿ ಇವರು ಅರಸಿನಕುಂಟೆಯಲ್ಲಿ ವಿಜಯವಿಠಲನ ವಿಗ್ರಹವನ್ನು ಸ್ಥಾಪಿಸಲು ಅದರ ಬಳಿಯೇ ಶ್ರೀ ಭಗವದ್ಗೀತಾ ದರ್ಶನಮಂದಿರ ಮತ್ತು ಅದರ ಒಳಗೆ ಅದ್ಭುತವಾದ ವಿಶ್ವರೂಪದರ್ಶನದ ಮೂರ್ತಿ ಇವೆಲ್ಲವನ್ನು ನಿರ್ಮಿಸಲು ಸಾಧ್ಯವಾಯಿತು. ಇವೆಲ್ಲವೂ ಇಂದಿಗೂ ಪ್ರಮುಖ ಪ್ರವಾಸಿ ತಾಣವಾಗಿ ಪ್ರತಿನಿತ್ಯ ಸಾವಿರಾರು ಜನರನ್ನು ಸೆಳೆಯುತ್ತಿವೆ.

ಸ್ವಾಮಿ ವಿವೇಕಾನಂದರಂತೆ ಇವರು ಭಾರತದ ಪುರಾತನ ಆಧ್ಯಾತ್ಮಿಕ ಸಂಪತ್ತನ್ನು ವಿಸ್ತೃತವಾಗಿ ಜಗತ್ತಿಗೆ ತಲುಪಿಸಿ ಭಗವಂತನು ತಮಗೆ ನಿಯೋಜಿಸಿದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ 1997 ರ ಫೆಬ್ರುವರಿ ನಾಲ್ಕರಂದು ತಮ್ಮ ಆರಾಧ್ಯದೈವ ಪಾಂಡುರಂಗನಲ್ಲಿ ಐಕ್ಯವಾದರು.



# ಬಂಕಿಮ ಚಂದ್ರ ಚಟರ್ಜಿ

– ಛಾಯಾಪತಿ ಕೆ.ಎನ್.
(ಮಹಾಸಭಾ ಉಪಾಧ್ಯಕ್ಷರು)



ಇದೊಂದು ರಾಷ್ಟ್ರೀಯ ಹಾಡು. ದೇಶಭಕ್ತರನ್ನು, ಕ್ರಾಂತಿಕಾರಿಗಳನ್ನು ಸ್ವಾತಂತ್ರ್ಯ ಹೋರಾಟಕ್ಕೆ ಬಡಿದೆಬ್ಬಿಸಿದ ಮಹಾಕಾವ್ಯ. ಕ್ರಾಂತಿಕಾರಿಗಳು ನಗುನಗುತ್ತಾ "ವಂದೇ ಮಾತರಂ" ಎಂದು ಹೇಳುತ್ತಾ ನೇಣಿಗೆ ಗೋಣನ್ನು ಒಡ್ಡಿದರು.ರಾಷ್ಟ್ರವೇ ತಾಯಿ, ರಾಷ್ಟ್ರವೇ ದುರ್ಗಾಮಾತೆ, ರಾಷ್ಟ್ರವೇ ಸರಸ್ವತಿ ಎಂಬ ಭಾವನೆಗಳಿಗೆ ಕಾವ್ಯರೂಪ ನೀಡಿದುದೇ "ವಂದೇ ಮಾತರಂ".ದಶಕಗಳ ಉದ್ದಕ್ಕೂ ಸ್ವಾತಂತ್ರ್ಯ ಹೋರಾಟಗಾರರ ಚಿರಂತನ ಸ್ಫೂರ್ತಿಯ ಸ್ತೋತ್ರವಾಗಿ ಹೋರಾಟಕ್ಕೆ ಶಕ್ತಿ ತುಂಬಿತು. ಅಮ್ಮ ನಿನ್ನನ್ನು ಯಾರು ಅಬಲೆ ಎಂದರು?.ನೀನು ಕೋಟಿ ಕೋಟಿ ಕಂಠಗಳಿಂದ ಘರ್ಜಿಸಬಲ್ಲೆ,ಕೋಟಿ ಕೋಟಿ ಭುಜಗಳಿಂದ ಕೂಡಿರುವ ಕೈಗಳಿಂದ ಶತ್ರು ಸಂಹಾರ ಮಾಡಬಲ್ಲೆ.ನೀನು ಸುಜಲೆ ನೀನು ಸುಫಲೆ ನೀನು ಸಸ್ಯಶಾಮಲೆ ಎಂದೆಲ್ಲಾ ತಾಯಿ ಭಾರತೀಯನ್ನು ವರ್ಣಿಸಿ ಕೊಂಡಾಡಿರುವ ಈ ಗೀತೆ ಭಾರತೀಯರ ನರನಾಡಿಗಳಲ್ಲಿ ಹರಿದಾಡುವ ರಕ್ತದಲ್ಲಿ ಸೇರಿ ಹೋಗಿದೆ. ಮುಂದೆಯೂ ಸಹ ಸಾವಿರಾರು ವರ್ಷಗಳವರೆಗೆ ರಾಷ್ಟ್ರಭಕ್ತರ, ರಾಷ್ಟ್ರಭಕ್ತ ಸಂಘಟನೆಗಳ ದಿವ್ಯಮಂತ್ರವಾಗಿ ಪ್ರೇರೇಪಿ–ಸುತ್ತಾ ಸಾಗುತ್ತದೆ. ಗಂಗಾಜಲ ನಮಗೆ ಪವಿತ್ರ ಜಲಧಾರೆಯಾದರೆ "ವಂದೇ ಮಾತರಂ"ನಮಗೆ ಪವಿತ್ರಕಾವ್ಯಧಾರೆ".ನಮ್ಮದೇಶಕ್ಕೆಇದೇಅಧಿಕೃತ ರಾಷ್ಟ್ರಗೀತೆಯಾಗಬೇಕಿತ್ತು.ಅದು ಆಗದಂತೆ ಮಾಡಿದ್ದು ಅಲ್ಪಸಂಖ್ಯಾತ ತುಷ್ಟೀಕರಣ.ಅದರಲ್ಲಿ ಹಿಂದು ದೇವತೆಗಳ ವರ್ಣನೆ ಬರುತ್ತದೆಯೆಂದು ಮೂರ್ತಿ ಪೂಜೆಯನ್ನು ವಿರೋಧಿಸುವ ಮತಾಂಧ ಜನರ ಓಲೈಕೆಗೆ "ವಂದೇ ಮಾತರಂ"ರಾಷ್ಟ್ರಗೀತೆಯ ಸ್ಥಾನದಿಂದ ವಂಚಿತವಾಯಿತು. ಅಷ್ಟಕ್ಕೆ ನಿಲ್ಲಲಿಲ್ಲ ಕಾಂಗ್ರೆಸ್ಸಿನ ಅಧಿವೇಶನಗಳಲ್ಲಿ ಅಲ್ಪಸಂಖ್ಯಾತರ ಒತ್ತಾಯದ ಮೇರೆಗೆ ಅದನ್ನು ತುಂಡರಿಸಿ ಹಾಡಲಾಯಿತು.ಇಂದಿಗೂ ಸಹ ಬಾನುಲಿಗಳಲ್ಲಿ ಮಾಧ್ಯಮಗಳಲ್ಲಿ ಮತ್ತು ಅನೇಕ ಸಂದರ್ಭಗಳಲ್ಲಿ ಕೇವಲ ಮೊದಲ ನಾಲ್ಕಾರು ಸಾಲು ಹೇಳಿ ನಿಲ್ಲಿಸುತ್ತಾರೆ. ಇದು ನಮ್ಮ ದೇಶದ ದುರ್ದೈವ .

ಒಂದೇ ಮಾತರಂ ತಾಯಿ ಭಾರತೀಯ ಸ್ಮರಿಸುವ ಮಂತ್ರವನ್ನು ನೀಡಿದವರೇ ಬಂಕಿಮ ಚಂದ್ರ ಚಟರ್ಜಿಯವರು. ಇವರನ್ನು ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಎಂದೂ ಸಹ ಕರೆಯುತ್ತಾರೆ. "ಮುಂದಿನ ಪೀಳಿಗೆಯವರು ನವ ಭಾರತ ನಿರ್ಮಾಪಕರನ್ನು ಶ್ಲಾಘಿಸ ಹೊರಟಾಗ ಅವರಲ್ಲಿ ಅಗ್ರಸ್ಥಾನಕ್ಕೆ ಪಾತ್ರರಾಗುವವರು ಅವಕಾಶವಾದಿ ರಾಜಕಾರಣಿಗಳಾಗಲಿ, ಪ್ರಚಾರಪ್ರಿಯ ಸುಧಾರಕರಾಗಲಿ ಅಲ್ಲ ಯಾರು ತನಗಾಗಿ ಯಾವ ಸ್ಥಾನವನ್ನು ಕೋರದೆ ಮೌನವಾಗಿ ಪ್ರಕೃತಿಯಂತೆ ಕರ್ತವ್ಯ ಪ್ರಜ್ಞೆಯಿಂದ ಪ್ರೇರಿತರಾಗಿ ತಮ್ಮ ಪ್ರತಿಭೆಯಷ್ಟನ್ನೂ ತೊಡಗಿಸಿ ಒಂದು ಭಾಷೆಯನ್ನು,ಸಾಹಿತ್ಯವನ್ನು ,ರಾಷ್ಟ್ರವನ್ನು ಕಟ್ಟಿ ಬೆಳೆಸಲು ಸಮರ್ಥರಾದರೋ ಆ ಸರಳ ಗಂಭೀರ ಬಂಗಾಳಿ ವ್ಯಕ್ತಿಯ ಮೇಲೆ

ಪ್ರಶಂಸೆಯ ವರ್ಷಣವಾಗುತ್ತದೆ".ಇದು ಬಂಕಿಮಚಂದ್ರರಬಗ್ಗೆ ಶ್ರೀಅರವಿಂದಘೋಷ್–ರವರು ಭಾವಪೂರ್ಣ ಪ್ರಶಂಶೋದ್ಗಾರ ಮಾಡಿದ್ದಾರೆ.

ಗುರುದೇವ ರವೀಂದ್ರನಾಥ್ ಟಾಗೋರ್ ರವರೇ "ವಂದೇ ಮಾತರಂ"ಗೀತೆಗೆ ಸ್ವರ ಸಂಯೋಜನೆ ಮಾಡಿ 1896ರಲ್ಲಿ ಹಾಡಿದರು.ಆ ವೇಳೆಗೆ ಬಂಕಿಮಚಂದ್ರರು ಕಾಲವಾಗಿ ಎರಡು ವರ್ಷಕಳೆದಿತ್ತು. ರವೀಂದ್ರರುಹೀಗೆವರ್ಣಿಸಿದ್ದಾರೆ.ಅದನ್ನುಹಾಡತೊಡಗಿದಾಗ ನನ್ನಲ್ಲಿ ಆಪಾದ –ಮಸ್ತಕ ವಿದ್ಯುತ್ ಸಂಚಾರವಾಯಿತು,ಹೃದಯ ಆವೇಗಕ್ಕೊಳಗಾಯಿತು,ಇದೊಂದು ಹಾಡಲ್ಲ ಜ್ವಾಲಾಮುಖಿ ಎನಿಸಿತು. ಹಾಡಿನ ಒಂದೊಂದು ಶಬ್ದವು ಶ್ರೋತೃಗಳನ್ನು ಪುಲಕಿತಗೊಳಿಸಿತು.

1905ಕ್ಕೆ ಮುಂಚೆ ಮಧೋನ್ಮತ್ತ ಲಾರ್ಡ್– –ಕರ್ಜನ್ ನ ವಂಗವಿಭಜನೆಯ ದುಸ್ಸಾಹಸದ ವಿರುದ್ಧನಡೆದದೇಶವ್ಯಾಪಿಸಂಘರ್ಷದ'ಲ್ಲಿಯೂ,ಆಮೇಲಿನ ದಶಕಗಳ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ "ವಂದೇ –ಮಾತರಂ"ರಣಮಂತ್ರವಾದದ್ದು ಸರ್ವವಿಧಿತ.

ಸ್ವಯಂ ಋಷಿಕಲ್ಪರಾದ ಶ್ರೀ ಅರವಿಂದರು ಬಂಕಿಮರನ್ನು ಋಷಿ ಎಂದು ಕರೆದರು.ಎಲ್ಲಾ ಕಾಲದಲ್ಲಿಯೂ ಈ ನೆಲದಲ್ಲಿ ಋಷಿಗಳು ಜನಿಸಿದ್ದಾರೆ.ಈಚಿನ ಕಾಲದ ಋಷಿ ಪಂಕ್ತಿಯಲ್ಲಿ ನಾವು ಸೇರಿಸಬೇಕಾದ ದೃಷ್ಟಾರರೆಂದರೆ ನವ ಭಾರತ ನಿರ್ಮಾಣಕ್ಕೆ ದಾರಿ ಮಾಡಿದ "ವಂದೇ ಮಾತರಂ" ಮಂತ್ರವನ್ನಿತ್ತ ಬಂಕಿಮಚಂದ್ರರು

ದೇಶವೇ ತಾಯಿ ಎಂಬ ಕಲ್ಪನೆ ವೇದಗಳಷ್ಟೇ ಪುರಾತನವಾದದ್ದು. ಆದರೆ ಆ ಬೌದ್ಧಿಕ ಕಲ್ಪನೆಯನ್ನು ಭಾವದ ಸ್ಥರದಲ್ಲಿ ಶಬ್ದಗೊಳಿಸಿ–ದವರು ಬಂಕಿಮರು. ಅವರ ಮನಃ ಪಟಲದ ಮೇಲೆ ಮುದ್ರಿತವಾಗಿದ್ದ ಆ ದೇವಿಯ ರೂಪ –ವನ್ನು ಅವರು ಕವನದ ರೂಪದಲ್ಲಿ ನಿವೇಶನ

–ಗೊಳಿಸಿದರು. ದೇಶಭಕ್ತಿಯೇ ಪರಮ ಧರ್ಮ ಎಂಬುದು ಅದರಲ್ಲಿ ಧ್ವನಿತವಾಯಿತು. (ಎಸ್ ಆರ್ ರಾಮಸ್ವಾಮಿಯವರು ಬಂಕಿಮರ ಆನಂದ ಮಠ ಕಥೆಯ ಕನ್ನಡ ಅನುವಾದದ ಕೆಲವು ತುಣುಕುಗಳನ್ನು ಉಲ್ಲೇಖಿಸಲಾಗಿದೆ)

ಬಂಕಿಮರು ಯಾವ ಚಳುವಳಿ, ಹೋರಾಟ, ದಸ್ತಗಿರಿ,ಸೆರೆವಾಸ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ದಾಖಲೆಗಳಿಲ್ಲ. ಆದರೆ ಅನೇಕ ಬಾರಿ ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸಿದವರು. ಮಾತ್ರವಲ್ಲ ಸ್ವಾತ್ರಂತ್ಯ ಹೋರಾಟಕ್ಕೆ ಪ್ರೇರಣೆ ನೀಡುವ, "ವಂದೇ ಮಾತರಂ"ರಚನೆ,ಸಾಹಿತ್ಯ ರಚನೆ,ಪತ್ರಿಕೆಗಳಲ್ಲಿ ಉದ್ಬೋಧಕ ಲೇಖನ ಅದರಲ್ಲೂ ಆನಂದಮಠ ಕಾದಂಬರಿಯ ಮೂಲಕ ಜನಮನವನ್ನು ತಟ್ಟಿ ಎಬ್ಬಿಸಿ ಸಾವಿರಾರು ಹೋರಾಟಗಾರರಿಗೆ ಸ್ಪೂರ್ತಿಯ ಕೇಂದ್ರವಾದರು ಬಂಕಿಮರು. ಹಾಗಾಗಿ ಬಂಕಿಮರು ಸಹ ಸ್ವಾತಂತ್ರ್ಯ ಹೋರಾಟಗಾರರ ಪಂಕ್ತಿಯಲ್ಲಿ ಸೇರುತ್ತಾರೆ. ಕಾದಂಬರಿ,ವಿಚಾರ ಸಾಹಿತ್ಯ, ಪತ್ರಿಕೋದ್ಯಮ ಈ ಎಲ್ಲಾ ಕ್ಷೇತ್ರಗಳಲ್ಲೂ ಬಂಕಿಮರದು ಹಿರಿಯ ಸಾಧನೆ.

ಬಂಕಿಮರ ಕಾದಂಬರಿ ಎಂದರೆ ಜನರು ಓದಲು ಬಾಯಿ ತೆರೆದು ಕುಳಿತಿರುತ್ತಿದ್ದರು. ಅವರ ಎಲ್ಲಾ ಕೃತಿಗಳಲ್ಲಿ ಆನಂದ ಮಠ ಕಾದಂಬರಿ ಕಳಶಪ್ರಾಯವಾದದ್ದು.1773 ರಲ್ಲಿ ಬಂಗಾಳದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕಥೆಯೇ ಆನಂದಮಠ ಆಗ ಬಂಗಾಳದಲ್ಲಿ ಭಯಂಕರವಾದ ಕ್ಷಾಮದಿಂದಬರ ಆವರಿಸಿತ್ತು. ಅದರ ವರ್ಣನೆಯಿಂದ ಕಥೆ ಪ್ರಾರಂಭವಾಗು –ತ್ತದೆ. ಆಳುವ ಆಂಗ್ಲರಿಗೆ ಅಲ್ಲಿಯ ಜನರ ಕಷ್ಟಗಳ ಕಡೆಗಣನೆ,ಹೇಳುವವರಿಲ್ಲ, ಕೇಳುವ –ವರಿಲ್ಲ ಜನಕ್ಕೆ ಬಿಳಿಯರನ್ನು ಕಂಡರೆ ಹೆದರಿಕೆ ಯಾರಿಗೂಮಾತನಾಡುವ ಧೈರ್ಯವಿಲ್ಲ. ಹೀಗೆ ಬಂಗಾಳಿಗರ ಜೀವನದಲ್ಲಿ ಕತ್ತಲು ತುಂಬಿತ್ತು. ಕೆಟ್ಟ ಕ್ಷಾಮದಿಂದಾಗಿ ಊಟವಿಲ್ಲದೆ ನೀರಿಲ್ಲದೆ ಕಂಗಾಲಾಗಿ ಜನರು ಹುಳುಗಳಂತೆ ಸತ್ತರು. ಈ ಸಂದರ್ಭದಲ್ಲಿ ಬರೆದ ಆನಂದಮಠದ ಕಾದಂಬರಿಯಲ್ಲಿ ಕ್ಷಾಮದ ರವರವ ನರಕ ಯಾತನೆಯ ವರ್ಣನೆ ಮತ್ತು ಅದರಲ್ಲಿ ಬರುವ ಪಾತ್ರಗಳಲ್ಲಿ ಕೇವಲ ಸ್ವಾತಂತ್ರ ಹೋರಾಟದ ಭಾವನೆಗಳನ್ನೇ ತುಂಬಿದ್ದಾರೆ.ಬಂಕಿಮರು ತಮ್ಮ ಭಾವನೆಗಳನ್ನು ಆನಂದಮಠ ಪಾತ್ರಧಾರಿ –ಯಿಂದ ಹೀಗೆಹೇಳಿಸುತ್ತಾರೆ. ಎಷ್ಟುದಿನಹಿಂದೂ ಗಳುಜ್ಞಾನಿಗಳಾಗುವುದಿಲ್ಲವೋ,ಗುಣಾಢ್ಯರಾ–ಗುವುದಿಲ್ಲವೋ,ಬಲಿಷ್ಠರಾಗುವುದಿಲ್ಲವೋ ಅಷ್ಟು ದಿನಗಳವರೆಗೆ ಇಂಗ್ಲೀಷರ ರಾಜ್ಯ ಇಲ್ಲಿರುತ್ತದೆ.

ಆನಂದಮಠ ಕಾದಂಬರಿ ದೇಶಾಭಿಮಾನಿಗಳ ಕಥೆ.ತಾಯಿಗಾಗಿ ಬದುಕಿ ತಾಯಿಗಾಗಿ ಸಾಯಲು ಸಿದ್ದರಾದವರ ಕಥೆ.ಕಥೆಯಲ್ಲಿ ಬರುವ ಗುರು ಸ್ಥಾನದಲ್ಲಿರುವ ಪಾತ್ರಧಾರಿ, ಶಿಷ್ಯರಾಗಿ ಬಂದವರಿಗೆ ಹೇಳುತ್ತಿದ್ದುದು ಏನೆಂದ –ರೆನಾವುಬೇರೆ ಮಾತೆಯನ್ನು ಒಪ್ಪುವುದಿಲ್ಲ. ಜನ್ಮ ಭೂಮಿಯೆ ನಮ್ಮತಾಯಿ.ನನಗೆ ಬೇರೆ ತಾಯಿಯಿಲ್ಲ ತಂದೆಯಿಲ್ಲ ಹೆಂಡತಿಯಿಲ್ಲ ಮಕ್ಕಳಿಲ್ಲ ಮನೆಯಿಲ್ಲ ಸಂಸಾರವಿಲ್ಲ ನಮಗಿರುವುದು ಸುಜಾಲ ಸುಫಲ ಮಲಯಜಶೀತಲ.ಆನಂದಮಠ ಕಾಡಿನಲ್ಲಿದ್ದ ಒಂದು ಮಠವಾಗಿತ್ತು.ಸ್ವಾತ್ರಂತ್ಯಕ್ಕೆ ಹೋರಾಟ ಮಾಡಲು ಬಂದವರೆಲ್ಲರೂ ಆ ಮಠದಲ್ಲಿ ತಾಯಿಯ ಸನ್ನಿಧಿಯಲ್ಲಿ ಪ್ರತಿಜ್ಞೆಮಾಡ –ಬೇಕಿತ್ತು.ಅವರಿಗೆ ಕೇಳುತ್ತಿದ್ದ ಪ್ರಶ್ನೆಗಳೆಂದರೆ, ತಾಯಿನಾಡಿನ ಬಿಡುಗಡೆ ಆಗುವವರೆಗೂ ಮನೆ ತ್ಯೆಜಿಸುತ್ತೀರಾ, ತಾಯಿ ತಂದೆ ಅಣ್ಣ ತಮ್ಮ ಅಕ್ಕ ತಂಗಿ ಹೆಂಡತಿ ಮಕ್ಕಳು ಎಲ್ಲರನ್ನೂ ಬಿಡುತ್ತೀರಾ, ಹಣ ಸುಖ ಎಲ್ಲವನ್ನು ಬಿಡುತ್ತೀರಾ,ಜಾತಿಯನ್ನು ಬಿಡುತ್ತೀರ,ಯುದ್ಧ ರಂಗದಲ್ಲಿ ಹಿಂದಕ್ಕೆ ಓಡುವುದಿಲ್ಲ ತಾನೆ, ಇದೆಲ್ಲದಕ್ಕೂ ಒಪ್ಪಿಗೆ ಇರುವವರಿಗೆ ಮಾತ್ರ ಪ್ರತಿಜ್ಞೆ ಮಾಡಿಸಿ ಸ್ವೀಕರಿಸುತ್ತಿದ್ದರು. ಈ ರೀತಿಯ ವಿಚಾರಧಾರೆ ತುಂಬಿದ ಆನಂದಮಠ ಕಾದಂಬರಿ ಓದಿದ ಸಾವಿರಾರುಜನರು ಸ್ವಾತಂತ್ರ ಹೋರಾಟದ ಕಿಚ್ಚನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಹಾಗಾಗಿ ಬಂಕಿಮರು ಒಬ್ಬ ಸ್ವಾತಂತ್ರ್ಯ ಹೋರಾ –ಟಗಾರ.

ಬಂಕಿಮಚಂದ್ರರು ಬಂಗಾಳ ಪ್ರಾಂತದ ಪರ್ಗಣ ಜಿಲ್ಲೆಯ ಗಂಟಲಪಾಡ ಎಂಬ ಗ್ರಾಮದಲ್ಲಿ ಒಂದು ಸಂಪ್ರದಾಯಸ್ಥ ಬಂಗಾಳಿ ಬ್ರಾಹ್ಮಣ ಮನೆತನದಲ್ಲಿ 27 ಜೂನ್ 1838ರಂದು ಜನಿಸಿದರು. ತಂದೆ ಯಾದವಚಂದ್ರ ಚಟ್ಟೋಪಾಧ್ಯಾಯ. ತಾಯಿ ದುರ್ಗಾದೇವಿ. ಅವರ ತಂದೆ ಮಿಡ್ನಾಪುರ ಉಪ ಜಿಲ್ಲಾಧಿಕಾರಿ –ಯಾಗಿದ್ದರು.ಬಂಕಿಮರು ಮಿಡ್ನಾಪುರ –ದಲ್ಲಿಯೇ ಪಾಠಶಾಲೆ ಪ್ರವೇಶ ಮಾಡಿದರು. 1856– 57 ರಲ್ಲಿ ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿಎ ಪದವಿ ಪಡೆದರು.1869ರಲ್ಲಿ ಬಿಎಲ್ ಪರೀಕ್ಷೆಯನ್ನು ಮುಗಿಸಿ ಪದವಿಪಡೆ –ದರು.ಬಂಕಿಮರಿಗೆ ಚಿಕ್ಕವಯಸ್ಸಿಲ್ಲೇ ವಿವಾಹ –ವಾಯ್ತು. ಅವರಿಗೆ ಮೂವರು ಹೆಣ್ಣು ಮಕ್ಕಳಿ –ದ್ದರು.ಬಂಕಿಮಚಂದ್ರರು ತಂದೆ ತಾಯಿಗಳನ್ನು ಬಹಳ ಪೂಜ್ಯ ಭಾವನೆಯಿಂದ ಕಾಣುತ್ತಿ –ದ್ದರು.ಹೊರಗೆ ಪ್ರವಾಸಹೊರಟರೆ ಅವರ ಪಾದಗಳನ್ನು ತೊಳೆದು ನೀರನ್ನು ತೀರ್ಥವೆಂದು ಭಕ್ತಿಯಿಂದ ಜೊತೆಯಲ್ಲೇ ತೆಗೆದುಕೊಂಡು ಹೋಗುತ್ತಿದ್ದರಂತೆ.ಬಂಕಿಮರ ವಿದ್ವತ್ತನ್ನು ಕಂಡ ಬ್ರಿಟಿಷ್ ಸರ್ಕಾರ ಅವರಿಗೆ ಸರ್ಕಾರಿ ಹುದ್ದೆ ನೀಡಿತು.ಬರಹಾಂಪುರ,ಮಾಲ್ಡ, ಆಲಿಪುರ, ಕುಲ್ನಾ, ಮೇಧಿನಿಪುರ ಮುಂತಾದ ಹಲವಡೆ ಸರ್ಕಾರೀ ಅಧಿಕಾರಿಯಾಗಿ ಕೆಲಸಮಾಡಿ –ದರು.ಅವರ ತಂದೆಯಂತೆಯೇ ಗೆಸ್ಸೂರ್ ನ ಉಪ ಜಿಲ್ಲಾಧಿಕಾರಿಯಾಗಿ ನೇಮಿಸಲ್ಪಟ್ಟರು. ಇವರು ಮ್ಯಾಜಿಸ್ಟ್ರೇಟ್ ರಾಗಿದ್ದಾಗ ಒಂದು ಘಟನೆ ನಡೆಯಿತು.ಹರಿನಾಥನೆಂಬ ಬ್ರಾಹ್ಮಣ ಕಲ್ಕತ್ತಾಗೆ ಪ್ರಯಾಣಮಾಡುತ್ತಿರುವಾಗ ಮಧ್ಯದಲ್ಲಿ ರಾತ್ರಿಯಾಯಿತು. ಅಲ್ಲೇ ಹತ್ತಿರದಲ್ಲಿದ್ದ ಒಂದು ಹಳ್ಳಿಯಲ್ಲಿ ತಂಗಿ ಒಬ್ಬರ ಮನೆಯ ಜಗುಲಿಯ ಮೇಲೆ ಮಲಗಿದನು. ರಾತ್ರಿ ಒಬ್ಬ ಕಳ್ಳ ಆ ಮನೆಯಿಂದ ಒಂದು ಪೆಟ್ಟಿಗೆಯನ್ನು ಹೊತ್ತು ಓಡುತ್ತಿರಲು ಹರಿನಾಥ –ನು ಅವನ ಬೆನ್ನಟ್ಟಿ ಹೋಗಿ ಹಿಡಿದನು. ಹರಿನಾ –ಥನು ಕಳ್ಳನಿಗಿಂತ ಶಾರೀರಿಕ ಬಲಹೀನ ನಾದ್ದ –ರಿಂದ ಕಳ್ಳ ಇವನನ್ನು ಕೆಳಗೆ ಹಾಕಿ ಕಳ್ಳ ಕಳ್ಳ ಎಂದು ಕೂಗಾಡಿದನು.ಅಲ್ಲಿಗೆ ಬಂದ ಜನ ಹರಿನಾಥನನ್ನೇ ಹಿಡಿದು ಥಳಿಸಿದರು. ಪೊಲೀ –ಸರು ಬಂದು ಹರಿನಾಥನನ್ನೇ ಹಿಡಿದು ಬಂಕಿಮ ಚಂದ್ರರಿರುವ ಕೋರ್ಟಿಗೆ ಹಾಜರು ಪಡಿಸಿದರು. ಹರಿನಾಥನು ವಿಚಾರಣಾ ಸಮ

–ಯದಲ್ಲಿ ಶ್ರೀಕೃಷ್ಣನನ್ನು ಮೊರೆ ಇಡುತ್ತಿದ್ದನು. ಇತ್ತ ಪೊಲೀಸರು ಕೊಟ್ಟ ಸಾಕ್ಷಿಗಳು ಬಂಕಿಮ –ರಿಗೆ ತೃಪ್ತಿತರದೆ ತೀರ್ಪನ್ನು ಮರುದಿನಕ್ಕೆ ಮುಂದೂಡಿದರು.

ಮರುದಿನ ಪತ್ರಿಕೆಗಳಲ್ಲಿ ಕೋರ್ಟಿನ ಗುಮಾಸ್ತನಾಗಿದ್ದ ವ್ರಜಲಾಲನನ್ನು ಯಾರೋ ಕೊಂದು ಹಾಕಿ ದಾರಿಯಲ್ಲಿ ಬಿಸಾಡಿದ್ದಾರೆ ಎಂಬ ಸುದ್ದಿ ಬಂತು. ಆಗ ಬಂಕಿಮರು ಆ ಹೆಣವನ್ನು ತರಲು ಹರಿನಾಥನನ್ನೂ ಕಳ್ಳನನ್ನೂ ಕಳುಹಿಸಿದರು.ಹೆಣವನ್ನು ತರುವಾಗ ದಾರಿ ಮಧ್ಯದಲ್ಲಿ ನಿರಪರಾಧಿಯಾದ ಹರಿನಾಥನು ಕಳ್ಳನನ್ನು ಕುರಿತು ನಿನ್ನನ್ನು ನಾನು ಹಿಡಿಯ –ಬಾರದಾಗಿತ್ತು ಎಂತಹ ಅವಿವೇಕದ ಕೆಲಸ ಮಾಡಿದೆ ಎಂದು ಮರುಗಿದ.ಆಗ ಆ ಕಳ್ಳನು ನಾನು ಕೂಗಾಡಿ ಜನ ಸೇರಿಸದೆ ಇದ್ದರೆ ನಾನೇ ಅಪರಾಧಿಯಾಗಿ ಶಿಕ್ಷೆ ಅನುಭವಿಸ ಬೇಕಿತ್ತು ಈಗ ನಿನಗೆ ಶಿಕ್ಷೆಯಾಗುತ್ತದೆ ಎಂದು ಹೇಳಿದ. ಶವದಂತೆ ನಟಿಸುತ್ತಿದ್ದ ವ್ರಜಾಲಾಲ್ ಕೇಳಿಸಿಕೊಂಡು ಅದನ್ನು ಬಂಕಿಮರಿಗೆ ವರದಿಮಾಡಿದ.ಬಂಕಿಮರೆ ಹೂಡಿದ್ದ ಈ ಉಪಾಯ ಫಲಿಸಿತು. ಹಾಗಾಗಿ ಆ ಕಳ್ಳನಿಗೆ ಶಿಕ್ಷೆಯಾಯಿತು(ಬಹುಶಃ ಇಂದೂ ಸಹ ಬ್ರಾಹ್ಮಣರು ಇಂತಹ ಕುತಂತ್ರ ನಿಂದನೆಗಳಿಗೆ ಗುರಿಯಾಗುತ್ತಿದ್ದಾರೆ.ಆಬ್ರಾಹ್ಮಣ ಹರಿನಾಥ –ನಂತೆ ಭಗವಂತನಲ್ಲಿ ನಂಬಿಕೆ ಭಕ್ತಿಶ್ರದ್ದೆಯಿಟ್ಟು ಸತ್ಕಾರ್ಯಗಳನ್ನು ಮಾಡುತ್ತಿದ್ದರೆ ಪರೀಕ್ಷೆ ಮಾಡುತ್ತಿರುವ ನ್ಯಾಯದೇವತೆ ನಮ್ಮನ್ನು ರಕ್ಷಿಸುತ್ತಾಳೆ.)

ಬಂಕಿಮರು ಕೇವಲ ಸರ್ಕಾರಿ ನೌಕರಿ, ದುಡಿಮೆ ಇಷ್ಟುಮಾತ್ರಕ್ಕೆ ಸೀಮಿತವಾಗಿರಲಿಲ್ಲ.ಅಂದಿನ ದಿನಗಳಲ್ಲಿ ಸೋತು ಸೊರಗಿದ್ದ ಪ್ರಾಮುಖ್ಯತೆಯನ್ನು ಕಳೆದುಕೊಂಡು ಕಳೆಗುಂದಿದ್ದ ಬಂಗಾಳಿ ಭಾಷೆಗೆ ಮರುಜೀವ ತುಂಬಿ ಭಾಷೆಯನ್ನು ಪ್ರಬುದ್ಧಮಾನಕ್ಕೆ ತಂದವರೇ ಬಂಕಿಮರು. ಅನೇಕ ಕಥೆ, ಕಾದಂಬರಿಗಳು, ವೈಚಾರಿಕ ಲೇಖನ, ಕವನಗಳು, ವೃತ್ತಪತ್ರಿಕೆ ಪ್ರಕಟಣೆಯ ಮೂಲಕ ಭಾಷೆಗೆ ಶಕ್ತಿತುಂಬಿ ಬೆಳೆಸಿದರು.

ಬಂಕಿಮರು ಸರಕಾರಿ ಹುದ್ದೆಯಿಂದ ಸ್ವಯಂ ನಿವೃತ್ತರಾಗಿ ಕೇವಲ ಸಾಹಿತ್ಯ ರಚಿಸಬೇಕೆಂಬ ಇಚ್ಛೆಯಿಂದ ಆಂಗ್ಲ ಅಧಿಕಾರಿಗಳಿಗೆ ಪತ್ರ ಬರೆದು ಒಪ್ಪಿಗೆ ಪಡೆದು ನಿವೃತ್ತರಾಗುತ್ತಾರೆ. ನಂತರ ಬೇಕಾದಷ್ಟು ಬರೆಯಬೇಕೆಂಬುದು ಬಂಕಿಮರ ಆಸೆಯಾಗಿತ್ತು ಆದರೆ ಅವರ ಆರೋಗ್ಯವು ದಿನೇದಿನೇ ಕುಸಿಯುತ್ತಾ ಬಂದಿತು. ತಮ್ಮ 56ನೇ ವಯಸ್ಸಿನಲ್ಲಿ 8 ಏಪ್ರಿಲ್1894 ರಂದು ಬಂದೇ ತಾಯಿ ಎಂದು ಹೇಳುತ್ತಾ ತಾಯಿ ಭಾರತೀಯ ಪಾದದೂಳಿನಲ್ಲಿ ಲೀನವಾದರು.

**"ವಂದೇ ಮಾತರಂ"**


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)** ಜಾಹಿರಾತು

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ______________________

ವಿಳಾಸ ______________________

______________________

ಸದಸ್ಯತ್ವದ ಸಂಖ್ಯೆ : ______________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ಆಯುಷ್ಯದ ವಿಚಾರದಲ್ಲಿಯೂ ಋಷಿಮಹರ್ಷಿಗಳ ಆಶಯವೇನೆಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಅವರವರು ಮಾಡಿರುವ ಕರ್ಮಗಳು ಸಜೀವವಾದ ಬೀಜಗಳಂತೆ ಉಳಿದುಕೊಂಡಿರಲು ಒಂದು ಹುಟ್ಟಿಗೆ ಕಾರಣವಾಗುತ್ತದೆ. 'ಸತಿಮೂಲೇ ತದ್ವಿಪಾಕಃ ಜಾತ್ಯಾಯುರ್ಭೋಗಾಃ'– ಮೂಲವು ಉಳಿದಿರಲು ಅದರ ಫಲವಾಗಿ ಹುಟ್ಟು ಆಯುಷ್ಯ ಭೋಗಗಳು ಉಂಟಾಗುವುವು' ಎಂದು ಪಾತಂಜಲಯೋಗಸೂತ್ರವು ತಿಳಿಸುತ್ತದೆ. ಅಂದರೆ ಜನ್ಮಾಂತರದ ಕರ್ಮಗಳಿಂದ ನಿರ್ದಿಷ್ಟವಾದ ಆಯುಷ್ಯವು ಲಭಿಸಿದರೂ ಈ ಜನ್ಮದ ಕರ್ಮಗಳಿಂದ ಏರಿಳಿತಗಳನ್ನು ಹೊಂದಲು ಅವಕಾಶವಿದೆ. ಆಯುಷ್ಯದ ಹಾನಿಗಾಗಲೀ ಆಯುಷ್ಯದ ವೃದ್ಧಿಗಾಗಲೀ ವಿಶೇಷಪ್ರಯತ್ನಗಳು ನಡೆದಾಗ, ತಿಳಿದೋ ತಿಳಿಯದೆಯೋ ಆಯುಷ್ಯದ ಮೇಲೆ ಕೆಲಸ ಮಾಡುವ ಘಟನೆಗಳುಂಟಾದಾಗ ಹುಟ್ಟಿನಿಂದ ನಿರ್ಣಯವಾದ ಆಯುಷ್ಯದ ವೃದ್ಧಿಕ್ಷಯಗಳನ್ನು ಹೊಂದಬಹುದಾಗಿದೆ. ಅವನವನ ಹುಟ್ಟಿಗನುಗುಣವಾದ ಧರ್ಮಕರ್ಮನಿರತನಾಗಿ, ಮಾನವಸಹಜವಾದ ಆತ್ಮಗುಣಗಳಿಂದ ಕೂಡಿ ಬದುಕಿದಾಗ ಜನ್ಮಾಂತರದ ಕರ್ಮಫಲವಾದ ಆಯುಷ್ಯವು ಘಟಿಸುವುದು. ಅದನ್ನೇ–

**ಯೇ ಧರ್ಮಕರ್ಮನಿರತಾಃ ವಿಜಿತೇನ್ದ್ರಿಯಾ ಯೇ**
**ಯೇ ಪಥ್ಯಭೋಜನಜುಷಃ ದ್ವಿಜದೇವಭಕ್ತಾಃ ।**
**ಲೋಕೇ ನರಾ ದಧತಿ ಯೇ ಕುಲಶೀಲಲೀಲಾಂ**
**ತೇಷಾಮಿದಂ ಕಥಿತಮಾಯುರುದಾರಧೀಭಿಃ ॥**

'ಯಾರು ತಮ್ಮ ತಮ್ಮ ಜನ್ಮಸಹಜವಾದ ಧರ್ಮಕ್ಕೆ ಅನುಗುಣವಾದ ಕರ್ಮದಲ್ಲಿ ನಿರತರಾಗಿರುವರೋ, ಇಂದ್ರಿಯಗಳನ್ನು ತಮ್ಮ ಹತೋಟಿಯಲ್ಲಿಟ್ಟು–ಕೊಂಡಿರುವರೋ, ಹಿತಮಿತವಾದ ಆಹಾರವನ್ನು ಭುಂಜಿಸುವರೋ, ಗುರುಹಿರಿಯರಲ್ಲೂ ಬ್ರಾಹ್ಮಣರಲ್ಲೂ ದೇವರಲ್ಲೂ ಭಕ್ತಿಯುಳ್ಳವರೋ, ತಮತಮಗೆ ಹೊಂದುವ ಶೀಲದ ಸಂಪತ್ತಿನಿಂದ ಕೂಡಿರುವರೋ ಅಂತಹವರಿಗೆ ಆಯುಷ್ಯವು ಈ ಪ್ರಮಾಣದಲ್ಲಿರುತ್ತದೆಂದು (ಆಯುರ್ದಾಯ ಗಣಿತವು ಹೇಳುವಂತೆ) ದೂರದರ್ಶಿಗಳಾದ ಋಷಿಗಳಿಂದ ನಿರ್ಣಯಿಸಲ್ಪಟ್ಟಿದೆ' ಎಂದು ಶಾಸ್ತ್ರವೂಸಹ ನಿರ್ಣಯಿಸುತ್ತದೆ. ಇಂತಹ ಆದರ್ಶವಾದ ಚೌಕಟ್ಟಿನಲ್ಲಿ ಜೀವನ ಮಾಡುವವನಿಗೆ ಪೂರ್ವಜನ್ಮದ ಸುಕೃತ ದುಷ್ಕೃತಗಳು ಕಾಲಕಾಲಕ್ಕೆ ತಮ್ಮ ಫಲಗಳನ್ನು ಕೊಟ್ಟುಕೊಳ್ಳುತ್ತಾ ಅವುಗಳೆಲ್ಲದರ ಭೋಗದ ಅಂತ್ಯದಲ್ಲಿ ದೇಹನಾಶವನ್ನು ಉಂಟುಮಾಡುತ್ತವೆ. ಇಂತಹ ಆದರ್ಶವಾದ ಜೀವನದ ದಿನಗಳಲ್ಲೇ ತಿಳಿದೋ ತಿಳಿಯದೆಯೋ ಅತ್ಯುತ್ತಮವಾದ ಪುಣ್ಯವೋ ಪಾಪವೋ ನಡೆದಲ್ಲಿ ಅದರ ಪರಿಣಾಮವಾಗಿ ಆಯುಷ್ಯವು ವೃದ್ಧಿಯನ್ನು ಹೊಂದಲೂಬಹುದು. ಕ್ಷಯಿಸಲೂ ಬಹುದು. ಅಂತಹ ಅನೇಕ ಘಟನೆಗಳನ್ನು ಪುರಾಣ–ಇತಿಹಾಸಗಳಲ್ಲಿ ಉಲ್ಲೇಖಿಸುವುದನ್ನು ನೋಡುತ್ತೇವೆ. ಮಾರ್ಕಂಡೇಯನ ವೃತ್ತಾಂತವು ಇದಕ್ಕೊಂದು ನಿದರ್ಶನವಾಗಿದೆ. ಬಹುಕಾಲ ಪುತ್ರನಾಗದೇ ಖಿನ್ನನಾಗಿದ್ದ ಮೃಕಂಡುಮುನಿಯು ತನ್ನ ಸಹಧರ್ಮಿಣಿಯಾದ ಸುಮಿತ್ರೆಯೊಡನೆ ದೀರ್ಘಕಾಲ ಶಿವನನ್ನು ಕುರಿತು ತಪಸ್ಸನ್ನಾಚರಿಸಿದನು. ಶಿವನು ಪ್ರಸನ್ನನಾಗಿ 'ನಿನಗೇನು ವರವನ್ನು ಕೊಡಲಿ' ಎಂದು ಕೇಳಿದನು. ಮೃಕಂಡುವು ಸಂತಾನಸುಖವನ್ನು ಬಯಸಲಾಗಿ ಶಿವನು 'ನಿನಗೆ ಪುತ್ರಪ್ರಾಪ್ತಿಯ ಯೋಗವಿಲ್ಲ. ಆದರೂ ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ಗುಣಹೀನರಾದ ಹಲವು ಮಕ್ಕಳನ್ನು ಪಡೆಯಲು ಬಯಸುವೆಯೋ ಅಥವಾ ಗುಣವಂತರಾದರೂ ಅಲ್ಪಾಯುವಾದ ಒಬ್ಬ ಪುತ್ರನನ್ನು ಪಡೆಯಲು ಬಯಸುತ್ತೀಯೋ' ಎಂದು ಕೇಳಿದನು. ಮುನಿಯು 'ಅಲ್ಪಾಯುವಾದರೂ ಗುಣವಂತನಾದ ಪುತ್ರನಿರಲಿ' ಎಂದು ವರಿಸಿದನು. ಅದರಂತೆ ಅವನು ಪುತ್ರರತ್ನವನ್ನು ಶೀಘ್ರದಲ್ಲಿಯೇ ಪಡೆದನು. ಆದರೆ ಪುತ್ರನು ಅಲ್ಪಾಯುವಾಗಿದ್ದಾನೆಂಬ ದುಃಖವು ನಿರಂತರ ಬಾಧಿಸುತ್ತಿತ್ತು. ಕುಮಾರನು ಯಾರಾದರೂ ಪೂಜ್ಯರೂ ಹಿರಿಯರೂ ಕಂಡು ಬಂದರೆ ಸಾಷ್ಟಾಂಗವಾಗಿ ನಮಸ್ಕರಿಸುವ ಅಭ್ಯಾಸವನ್ನು ಸದಾಚಾರವಾಗಿ ಬೆಳೆಸಿಕೊಂಡಿದ್ದನು.

ಒಮ್ಮೆ ಸಪ್ತರ್ಷಿಗಳು ವೇಷಾಂತರವನ್ನು ಧರಿಸಿ ಸಂಚರಿಸುತ್ತಿರಲು ಅವರನ್ನು ಕಂಡ ಕುಮಾರನು ತನ್ನ ಅಭ್ಯಾಸದಂತೆ ದೀರ್ಘದಂಡಪ್ರಣಾಮವನ್ನು ಸಲ್ಲಿಸಿದನು. ಸಪ್ತರ್ಷಿಗಳು 'ದೀರ್ಘಾಯುವಾಗು' ಎಂದು ಆಶೀರ್ವದಿಸಿದರು. ಆದರೆ ಆ ಕೂಡಲೇ ಅವರ ದಿವ್ಯದೃಷ್ಟಿಗೆ ಕುಮಾರನು ಅಲ್ಪಾಯುರ್ಯೋಗದಿಂದ ಕೂಡಿದ್ದಾನೆಂದು ತಿಳಿದು ಬಂದಿತು. ಆದರೆ ತಮ್ಮ ವಾಕ್ ಎಂದಿಗೂ ಸುಳ್ಳಾಗುವ ಸಂಭವವಿಲ್ಲವೆಂಬ ಬಗ್ಗೆ ವರವನ್ನು ಪಡೆದವರಾಗಿದ್ದರು. ತಮ್ಮ ಮಾತು ಸುಳ್ಳಾಗದೇ ಆತನ ವಿಧಿಲಿಖಿತವೂ ಸುಳ್ಳಾಗದೇ ಇರುವುದಾದರೂ ಹೇಗೆ ಎಂದು ಸಂದೇಹವುಂಟಾಗಿ ಬ್ರಹ್ಮನ ಬಳಿಗೆ ಸಾರಿದರು. ಬ್ರಹ್ಮನು 'ನಿಮ್ಮ ಮಾತು ಸುಳ್ಳಾಗುವುದಿಲ್ಲ. ಕುಮಾರನು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸಲಿ ಈಶ್ವರನ ವಿಶೇಷವಾದ ಅನುಗ್ರಹದಿಂದ ಅವನು ದೀರ್ಘಾಯುವಾಗುತ್ತಾನೆ' ಎಂದು ಪರಿಹಾರವನ್ನು ಸೂಚಿಸಿದನು. ಅನಂತರ ಕುಮಾರನು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸುವಂತೆ ಅವರೇ ಮಾರ್ಗದರ್ಶನವಿತ್ತರು. ಅವನು ತನ್ನ ಅಲ್ಪ ಆಯುಷ್ಯಕ್ಕಾಗಿ ಕಿಂಚಿತ್ತೂ ಭಯಪಡದೇ ಈಶ್ವರನನ್ನು ಕುರಿತು ಘೋರವಾದ ತಪಸ್ಯೆಯನ್ನು ಆಚರಿಸಿದನು. ಮೃತ್ಯುವು ಸಮೀಪಿಸಲು ಸಾಕ್ಷಾತ್ ಯಮಧರ್ಮರಾಜನೇ ಅವನನ್ನು ಕರೆದೊಯ್ಯಲು ಬಂದನು. ಈಶ್ವರನು ಯಮನಿಗೆ ಯುಕ್ತವಾದ ಆದೇಶವನ್ನು ಮಾಡಿ ಕುಮಾರನಿಗೆ ದೀರ್ಘಾಯುಷ್ಯವನ್ನು ಅನುಗ್ರಹಿಸಿದನು. ಮುಂದೆ ಆ ಕುಮಾರನೇ ಮಾರ್ಕಂಡೇಯ ಮಹರ್ಷಿ ಎಂದು ಹೆಸರಾದನು. ಇಂತಹ ಹಲವು ವೃತ್ತಾಂತಗಳು ಈ ಸೃಷ್ಟಿಯಲ್ಲಿರುವ ಸತ್ಯವನ್ನೇ ವ್ಯಕ್ತಪಡಿಸುತ್ತವೆ.

ಪ್ರಾಣೋ ಹಿ ಭೂತಾನಾಮಾಯುಃ – ಪ್ರಾಣವೇ ಜೀವಕೋಟಿಗಳ ಆಯುಷ್ಯ ಎಂದುಶ್ರುತಿ. ಪ್ರಾಣವು ಅಪಾನವೆಂಬ ಇನ್ನೊಂದು ಕವಲನ್ನು ಹೊಂದಿ ಒಂದು ಮೇಲಕ್ಕೂ ಮತ್ತೊಂದು ಕೆಳಗೂ ಸೆಳೆಯುತ್ತಾ

ಉಸಿರಾಟದ ಕ್ರಿಯೆಯನ್ನು ಏರ್ಪಡಿಸಿವೆ. ಇಂತಹ ಉಸಿರಾಟವು ಒಬ್ಬ ಆರೋಗ್ಯವಂತನಾದ ಮನುಷ್ಯನಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಒಂದು ದಿನದಲ್ಲಿ 21600 ಬಾರಿ ನಡೆಯಬೇಕೆಂದು ನಿಯಮವಿದೆ. ಈ ನಿಯಮವನ್ನನುಸರಿಸಿ ದಿನ, ಪಕ್ಷ, ಮಾಸ, ಋತು, ಅಯನ, ವರ್ಷಗಳ ಲೆಕ್ಕದಂತೆ ಆಯುಷ್ಯವೆಂಬುದು ನಿರ್ದಿಷ್ಟ ವರ್ಷಗಳ ಅವಧಿಯುಳ್ಳದ್ದಾಗಿರುತ್ತದೆ. ಇಂತಹ ಉಸಿರಾಟವನ್ನು ಅವಲಂಬಿಸಿ ಚಿತ್ತವು ಕೆಲಸ ಮಾಡುತ್ತಾ ಸುಖದುಃಖಗಳ ಅನುಭವಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದಾಗಿದೆ. ಈ ಉಸಿರಾಟವು ಪ್ರಾಣಾಯಾಮವಿದ್ಯೆಯ ಮೂಲಕ ಲಯಗೊಳ್ಳುವುದಾದರೆ–ಅದರೊಡನೆ ಚಿತ್ತವೃತ್ತಿಗಳೂ ಲಯಗೊಂಡು ಸುಖದುಃಖಗಳ ಅನುಭವದ ಪ್ರಪಂಚದಿಂದ ಹಿಂದೆ ಹೋಗಿ ಸಹಜಾನಂದದಲ್ಲಿ ರಮಿಸುವುದುಂಟು. ಇಂತಹ ಅನುಭವವು ಕಾಲವನ್ನು ಮೀರಿನಿಂತ ಒಂದು ಸ್ಥಿತಿಯಲ್ಲಿ ಲಭಿಸುವುದಾಗಿದೆ. ಈ ಅನುಭವವೂ ಸಹ ಒಬ್ಬನ ಬದುಕಿನ ಅವಧಿಯನ್ನು ಹಿಗ್ಗಿಸಿ ದೀರ್ಘಾಯುಷಿಯನ್ನಾಗಿ ಮಾಡಬಲ್ಲದು. ಪ್ರಾಣವಿದ್ಯೆಯನ್ನು ವಶಪಡಿಸಿಕೊಂಡವನಿಗೆ ಇತರರಂತೆ ಕಾಲಮಾನದ ಪರಿಗಣನೆ ಹೊಂದುವುದಿಲ್ಲ. ಅವನ ಕಾಲಮಾನ ಬೇರೆಯಾಗುತ್ತದೆ. ಇದರ ಹಿನ್ನೆಲೆಯಲ್ಲಿಯೇ ಇನ್ನೊಂದು ರೂಪದಲ್ಲಿ ಪ್ರಾಣವಿದ್ಯೆಯೇ ಆದ ಗಾಯತ್ರಿಯನ್ನು ಅನುಗ್ರಹರೂಪದಲ್ಲಿ ಪಡೆದು ಸಾಧನೆ ಮಾಡುವವನಿಗೂ ಸಹ ಆಯುಷ್ಯದ ವೃದ್ಧಿಯುಂಟಾಗುವುದು ಎಂದು ಹೇಳಲಾಗಿದೆ. ಹೀಗೆ ಅನೇಕ ಮಾರ್ಗಗಳನ್ನು ಅನುಸರಿಸಿ ಮಾಡುವ ಪುರುಷಪ್ರಯತ್ನದಿಂದ ಆಯುಃಪ್ರಮಾಣದ ವೃದ್ಧಿ ಸಂಭವಿಸಬಹುದಾಗಿದೆ.

ಅವನವನ ಸಂಕಲ್ಪದಂತೆಯೂ ಆಯುರ್ವೃದ್ಧಿಯು ಘಟಿಸುವುದು. ಒಂದು ವಲ್ಲರಿಯನ್ನು ಭೂಮಿಯಲ್ಲಿ ಬಿತ್ತಿ ಬೆಳೆಸಬೇಕೆಂದು ಸಂಕಲ್ಪಿಸಿದರೆ ಬೆಳೆಸುವವನ ಇಚ್ಛೆಯಂತೆ, ಕಲ್ಪಿಸುವ ಅನುಕೂಲತೆಗಳಂತೆ ಅದು ವೃದ್ಧಿ ಹೊಂದುವುದು. ಕೇವಲ ಭೂಮಿಯ ಮೇಲೆ ಹರಡಿಕೊಳ್ಳುವಂತೆ ಬೆಳೆಸಬಹುದು. ಚಪ್ಪರವನ್ನು ಹಾಕಿ ಸ್ವಲ್ಪ ಎತ್ತರಕ್ಕೆ ಹರಡುವಂತೆ ಮಾಡಬಹುದು. ಅಥವಾ ಬಹಳ ಎತ್ತರದ ಮರಕ್ಕೆ ಹಬ್ಬಿಸಲೂಬಹುದು. ಹಾಗೊಮ್ಮೆ ಹಬ್ಬಿಸಿದರೆ ಆ ವಲ್ಲರಿಯೂ ಮರದಷ್ಟೇ ಎತ್ತರಕ್ಕೂ ಬೆಳೆಯಬಹುದು. ಅದೇ ರೀತಿ ಪ್ರಾಣವನ್ನು ಪ್ರಾಣಾಯಾಮವಿದ್ಯೆಯಿಂದ ಹಿಂದೆ ಹಿಂದೆ ಲಯಗೊಳಿಸುತ್ತಾ ಅದರ ಮೂಲ ನೆಲೆಯವರೆಗೂ ಎಂದರೆ ಸಹಸ್ರಾರವೆಂಬ ಸ್ಥಾನದವರೆಗೂ ತಲುಪಿಸುವ ಅಭ್ಯಾಸವನ್ನು ರೂಢಿಸಿಕೊಳ್ಳುವುದುಂಟು. ಕೇವಲ ದೇಹದ ಭೌತಿಕವಲಯದಲ್ಲೇ ಪ್ರಧಾನವಾಗಿ ವ್ಯಾಪಾರ ಮಾಡುವ ಪ್ರಾಣವನ್ನು ದೈವಿಕ–ಆಧ್ಯಾತ್ಮಿಕ ಕ್ಷೇತ್ರದವರೆಗೂ ನಿತ್ಯದಲ್ಲಿ ಸಂಚರಿಸುವಂತೆ ಮಾಡಿದಾಗ ಅದನ್ನು ಆಯುರ್ವೃದ್ಧಿಯೆಂದೇ ಭಾವಿಸಬಹುದಾಗಿದೆ. ಹಾಗೆ ಯಾರಿಗೆ ಪ್ರಾಣವು ತನ್ನ ಮೂಲನೆಲೆಯವರೆಗೂ ಹಿಮ್ಮುಖವಾಗಿ ಸರಿಯುತ್ತಾ ಅದನ್ನೇ ಅನುಸರಿಸುವ ಮನಸ್ಸು ಹಿಂದೆ ಸರಿಯುತ್ತಾ ಮನಸಸ್ಸತಿಯಲ್ಲಿ ಲಯಗೊಳ್ಳುವುದೋ ಅವರನ್ನು ಪೂರ್ಣಾಯುಷಿಗಳೆಂದೇ ಭಾವಿಸಬೇಕು. ಅವರು ಬಾಹ್ಯವಾಗಿ ಬದುಕಿದ ಅವಧಿ ಮೂವತ್ತು ವರ್ಷವೋ ನಲವತ್ತು ವರ್ಷವೋ ಆಗಿರಬಹುದು. ಆದರೆ ಅವರ ಬದುಕು ಸಾರ್ಥಕವಾದ ಬದುಕಾಗಿದೆ. ಪ್ರಾಣದ ಗತಿಯ ಪೂರ್ಣವಾದ ಉಪಯೋಗವನ್ನು ಪಡೆದ ಅವರು ಪೂರ್ಣಾಯುಷಿಗಳೇ.

ಹೀಗೆ ಆಯುಷ್ಯವು ಪುರುಷಪ್ರಯತ್ನದಿಂದ ವೃದ್ಧಿಯನ್ನು ಹೊಂದುವುದು ಸಿದ್ಧವಾದರೂ ಅದು ಆಯುರ್ವಿದ್ಯೆಯನ್ನೇ ವಶಪಡಿಸಿಕೊಳ್ಳುವುದರ ಮೂಲಕ ಸಾಧ್ಯವೇ ವಿನಹ ಕೇವಲ ಮಾನುಷವಾದ ಬಲಾತ್ಕಾರದಿಂದಲ್ಲ. ಇದೇ ನಿಯಮವನ್ನು ಆಯುಷ್ಯದ ಕ್ಷಯದ ಬಗ್ಗೆಯೂ ಚಿಂತಿಸಬೇಕು. ಒಬ್ಬನ ಆಯುಷ್ಯವನ್ನು ಇನ್ನೊಬ್ಬನು ಹರಣ ಮಾಡಬಹುದೇ? ಸಾಮಾನ್ಯವಾಗಿ ಕೇವಲ ಒಂದು ಭೌತಿಕವಾದ ಬಲಾತ್ಕಾರದಿಂದ ಹರಣ ಮಾಡಲು ಸಾಧ್ಯವಾಗದು. ಹುಟ್ಟುವಾಗ ಯಾವ ಕರ್ಮಗಳು ಸುಖ–ದುಃಖವನ್ನುಂಟುಮಾಡುವ ಸಂಕಲ್ಪದಿಂದ ಪ್ರವೃತ್ತವಾಗಿವೆಯೋ ಅವುಗಳು ಅವನನ್ನು ಬಗೆಬಗೆಯಾಗಿ ರಕ್ಷಿಸಿಕೊಂಡು ಆ ಫಲಗಳನ್ನು ಕೊಡುವವರೆಗೂ ಕಾಪಾಡುತ್ತವೆ. ಅದನ್ನೇ ಒಂದು ಮಾತಿನಲ್ಲಿ–

**ವನೇ ರಣೇ ಶತ್ರುಜಲಾಗ್ನಿಮಧ್ಯೇ ಮಹಾರ್ಣವೇ ಪರ್ವತಮಸ್ತಕೇ ವಾ ।**
**ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ ರಕ್ಷನ್ತಿ ಪುಣ್ಯಾನಿ ಪುರಾಕೃತಾನಿ ॥**

'ಕಾಡಿನಲ್ಲೂ ಯುದ್ಧರಂಗದಲ್ಲೂ ಜಲಾಗ್ನಿಗಳಮಧ್ಯದಲ್ಲೂ ಗಂಭೀರವಾದ ಸಮುದ್ರದಲ್ಲೂ ಪರ್ವತದ ನೆತ್ತಿಯಲ್ಲೂ ನಿದ್ರೆಯಲ್ಲಿದ್ದಾಗಲೂ ಪ್ರಮಾದಕ್ಕೆ ಒಳಗಾದಾಗಲೂ ವಿಷಮಸ್ಥಿತಿಯಲ್ಲಿದ್ದಾಗಲೂ ಹಿಂದೆ ಮಾಡಿದ ಪುಣ್ಯಗಳು ಕಾಪಾಡುತ್ತವೆ' ಎಂದು ನುಡಿದಿದ್ದಾರೆ. ಇದು ಸೃಷ್ಟಿಯಲ್ಲಿರುವ ಒಂದು ಸಾಮಾನ್ಯನಿಯಮ. ಕೆಲವೊಮ್ಮೆ ಅನುಭವಿಸಬೇಕಾದ ಪುಣ್ಯಪಾಪಗಳು ಮುಕ್ತಾಯವಾಗಿದ್ದು ಮೃತ್ಯುಸನ್ನಿಹಿತವಾಗಿದ್ದಾಗ ಯಾರೋ ಒಬ್ಬನು ನಿಮಿತ್ತವಾಗಿ ಇನ್ನೊಬ್ಬನನ್ನು ಕೊಲ್ಲಬಹುದು. ಇದು ಹೊರದೃಷ್ಟಿಗೆ ಒಬ್ಬನ ಜೀವಿತವು ಇನ್ನೊಬ್ಬನ ಅಧೀನದಲ್ಲಿದೆ ಎಂದು ತೋರುವಂತಿದ್ದರೂ ಈ ಘಟನೆಯ ಹಿನ್ನೆಲೆಯನ್ನು ಅರಿಯುವ ವಿದ್ಯಾಚಕ್ಷುಸ್ಸುಳ್ಳವನಿಗೆ ಯಾವುದು ಯಾವಾಗ ಆಗಬೇಕೋ ಅದು ಆಗ ಆಗಿಯೇ ಆಗುತ್ತದೆ ಎಂಬ ನಿಲುವಿಗೇ ತಲುಪಿಸುತ್ತದೆ. ಅದನ್ನೇ ಈ ಹಿಂದೆ ಘಟ್ಟಿಕುಟ್ಟೀಪ್ರಭಾತನ್ಯಾಯವೆಂದು ತಿಳಿಸಿದ್ದಾಗಿದೆ. ಒಬ್ಬ ರಾಜಕುಮಾರನು ತನ್ನ ಕೈಯಲ್ಲಿ ಒಂದು ಹಕ್ಕಿ (ಪಾರಿವಾಳ)ಯನ್ನು ಹಿಡಿದುಕೊಂಡು ಜ್ಯೋತಿಷ್ಕನಲ್ಲಿ ಬಂದು 'ಇದರ ಆಯುಷ್ಯವೆಷ್ಟಿದೆ ಹೇಳು!' ಎಂದು ಪ್ರಶ್ನಿಸಿದ. 'ಆಯುಷ್ಯವಿನ್ನೂ ಬಾಕಿಯಿದೆ' ಎಂದರೆ ಆ ಕೂಡಲೇ ಅದರ ಕತ್ತು ಹಿಸುಕಿ ಕೊಂದು ಬಿಡುತ್ತಾನೆ. 'ಆಯುಷ್ಯ ಮುಗಿದಿದೆ' ಎಂದರೆ ಅದನ್ನು ಉಳಿಸಿ ಕಾಪಾಡುತ್ತಾನೆ. ಆಯುಷ್ಯವನ್ನು ಇಡುವುದೂ ತೆಗೆಯುವುದೂ ಅವನ ಕರವಶವಾಗಿರುವಾಗ ಇಲ್ಲಿ ಗ್ರಹಚಾರವಾಗಲೀ ವಿಧಿಯಾಗಲೀ ಏನು ಮಾಡೀತೆಂದು ಒಂದು ಆಕ್ಷೇಪವನ್ನು ಸ್ಮರಿಸಿಕೊಂಡಿದ್ದೇವೆ. ಇವೆಲ್ಲ ಆಕ್ಷೇಪಗಳೂ ಬುದ್ಧಿಗೆ ಚೋದ್ಯವನ್ನುಂಟುಮಾಡುವಂತಿದ್ದರೂ ಹಿನ್ನೆಲೆಯಲ್ಲಿ 'ಭವಿತವ್ಯಂ ಭವತ್ಯೇವ' ಎಂಬ ಸತ್ಯವನ್ನೇ ಸಾರುತ್ತವೆ. ಉದಾಹರಣೆಗೆ ಅದೇ ಕಥೆಯನ್ನೇ ಮುಂದುವರಿಸಿ ಹೇಳುವುದುಂಟು. ಜ್ಯೋತಿಷ್ಕನು ಆ ಪಾರಿವಾಳದ ಆಯುಷ್ಯದ ಬಗ್ಗೆ ತನ್ನ ವಿದ್ಯಾಸಾಮರ್ಥ್ಯದಿಂದ ಪರಿಶೀಲಿಸಿ ಅದಕ್ಕೆ ಆಯುಷ್ಯ ಮುಗಿದಿದೆ. ಇನ್ನೇನು ಕೆಲವೇ ಕ್ಷಣಗಳಲ್ಲೇ ಅದು ಮೃತ್ಯುವಿಗೆ ತುತ್ತಾಗುವುದೆಂದು ಹೇಳಿದನಂತೆ. ಜ್ಯೋತಿಷ್ಕನ ಮಾತನ್ನು ಅಪಹಾಸ ಮಾಡುತ್ತಿರುವ ತತ್‌ಕ್ಷಣದಲ್ಲೇ ಅವನ ತೋಳ ಬಗಲಿನಲ್ಲಿ ಸೇರಿದ್ದ ಇರುವೆಯೊಂದು ಕಚ್ಚಿತು. ಅವನು ಕ್ಷೋಭೆಯಿಂದ ಪಾರಿವಾಳವನ್ನು ಕೈಬಿಟ್ಟ. ಹತ್ತಿರದಲ್ಲೇ ಸ್ವಲ್ಪಹೊತ್ತಿನಿಂದ ಅವನ ಹಸ್ತದಲ್ಲಿದ್ದ ಪಾರಿವಾಳವನ್ನೇ ವೀಕ್ಷಿಸುತ್ತಿದ್ದ ಗಿಡುಗವೊಂದು ಅತ್ಯಂತ ವೇಗವಾಗಿ ಆಕ್ರಮಿಸಿ ಕ್ಷಣದಲ್ಲೇ ಕಬಳಿಸಿತು. ಅಪಾರವಾದ ತನ್ನ ಸಾಮರ್ಥ್ಯದ ಬಗ್ಗೆ ಅಭಿಮಾನ ಗ್ರಸ್ತನಾಗಿದ್ದ ರಾಜಕುಮಾರ ಮೂಕವಿಸ್ಮಿತನಾದ ಎಂದು.

# ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞದಲ್ಲಿ ಭಾಗವಹಿಸುವವರಿಗೆ ಸೂಚನೆಗಳು




## ಜಪಮಂತ್ರ: ಶ್ರೀರಾಮ ಜಯರಾಮ ಜಯಜಯ ರಾಮ

- ಈ ಜಪಯಜ್ಞವು ಲೋಕಕಲ್ಯಾಣದ ಸಂಕಲ್ಪದಲ್ಲಿ ನಡೆಯಲಿದೆ.
- ರಾಜ್ಯದಾದ್ಯಂತ ದಿನಾಂಕ 24.10.2023ರ ವಿಜಯದಶಮಿಯಂದು ಪ್ರಾರಂಭಿಸಲಾಗುವುದು.
- ಜಪ ಆರಂಭದ ದಿನ ಅನುಕೂಲ ಇರುವವರೆಲ್ಲ ಹತ್ತಿರದ ಶ್ರೀ ರಾಮದೇವಾಲಯ/ ಆಂಜನೇಯ ದೇವಾಲಯ/ದೇವಾಲಯಗಳಲ್ಲಿ, ಹಿಂದೂ ಶ್ರದ್ಧಾ ಕೇಂದ್ರಗಳಲ್ಲಿ ಪ್ರಾರ್ಥಿಸಿ, ಜಪವನ್ನು ಆರಂಭಿಸುವುದು.
- ದೇವಾಲಯಕ್ಕೆ ಆಗಮಿಸಲು ಸಾಧ್ಯವಿಲ್ಲದವರು ಸಂಘಟಕರ ಮೂಲಕ ಹೆಸರು ನೋಂದಾಯಿಸಿ ತಮ್ಮ ಮನೆಯಲ್ಲಿಯೇ ಜಪವನ್ನು ಆರಂಭಿಸಬಹುದು.
- ಪ್ರತಿದಿನದ ಜಪವನ್ನು ತಮ್ಮ ತಮ್ಮ ಮನೆಗಳಲ್ಲಿಯೇ ಮಾಡಬಹುದು. ಒಂದು ಮನೆಯಿಂದ ಎಷ್ಟು ಜನ ಬೇಕಾದರೂ ಜಪ ಮಾಡಬಹುದು.
- ಸ್ತ್ರೀ, ಪುರುಷರೆಂಬ ಭೇದವಿಲ್ಲದೆ ಯಾವುದೇ ಜಾತಿ–ಮತ–ಲಿಂಗ–ವಯಸ್ಸಿನವರು ಜಪ ಮಾಡಬಹುದು.
- ಜಪದಲ್ಲಿ ಭಾವಹಿಸುವವರು ಪ್ರತಿನಿತ್ಯ ಕನಿಷ್ಠ 108 ಜಪ ಮಾಡುವುದು ಉತ್ತಮ.
- ದಿನದ ಯಾವುದೇ ಸಮಯದಲ್ಲಿ ಜಪ ಮಾಡಬಹುದು.
- ಪ್ರತಿನಿತ್ಯ ಜಪ ಮಾಡಿದ ಸಂಖ್ಯೆಯನ್ನು ಬರೆದಿಟ್ಟುಕೊಂಡು ಕೊನೆಯಲ್ಲಿ ಒಟ್ಟಿಗೆ ಸಂಘಟಕರಿಗೆ ನೀಡುವುದು.
- ಅಯೋಧ್ಯೆಯಲ್ಲಿ ಶ್ರೀರಾಮದೇವರ ಪುನಃ ಪ್ರತಿಷ್ಠೆಯ ದಿನದಂದು ಜಿಲ್ಲಾ, ತಾಲೂಕಿನಲ್ಲಿ ನಡೆಯುವ, ರಾಮತಾರಕ ಹವನದಲ್ಲಿ ಭಾಗವಹಿಸಿ, ಜಪ ಸಮರ್ಪಣೆಗೊಳಿಸುವುದು.

**ಶ್ರೀರಾಮ ತಾರಕ ಮಹಾಯಾಗ ಹಾಗೂ**
**ಶತಕೋಟಿ ಶ್ರೀರಾಮತಾರಕ ಜಪ ಮಹಾಯಜ್ಞದ ಪ್ರಧಾನ ಸಂಚಾಲಕರು**



ಶ್ರೀ ಅಶೋಕ್ ಹಾರನಹಳ್ಳಿ
ಅಧ್ಯಕ್ಷರು



ಡಾ. ಬಿ.ಎಸ್. ರಾಘವೇಂದ್ರ ಭಟ್
ಉಪಾಧ್ಯಕ್ಷರು
9741025098



ಡಾ. ಭಾನುಪ್ರಕಾಶ್ ಶರ್ಮ
ಉಪಾಧ್ಯಕ್ಷರು
9980000696



ಹರಿಪ್ರಸಾದ್ ಪೆರಿಯಾಪು
ಕಾರ್ಯ ಕಾರಿ ಸಮಿತಿ ಸದಸ್ಯರು
8762524599

ಶ್ರೀಧರಮೂರ್ತಿ ಪ್ರಧಾನಕಾರ್ಯದರ್ಶಿ,

ವೆಂಕಟೇಶನಾಯಕ್ ಖಜಾಂಚಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು**

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಅಯೋಧ್ಯೆಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ

ಶತಕೋಟಿ
ರಾಮತಾರಕ ನಾಮಜಪ

## ಮಹಾಯಜ್ಞ

ಶ್ರೀರಾಮ ತಾರಕ

## ಮಹಾಯಾಗ



ದಿನಾಂಕ: **24** ಅಕ್ಟೋಬರ್ **2023**

ವಿಜಯದಶಮಿಯಿಂದ ಪ್ರಾರಂಭ



**ಮನೆ ಮನೆಯಲ್ಲೂ ರಾಮನಾಮ,**
**ಮನ ಮನದಲ್ಲೂ ರಾಮನಾಮ**

ಆತ್ಮೀಯರೇ,

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ **‘ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞ’**ವನ್ನು ದಿನಾಂಕ 24.10.2023 (ಮಂಗಳವಾರ) ವಿಜಯದಶಮಿಯಂದು ಪ್ರಾರಂಭಿಸಿ, ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮ ಚಂದ್ರನ ಪ್ರತಿಷ್ಠಾಪನಾ ದಿನದಂದು ಕರ್ನಾಟಕ ರಾಜ್ಯದ ಜಿಲ್ಲಾ ಮತ್ತು ತಾಲೂಕಿನಲ್ಲಿ **‘ಶ್ರೀ ರಾಮತಾರಕ ಮಹಾಯಾಗ’**ವನ್ನು ನಡೆಸಿ ಸಂಪನ್ನಗೊಳಿಸಲಾಗುವುದು. ಲೋಕಕಲ್ಯಾಣಾರ್ಥವಾಗಿ ನಡೆಯುವ ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಿಂದೂ ಸನಾತನ ಧರ್ಮದ ಆಸ್ತಿಕ ರಾಮ ಭಕ್ತರು ಪ್ರತಿನಿತ್ಯವೂ **‘ಶ್ರೀರಾಮ ಜಯರಾಮ ಜಯಜಯ ರಾಮ’** ಎಂಬ ಮಹಾಮಂತ್ರವನ್ನು ತಮ್ಮ ಮನೆಯಲ್ಲಿ ಜಪಿಸಿ, ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞ ಮತ್ತು ಶ್ರೀ ರಾಮತಾರಕ ಮಹಾಯಾಗಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ದೇಶ ಸುಭಿಕ್ಷವಾಗಿರಲೆಂದು ಪ್ರಾರ್ಥಿಸಿ, ಪ್ರಭು ಶ್ರೀರಾಮಚಂದ್ರನ ಕೃಪೆಗೆ ಪಾತ್ರರಾಗಬೇಕಾಗಿ ಕೇಳಿಕೊಳ್ಳುತ್ತೇವೆ.

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 31-10-2023 Date of Publishing 30-10-2023

ಶುಭಾಶಯಗಳು
ಡಾ|| ಉದಯ್ ಬಿ. ಗರುಡಾಚಾರ್
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar
MLA, Chickpet Assembly Constituency
/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R) "Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070. And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar